

ಅಖಿಲ ಭಾರತ ಪತ್ರಿಕೆ

ಡಿಸೆಂಬರ್ 2023

# ಶಿವನ ಸಾರೂಪ್ಯಗಳು

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ಪ್ರಜ್ಞೆಯ ಸ್ವರೂಪದಲ್ಲಿ ಶಿವ

**– ಪುಟ್ಟು ಕುಲಕರ್ಣಿ**

**(ಪುಟ 13)**

**ಅಖಿಲ ಭಾರತ ಪತ್ರಿಕೆ**

**ಡಿಸೆಂಬರ್ 2023**

ಸಂಪುಟ: 33 ಸಂಚಿಕೆ: 12


**ಪರಿವಿಡಿ**

# ಶಿವನ ಸಾರೂಪ್ಯಗಳು

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಶಿವನ ಹಲವು ಆಯಾಮಗಳು** 3
ಅನು: ಪುಟ್ಟು ಕುಲಕರ್ಣಿ

**ಮಹಾದೇವ ಮತ್ತು ಸತಿಯ ದೃಷ್ಟಾಂತಬೋಧೆ** 18
ಅನು: ನಾಗಜ್ಯೋತಿ ಮಾನ್ವಿ

**ಪರಮಾತ್ಮನಾಗಿ ಶಿವ** 22
ಅನು: ಡಾ॥ ಮಹಾದೇವ ಸಕ್ರಿ
ಅನು: ಕಿಶೋರಕುಮಾರ

**ಶಿವ ಮತ್ತು ನವೀನ ಸೃಷ್ಟಿ** 44
ಅನು: ವಿಶಾಲಾಕ್ಷೀ ಸತ್ಯನ್

**ಶ್ರೀ ಅರವಿಂದರ ‘ಗೀತಾ ಪ್ರಬಂಧಗಳು’** 50
ಅನು: ಜಾನ್ವಿ

**ತ್ರಾಟಕ ಸೂರ್ಯ** 57
– ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 76



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಶಿವ ಎನ್ನುವ ಶಬ್ದವೇ ತಕ್ಷಣದಲ್ಲಿಯೇ ಶ್ರದ್ಧಾಪೂರ್ವಕವಾಗಿರುವ ವಿಸ್ಮಯತೆಯನ್ನು ಮತ್ತು ಸಾಮರ್ಥ್ಯವನ್ನು ಆಹ್ವಾನಿಸಿಕೊಳ್ಳುವಂತೆ ಮಾಡುತ್ತದೆ. ಪರೋಪಕಾರ ಮತ್ತು ಕರುಣೆಯನ್ನು ರೂಪಿಸುತ್ತದೆ. ಅವನ ತಾಂಡವ ನೃತ್ಯವು ತೋಷಪೂರ್ಣವಾಗಿಯೇ ಮತ್ತೆ ನವನವೀನ ಸೃಷ್ಟಿಗೆ ಪಥ ರೂಪಿಸುತ್ತಿದೆ. ಈ ಸಂಚಿಕೆಯಲ್ಲಿ ಶಿವನ ಹಲವು ಆಯಾಮಗಳ ಮತ್ತು ಅಭಿವಕ್ತಿಗಳ ಸ್ವರೂಪಗಳ ಕುರಿತು ಚಿಂತನವನ್ನು ರೂಪಿಸಲಾಗುತ್ತಿದೆ. ಪರಮ ಪರಾಕ್ರಮಿ ಮತ್ತು ದಯಾಮಯ ತಪಸ್ವಿಯಾಗಿರುವ ಶಿವನ ಸ್ವರೂಪಗಳ ಬಗೆಗೆ ವಿವರಗಳನ್ನು ರೂಪಿಸುತ್ತಿದೆ. (ಎಐಎಮ್)

# ಶಿವನ ಹಲವು ಆಯಾಮಗಳು

**– ಅನು: ಪುಟ್ಟು ಕುಲಕರ್ಣಿ**

**ತಪಸ್ವಿನ್**

ಪರಮೋಚ್ಚ ಶೀತ ಪರ್ವತದ ಶ್ರೇಣಿ ಶಿಖರಾಗ್ರಗಳಲಿ ಇಂತು
ಘನಶಾಂತಪೂರ್ಣ ಮುಖದಮಂಡಲವು ತಾ ಸ್ಥಿತಗೊಂಡುದಿಂತು,
ಭವ್ಯಾತಿಭವ್ಯ ಜೊತೆಗಚಲ ಮಹಿಮೆ; ಪರಿಶುಭ್ರ ಧವಳ ತೇಜ
ಜೊತೆಗಿದೋ ತೀಕ್ಷ್ಣ ತೀಕ್ಷ್ಣಾತಿ ತೀವ್ರವದರ ರೇಷೆಗಳ ಓಜ

ಅಪರಿಮೇಯದಾ ಹಿಮದ–ರೇಷೆಗಳ ಜೊತೆಗಲ್ಲಿ ತುಲನೆಗೊಳಲು
ಗಗನಮಂಡಳವು ತುಂಡರಿಸಿಕೊಂಡು, ಅದಮ್ಯತಾ ದೃಷ್ಟಗೊಳಲು.

ಜಡೆಗಟ್ಟಿಕೊಂಡ ಮಂಡಳದ ರೂಹು ಪರ್ವತವು ಅದರ ಮೇಲೆ
ಸಾವಿರದ ತಾವ ಜೊತೆಗಿದೋ ಏಕ ಏಕೈಕ ಪರಮ ದೇವ
ಕಲ್ಪವದು ತಾನು ಕುಂಡಲದಲೀಗ ಮಂಡಲವ ರಚಿಸಿ ಇಂತು
ಏಕಾಂತ ಘನದ ಸಾಂದ್ರದೊಲು ತಾನು ಸಂಚಲನವಿರದ ವಾಯು
ಆವರಣವೀಗ, ಊರ್ಧ್ವದಲಿ ಮತ್ತೆ ಅನಂತಾನಂತವಾಗಿ ವ್ಯಾಪ್ತ.

ಚಂದ್ರರೇಖೆಯದು ತಾನೊಂದು ಈಗ ಹಣೆಯಲ್ಲಿ ಕಾಂತಿಗೊಂಡು
ನೀಲಮಯ ಜೊತೆಗೆ ಪೇಲವದ ರೂಪು ಸ್ಥಿತಗೊಂಡುದಿಂತು,
ಆ ದೂರದೂರದುದ್ದಕೂ ಬೆರಳ ಚಾಚುತಲಿ ಬೆಳಕು ಚಿಮ್ಮಿ
ನಿಶ್ಶೂನ್ಯವನ್ನು ಮಿನುಮಿನುಗುವಂತೆ ಕಾಂತಿಮಯಗೊಳಿಸಿ ಹೊಮ್ಮಿ.

ದೃಢತೆಯಲಿ ಮತ್ತೆ ಪೌರುಷದ ಕವಚ ಹೊದೆದಿರುವ ಶಾಂತಿಯದುವು
ಮಾಬಲದಿ ಇಲ್ಲಿ ನಿರ್ವಿಕಾರದಲಿ ಮುಖಕವಚ ತೋರಿ ಇದುವು!

ಆದರಿದೋ ಈಗ ಆ ಅನಂತತೆಯ ಕೆಲವೊಂದು ಅಂಶ ತಾನು
ತಾನುದಿತಗೊಂಡು ಆಗಮಸಿತೀಗ ಇಲ್ಲಿದೋ ಸ್ಥಾಪಗೊಳಲು
ಸುವ್ಯಾಪ್ತವಾಗಿ ಬೃಹದ್ ಆವರಣವಾಗಿರುವ ಹಿಮದ ರಾಶಿ–
ರಾಶಿಗಳ ಮೇಲೆ ಜೊತೆಗಿದೋ ಅಚಲ ಆ ದಿವ್ಯ ಮುಖದ ಕಾಂತಿ

ಕಂಪನವು ಒಂದು ಜೊತೆಗೆ ಕಡುಗೆಂಪು ಜ್ವಾಲೆ ವರ್ಣ,
ಸುವ್ಯಾಪ್ತವಿರುವ ಅವಕಾಶದೊಳಗೆ ಅಗ್ನಿ–ಬೀಜ ತಾಣ,

ಬೆಳಕ–ಕದಿರುಗಳ–ಕೊಡುಗೆಗಳು ತಾವು ಪ್ರತ್ಯಕ್ಷಗೊಳಿಸಿ ಬೃಹದ್ರೂಪ,
ಹೃದಯದಲಿ ಅವಿತ ಆ ಗೂಢ ಗವಸ ತರಿಯುತಲಿ ಕಳೆದು ತಾಪ;
ಆ ವಜ್ರ–ಹೃದಯದೊಳಗೀಗ ಜ್ವಾಲೆಗಳು ನಿರ್ವಾಣಗೊಳಿಸಿತೀಗ,
ಜೀವಚೈತನ್ಯ ಮೂಲ ತಾನದುವು, ಸ್ವರ್ಣಶಿಲ್ಪಿಯವನೀಗ.

ನಿಶ್ಶಬ್ದವಾಗಿತ್ತು ತಾನಡಗಿಕೊಂಡು ಜೊತೆ ಜ್ವಲಿತ ಮೂಲದೊಳಗೆ
ಈ ಲೋಕಗಳನು ರೂಪುಗೊಳಿಸುತ್ತ ಜೊತೆ ತಾರೆ–ನೃತ್ಯದೊಳಗೆ;
ಚಿಮ್ಮಿತ್ತು ಜೀವ, ಸ್ವಯಂಪೂರ್ಣ ತಲ್ಲೀನ ಅಚೇತನವು ತಾನು,
ಪ್ರೇಮಪೂರಿತದಿ, ಪ್ರಜ್ವಲನಪೂರ್ಣ ಬೀಜ ತಾ ಯೋಗಜ್ವಾಲೆಯಿಂದ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/548–49**

## ಅಶುತೋಷ ಮತ್ತು ರುದ್ರ

**(ಸಾಕ್ಷಾತ್ಕಾರ)**

ಅಮರತ್ವವಿದುವು, ಅಚಲತೆಯು, ಏಕ, ನಿಶ್ಶಬ್ದ, ಮಹಿಮೆ–ವರ್ಣ
ಘನಶಾಂತವೀಗ ಪೀಠಸ್ಥಗೊಂಡು, ಉಚಿತಾನುಚಿತಗಳಿಗೆ ಪೂರ್ಣ
ಪರಮನೇಕೈಕದೇವ ತಾ ಅಚಲ ನಿರ್ಮಾಯ ಪ್ರೇಮಪೂರ್ಣ.
ನಾ ದೃಷ್ಟಗೊಂಡೆ ನಾ ದೃಷ್ಟಗೊಂಡೆ ಅಲ್ಲಿರುವ ಶಿವನ ಕಂಡು,
ಲೋಕಪಕ್ಷಿಯೊಲು ಶಾಂತದೊಡಸ್ಪಂದ ಸುಪ್ರತೀಕವಾಗಿ ಇಂದು,
ರೆಕ್ಕೆಗಳ ತೆಕ್ಕೆ ಕಕ್ಕುಲಾತಿಯಲಿ ರಕ್ಷಿಸುವ ತನ್ನ ವಲಯ

ಆ ಬಹಿಷ್ಕೃತರು ನಿಷ್ಕಾಸಗೊಂಡು ಆಗಮಿಸಿಕೊಂಡರಿತ್ತ
ಆ ಪಾಪಭರಿತ ಸಮುದಾಯವೆಲ್ಲ ಸಂದಣಿಸಿ ನಿಂದರಿತ್ತ,
ಆ ಶಾಂತ ಚಿರದ ಕಾಂತಿಜ್ವಾಲೆಯನು ಆವರಿಸಿಕೊಳುತ ನಿತ್ಯ

ಇನ್ನಿತರ ಕಠಿಣ ದೈವಗಳಾ ಮೂಲದಿಂದೀಗ ದೈತ್ಯ ವೃಂದ
ಅವುಗಳುಜ್ವಲದ ಆವಾಸದಿಂದ ಪರಿತ್ಯಾಜಗೊಂಡು ಬಂದು,
ಮರೆಯಲ್ಲಿ ಇದ್ದ ರಕ್ಷಣೆಯ ತಾಣವನ್ನೀಗ ಸುತ್ತುವರೆದು

ಸಂದಣಿಸಿ ನಿಂದು ಆವರಿಸಿಕೊಳುತ ಆಕ್ರಮಿಸಿಕೊಂಡು ಮೆರೆದು
ಈ ವನ್ಯ ಜೊತೆಗೆ ವಿಕಟಾತಿಥೇಯದೆಡೆ ಕರುಣೆಯನ್ನು ತೋರಿ
ಅವುಗಳಿಗೆ ಈಗ ಸಾವರಿಸಿಕೊಳಲು ಮುದಹಸಿತವನ್ನು ಬೀರಿ.

ಆಶ್ರಯವೇ ಇರದ, ಅತಿದುಃಖಭರಿತ, ಪ್ರೇಮವನು ಕಾಣದಿರುವ
ಅವರೆಲ್ಲರಿೀಗ, ದುರುಳರಾ ಜೊತೆಗೆ ಸಜ್ಜನರ ಜೊತೆಗೆ ಚಲನ
ಇದು ಪ್ರಕೃತಿ ನಿಯತಿ ಸಹಜಾತಿಸಹಜ ಇದು ಅವಗೆ ನಿತ್ಯದಲ್ಲಿ

ಆಶ್ರಯವನಿತ್ತ ಆ ಮಧುರಭಾವದೊಡ ಸ್ಪಂದ ಪಡೆವರಿಲ್ಲಿ
ಅವರ ಒಡೆಯನಾ ಪಾದಗಳೆಡೆಯಲ್ಲಿ ದೃಷ್ಟಿಸುತ ತಮ್ಮ ಸ್ವರ್ಗ

ಪರಿವರ್ತಗೊಂಡು ಆ ದೃಷ್ಟಿಯಿಂದು ಅದು ನಿಂತ ನೆಲೆಯಲೀಗ
ಆತಂಕಪೂರ್ಣ ಸೆಳೆಮಿಂಚು ಕೆಂಪು, ಅದು ರಕ್ತವಾಗಿ ಈಗ,
ಸಾಮರ್ಥ್ಯಪೂರ್ಣ ಅವನ ಬಲಬಾಹುದಲ್ಲಿರುವ ಆ ತ್ರಿಶೂಲ
ಈಗಿದೋ ಮತ್ತೆ ಮೇಲೆತ್ತಿ ಕುಕ್ಕಿ ಕುಲುಕಾಟಗೊಳಿಸುತಿರಲು

ಗಡಗಡನೆ ನಡುಗಿ ಭೂಕಂಪವೆದ್ದು ತಾಂಡವದಿ ತೊಡಗಿಕೊಳುತ
ಗೋಲಾರ್ಧವೆಲ್ಲ ಆವರಿಸಿಕೊಳುತ, ತಾ ಧ್ವಂಸ ಪಿಡುಗು ತುಂಬಿ,
ಸ್ವರ್ಗದಿಂದೀಚೆ ಧಾರೆಧಾರೆಯಲಿ ಧೂಮ್ಮಿಕ್ಕಿಕೊಳುತ ಹೀಗೆ

ವಿಪ್ಲವಗಳೆಲ್ಲ ತಾ ಕ್ಷಿಪ್ರವೇಗದಲಿ ಅಸ್ಪಷ್ಟ ಭಾವ ತುಂಬಿ
ನೆರೆಹೊರೆಯಲೀಗ ಸಹವಾಸ ಬಯಸಿ ಆವರಿಸಿಕೊಂಡ ಬಿಂಬ
ರೋಗ–ರುಜಿನಗಳು ಸಾಂದ್ರಗೊಂಡೀಗ ಜಯಭೇರಿ ನಡೆದುದೀಗ.

ಈ ಬೆಟ್ಟಗಳನು ತಾ ಅದುಮಲೆಂದು ತವ ಪಾದ ಮುಂದುವರೆದು
ಆ ಜ್ವಲನಪೂರ್ಣ ಅವನ ಅಕ್ಷಿಗಳ ಕಾಣುತಲಿ ಭೀತಗೊಂಡು
ನಿಶ್ಚೇತಗೊಂಡ ಮನುಜರಾ ಹೃದಯಗಳು ವಿಹ್ವಲತೆಯಲ್ಲಿ ಇಂದು
ಪಾಪ ಕಾರ್ಯಗಳ ಭೀತಿ ಶಂಕೆಯಲಿ ಶಿಕ್ಷೆಯನು ನೆನೆದುಕೊಂಡು

ಅವರ ಆ ರೋದ ಆಕ್ರಂದವೀಗ ತಾರಕದ ಮೇರೆ ಮೀರಿ,
“ಚಂಡಮಾರುತದ ಅಬ್ಬರದ ತುಂಬ ಘನತಮದ ಮೋಡಗಳನು
ಆವರಣಗೊಳಿಸಿ ದಿಕ್ಕೆಡಿಸುತಿರುವ ಅವುಗಳಾ ಒಡೆಯ ನೀನು
ದಯೆಯಿರಲಿ ರುದ್ರ ದಯೆಯಿರಲಿ! ನಮಗೀಗ ರಕ್ಷೆ ನೀನು

ನಿನ್ನ ಮಂಗಳದ ಇತರ ರೂಪಗಳ ಶಿವಮಯವ ನಮಗೆ ನೀಡು
ನಿನ್ನ ಭೀಕರದ ರೋಷ ಜೊತೆ ಕ್ರೂರ ಗಾಳಿಯವತಾರ ಬೇಡ ನೋಡು”

ಸಾಮರ್ಥ್ಯಪೂರ್ಣ ಆ ಪರಮ, ಮತ್ತೆ ಪ್ರೇಮದೇವತೆಯು ಏಕ;
ಯಾರನಪ್ಪಳಿಸಿ ಪೀಡೆ ಕೊಡುತಿಹನೋ ಅವರನೇ ಅರಸಿ ಅರಸಿ
ಪ್ರೇಮದಾಧಿಕ್ಯದಲ್ಲವರ ಮತ್ತೆ ಸಂತೈಸೆ ರಕ್ಷೆ ಇರಿಸಿ.

ಏಕಾಂಗಿಯಾಗಿ ಯಾರೀಗ ಮತ್ತೆ ಶಿಖರವನು ತಲುಪಲಿಹರೋ
ಭಯ–ದುಃಖಗಳನು ಮೀರುತ್ತ ಸತತ ಆರೋಹಗೊಳುತಲಿಹರೋ
ಸೋಲು–ಸರಣಿಗಳಿಗಂಜದಂತೀಗ ಸಾವಿನಾ ಭಯವ ಮೀರಿ
ತಮದಿಂದ ಪೂರ್ಣ ಮುಕ್ತಿಯನು ಹೊಂದಿ ಬಿಡುಗಡೆಯ ಭಾಗ್ಯ ಪಡೆದು

ಉತ್ತರಾಧಿಕಾರತ್ವದಲಿ ಖಚಿತ, ಕಾಣುವನು ಏಕವನ್ನು
ಭಯ ದೂರಗೊಳಿಸೆ ಪ್ರೇಮದಾ ಗವಸು, ಬಿರುಗಾಳಿ ಮರೆಸೆ ಶಾಂತಿ.

ಮನುಕುಲದ ಮಿತ್ರ ಸಹಕರಿಸುತಿರುವ ಅವನೀಗ ತಿಳಿವವರೆಗೆ
ಜೀವ–ಜೀವನದ ಜೊತೆಗೆ ಮರಣದಾ ನಿಯತಿಯನು ಅರಿವವರೆಗೆ.
ಆಗಿದೋ ಚಣದಿ, ಮೃತ್ಯುವಶವರ್ತ ಉಸಿರಿಂದ ಮುಕ್ತಗೊಳುವ

ಅಮರತ್ವದೆದೆಯ ಆ ಲೀಲೆಯೊಳಗೆ ತೋಷ–ಸ್ಪಂದವನು ಪಡೆವ;
ಅವಗೀಗ ಲಭ್ಯ ಆ ಶಾಂತಿ ತಾನು ಜೊತೆಗಚಲ ಬಲದ ತೇಜ
ಅವನೀಗ ಅರಿವ ಆ ಏಕತತ್ತ್ವ ಜೊತೆ ನಿತ್ಯ ಚಲನಗಳನು

ಅವನೀಗ ಸಹಿತ ತಾ ರುದ್ರನಿಹನು, ಆ ಅಗ್ನಿ ಜೊತೆ ಸಿಡಿಲ ಧ್ವನಿಯು
ಅವನೀಗ ಶಿವನು ಜೊತೆಗಿದೋ ಶುಭ್ರ ತೇಜದಲಿ ಛಾಯೆ ರಹಿತ
ಕಾಲದಾ ದೀರ್ಘ ದೀರ್ಘಾತಿ ರೆಕ್ಕೆಗಳ ಬಲದಿ ತುಂಬಿ ಸತತ
ವ್ಯೋಮಧಾಮದಲಿ ಯಾನಗೊಳ್ಳಫಲೆನೆ ತುಂತುಂಬಿಕೊಂಡು ನಿರತ
ಅಮರತ್ವದುಸಿರು ತುಂಬಿರುವ ತಾಣದಲಿ ಹೃದಯ ಲೀಯಗೊಳುತ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/279–80**

---

**ಟಿಪ್ಪಣಿ:** ಇದು ಶ್ರೀ ಅರವಿಂದರ ಪ್ರಾರಂಭಿಕ ಕವನಗಳ ಸಂಪುಟ 2 ಪುಟ 279–80 ರಿಂದ ಆಯ್ದ ಕವನ. ಮೂಲದಲ್ಲಿ 'Epiphany' ಎನ್ನುವ ಶೀರ್ಷಿಕೆ ಇದೆ. ಇದನ್ನು ಭಾರತೀಯ ಅಧ್ಯಯನದಲ್ಲಿ 'ಸಾಕ್ಷಾತ್ಕಾರ'ಕ್ಕೆ ಸಮೀಕರಿಸಲಾಗುತ್ತಿದೆ. ವೇದಗಳಿಗೆ ಒಂದೊಮ್ಮೆ ಇದ್ದ 'ಜ್ಞಾನಕಾಂಡ'ದ ಆಯಾಮವು ಕಾರಣಾಂತರದಿಂದ ಮರೆಯಾಗಿ

ಹೋದ ವಿಷಯ ಎಲ್ಲರಿಗೂ ವಿದಿತವಿದೆ. ಇಲ್ಲಿಯವರೆಗೂ 'ಕರ್ಮಕಾಂಡ'ದ ವ್ಯಾಪ್ತಿಯಲ್ಲಿ, ಭಕ್ತಿ ಪ್ರಧಾನತೆಯಲ್ಲಿಯೇ ಮಂತ್ರಗಳನ್ನು ಮತ್ತು ದೇವತೆಗಳನ್ನು ಆರಾಧಿಸುತ್ತ ಬಂದಿದ್ದೇವೆ. ಆದರೆ ಅಲ್ಲಿರುವ ದೇವ–ದೇವತೆಗಳ ಮತ್ತು ಮಂತ್ರಗಳ ಜ್ಞಾನದಾಯಾಮದ ಸ್ವರೂಪವನ್ನು ಶ್ರೀ ಅರವಿಂದರು ತಮ್ಮ ಅಭಿವ್ಯಕ್ತಿಗಳಲ್ಲಿ ತೋರಿಸಿದ್ದಾರೆ. ಹೀಗಾಗಿ ಇಲ್ಲಿ ಅಶುತೋಷ ಮತ್ತು ರುದ್ರ ಎನ್ನುವ ತತ್ತ್ವಗಳ ಆಂತರ್ಯವನ್ನು ವಿವರವಾಗಿ ನೀಡಿದ್ದಾರೆ.

**ತೇಜಪ್ರರೇಣು**
**(ಭೂತನಾಥ)**

ರೂಪ–ರೂಪಗಳ ಲೋಕ–ಲೋಕಗಳ ಸಂರಚನೆಗಾಗಿ ಮೂಲ
ಉಜ್ಜ್ವಲದ ನಿತ್ಯ ತೇಜಪ್ರರೇಣು ಆಧಾರವಾಗಿ ಲೀಲ,
ಪುಟನೆಗೆತದೊಳಗೆ ಅಸ್ತಿತ್ವ ಪಡೆದು ಜೀವನವು ಸ್ಪಂದಗೊಂಡು
ಇದು ದೇವಕಣವು ಇದು ದೇವಕಣವು ಸಂಜೀವಪೂರ್ಣವಿಂದು

ಶಾಶ್ವತದ ಶಕ್ತಿ ಹೊಮ್ಮುತ್ತ ಚಿಮ್ಮಿ ಯಾನದಲಿ ವಿಕಸವಿಂದು
ಈ ಸ್ಫುಲಿಂಗವಿದು ಲೀಲೆಯಲಿ ತೇಲಿ ಅವಕಾಶ ವ್ಯಾಪ್ತವಿಂದು
ಆ ಅನಂತತೆಯ ಸಾಂತದೊಲು ತಾನು ನೆಲೆನಿಂತ ಘಳಿಗೆಯೊಳಗೆ
ಕಾಲ–ಕಾಲಾತೀತ ತಲ್ಲೀಯ ವಲಯ–ಭವಿತವ್ಯ ತಾಲದೊಳಗೆ

ಜಾಜ್ಜ್ವಲ್ಯಮಾನದೀ ತೇಜಪೂರ್ಣ ಸೂಕ್ಷ್ಮಾತಿಸೂಕ್ಷ್ಮ ರಥದಿ
ಮಿಂಚಿನೊಲು ಮಿಂಚಿ ಸಂಚಾರವಿಡುವ ಶಿವ ನಿತ್ಯ ತತ್ತ್ವಕಾದಿ
ಆ ಏಕವೀಗ ಅಗಣಿತದ ರೂಹು–ರೂಹುಗಳ ಪಡೆದುಕೊಳುತ
ಏಕೈಕವಿದುವು ಸರ್ವವ್ಯಾಪ್ತಿತ್ವದವಕಾಶದೊಡನೆ ಮಿಲಿತ

ತದ್–ಭಾವದೇಕ ಏಕತ್ವವನ್ನು ಅವನೀಗ ಗೂಢವಿರಿಸಿ
ಅದೃಶ್ಯವಿರುವ ರೂಪಗಳಲೆಲ್ಲ ತನ್ನನ್ನೆ ಮಿಲಿತಗೊಳಿಸಿ
ಶಾಶ್ವತಕೆ ಪೂರ್ಣ ನಿತ್ಯತ್ವವಿಂತು ಸಂರಚನೆ ಉದಿಸುತಿರಲು
ಕಾಲದಾ ಸೂಕ್ಷ್ಮ–ಸೂಕ್ಷ್ಮಾತಿ ದೇವಮಂದಿರದ ಸರಣಿಯಿರಲು

ಪರಮಾಣು ಮತ್ತೆ ಅಣು ಅಣುವು ಈಗ ನರ್ತನದ ಲಯದ ಚಲನ
ಅದೃಶ್ಯವಿರುವ ಅವುಗಳುದ್ದೇಶ ಯೋಜಿತದ ನಿಯತಿ–ತಾನ
ಅಚ್ಚರಿಯ ಘನದ ಏಕತ್ವವೀಗ ಪ್ರಾಸಾದಗೊಳಲು ತಾನು
ಆಧಾರಭೂತ ರಕ್ಷಣೆಯಲೀಗ ಪ್ರತಿಸ್ಪಂದಗೊಳುತ ತಾನು

ಸಸ್ಯ ಸಂಕುಲವು ಜೊತೆ ಸ್ಫಟಿಕ ಘಟಕ ತಾ ಪ್ರಕಟಗೊಳುತಲಿಂತು
ಜಂತು–ಜೀವಿಗಳು ವನ್ಯ ಜೀವಗಳು ಜೊತೆಜೊತೆಗೆ ಮನುಜನಿಂತು,
ಈ ಮನುಜನನ್ನೆ ಅವಲಂಬಗೊಳುವ ಸಂಗತಿಯ ಗತಿಯ ಎಡೆಗೆ
ಲೋಕದೇಕತೆಯ ಮುಟ್ಟುಗೋಲಿಕ್ಕಿಕೊಳಲಿರುವ ಭಾವದೆಡೆಗೆ

ಅವನಾತ್ಮ ತೇಜ–ಸ್ಫುಲಿಂಗವಿದು ತಾನು ವಿಶ್ವಾತ್ಮವಾಗಲೆಂದು
ಅದು ಪರಮ ಋತದ ನಿತ್ಯತ್ತ್ವವನ್ನು ಸಾಕ್ಷಾತ್–ದರ್ಶಗೊಂಡು
ಆ ಕಾಲ ಗತಿಯ ಮೀರುತ್ತ ಕಾಲಕಾತೀತ ಸ್ಥಿತಿಯಲೀಗ
ಅನಂತಾನಂತದಾ ವ್ಯಾಪ್ತಕೀಗ ಅತ್ಯಾಪ್ತ ಪ್ರಾಪ್ತಿಯಾಗ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/600**

---

**ಟಿಪ್ಪಣಿ:** ಮೂಲದಲ್ಲಿ Electron ಎನ್ನುವ ಹೆಸರಿದೆ. ಪರಮಾಣುವಿನ ಚಲನಾ ವಿಧಾನವು ಶಿವನ ತೋಷತಾಂಡವದ ಲಯದಲ್ಲಿಯೇ ಇದೆ ಎನ್ನುವದನ್ನು ಆಧುನಿಕ ವೈಜ್ಞಾನಿಕ ಲೋಕ ಸಂಪೂರ್ಣವಾಗಿ ಸಮ್ಮತಿಸಿದೆ.

**ಶಿವ**

ಶಾಶ್ವತದ ಶುಭ್ರ ಆ ಧವಳ–ಶೃಂಗದುತ್ತುಂಗ ತುಂಗದೊಳಗೆ
ಬರಿಯ–ಬಕ್ಕಟದ ಈ ಅನಂತ್ಯಗಳ ಏಕೈಕ ಆತ್ಮವೊಂದು,
ಘನಶಾಂತಿ ತೇಜದುಜ್ವಲದ ರಕ್ಷೆಯಾವರಣ ಅವನು ಇರಿಸಿ
ಮಂಗಲದ ಪೂರ್ಣ ಪರಮ–ಆನಂದವೀ ಗುಹ್ಯ–ನಿಸ್ಸಂಗ

ಆದರಿದೋ ಅಪರಿಮೇಯದಾ ನಾದ ಸ್ಪಂದಕೆನೆ ಸ್ಪರ್ಶಗೊಂಡು,
ಕಾಣುತಿಹನವನು ನಿಸ್ಸೀಮ ಅತಲದಾವರಣವದನು ಕಂಡು
ಆ ಅಪ್ರಕೇತ ಮೌನಗಳ ಅಂತರಂಗದಲಿ ನಿತ್ಯ–ನಾದ
ಆ ಮಹಾಶಕ್ತಿಯ ಮಾತೆಯಾ ಘನಮೌನ ಪರಮ ಸುಖವ.

ಅರ್ಧ ತಾನಿದ್ದ, ಜಾಗ್ರತದಿ ಅವಳು ಈಗವನ ನೋಟದೊಳಗೆ
ತಾನುದಿತಗೊಳುತ ಮತ್ತೆ ಉದಿತೋದಿತದ ಶೋಭೆಯೊಳಗೆ;
ಆಮೇಲೆ, ತನ್ನ ಹೃದಯದಾ–ಸ್ಪಂದದಾವರ್ತ ಇಚ್ಛೆ, ಚಲಿಸಿ
ಈ ನಾದ–ಪೂರ್ಣ ಲೋಕಗಳು ಈ ರಾಗ–ನೃತ್ಯ ವರ್ಣವಿರಿಸಿ

ಜೀವದೊರತೆಗಳು, ಅವಳಲ್ಲಿ ಮತ್ತೆ ಚಿತ್ತವದು ಪುಟಿತ ಪ್ರಭೆಯು,
ಅವಳ ಸಮ್ಮುಖವು ಅವನಿಗೆನೆ ಸಲಲು ಅವಳೆತ್ತಿಕೊಂಡು ಕಲೆಯು
ಅದು ತಾನೆ ತಾನು, ಅದು ತನ್ನ ತನನ ದಿವ್ಯದನುರಾಗವೆಂದು
ಆ ಶಕ್ತಿ ಈಗ ತುಂತುಂಬಿ ಹೊಮ್ಮಿ ಈ ಶಕ್ತಿಯಪ್ಪಲೆಂದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/609**

**ಭವವು ಶಿವಮಯವು**

ಇಂತಿದೋ ಭವವು ಶಿವಮಯವೆ ಆಗಿ ತೆರೆತೆರೆದುಕೊಂಡು ನಿಂದು
ಮತ್ತಿದೋ ಸರ್ವ–ಸಾಮಾನ್ಯ ಭಾವ ಅನುಭಾವ ಹಂತಕಿಂದು
ಸುವಿಶಾಲ ವ್ಯಾಪ್ತ ಉನ್ನಯನಕೇರಿ ಸರ್ವಾಪ್ತ ಛಂದವಾಗಿ
ಸರ್ವಾತಿಸರ್ವ ಕರ್ಮ–ಲೀಲೆಗಳು ಕಾಂತಿಯಲಿ ತೊಳಗಿ ಮಿನುಗಿ

ಆ ಪರಮಭೂಮ ಪರಮಾತ್ಮ ಜ್ಯೋತಿ ಹೊಂಗಿರಣ ಬೆಳಗಿ ಬೆಳಗಿ
ಭವದ ಸರ್ವಸ್ವ ವಸ್ತು–ವಿಷಯದಲಿ ಮಂಗಳದ ಮಿಲನವಾಗಿ
ಆತ್ಮಜ್ಞಾನದಲಿ ಸಹಜ ಉಪಲಬ್ಧ ಚಿನ್ಮಯದ ಕಿರಣ–ಹಸ್ತ
ಭಾವಾನುಭಾವದುತ್ತುಂಗ ತಾಣಗಳನೀಗ ಸ್ಪರ್ಶಿಸುತ್ತ,

ಶ್ರುತಿ–ಪ್ರಕಾಶವದು ಪ್ರಜ್ವಲನದಲ್ಲಿ ಉದ್ದೀಪಗೊಂಡು ಈಗ
ಭಾವಾನುಭಾವದಂತರಾಳಗಳಲೀಗ ಸಂಚಲನ ರಾಗ;
ಸಂತ್ಯ ತಾನದುವು ಅವುಗಳಾ ಹೃದಯ ಸ್ಪಂದನದ ಮಿಡಿತವಾಗಿ
ಮುಂಚೂಣಿಯಲ್ಲಿ ಮಾರ್ಗದರ್ಶಕನ ಪಥದಲ್ಲಿ ನಿಗದಿಯಾಗಿ,

ಋತವೀಗ ಸತತ ಶಾಸನದ ಬಂಧದನುಬಂಧ ನಿಯತಿಯಾಗಿ
ಅವುಗಳಾ ಕರ್ಮ, ವಾಣಿಗಿದೊ ಮತ್ತೆ ಚಿಂತನಕೆ ಸಹಿತವಾಗಿ,
ತಮ್ಮಲ್ಲಿ ತಾವು ಅನುಭಾವದಲ್ಲಿ ಸ್ಪಂದಿಸುತ ಊರ್ಧ್ವದೆಡೆಗೆ
ಎತ್ತರೆತ್ತರಕೆ ಏರುತಲಿ ಈಗ ಗಗನ–ಮಂಡಲದ ಕಡೆಗೆ

ದೇವಾನುದೇವಗಣಕಿಂತ ಕೊಂಚ ಕೆಳ ಹಂತದಲ್ಲಿ ನಿಂದು
ಆಧಾರವೀಗ ಸಾವಿರದ ತಾಣದಂಚಿನೆಡೆ ತಲುಪಿತಿಂದು.

**ದಳ 11 ರೇಣು– ಅಂತ್ಯ ತಾನಿರದ ಪಠ್ಯ, ಪುಟ 710**

---

**ಟಿಪ್ಪಣಿ:** ಋತ–ಸಂತ್ಯ–ಸತ್ಯ–ಗಾಯತ್ರಿ–ಸಾವಿತ್ರಿ–ಸರಸ್ವತೀ ಇವು ಹಂತಗಳು. ಚಕ್ರಾಕಾರವಾಗಿ, ಗಣಪತಿ ಮಂಡಳದ ಆಕೃತಿಯಲ್ಲಿ ರೂಹು ತಳೆಯುತ್ತವೆ. ಸಂತ್ಯ ಎಂದರೆ ಸತ್ಯದ ಛಂದಃಸ್ವರೂಪ. ಋತವು ಅನುಭವಕ್ಕೆ ಬಂದಲ್ಲಿ ಅದು ಸತ್ಯ. ದೇಹ ಸತ್ಯ. ಋತ ಆತ್ಮ.

**ಗಂಗಾ ಮಾತೆಗೆ...**

ಆಲಿಸೌ, ಗಂಗೆ, ಆಲಿಸೌ ಗಂಗೆ, ಅರ್ಣವವ ತುಂಬಲೆನಲು
ಸ್ವರ್ಣವನು ಸತತ ಭರಣಗೊಳಿಸುತಿಹೆ, ನಿತ್ಯತ್ವ ಪಡೆಯಲೆನಲು,
ಆಲಿಸೌ ಗಂಗೆ, ಓ ನನ್ನ ಮಾತೆ, ಕರ್ಣದೆರೆ ನನ್ನ ಕರೆಗೆ

ಹರಿಯ ಪದದಿಂದ ಸಲಿಲಗೊಳ್ಳುತಿಹ ಪರಿಶುದ್ಧ ತವ–ಸ್ವ–ರೂಪ
ಪರಮಪಾವಿತ್ರ್ಯದೊಡಗೂಡಿ ನೀನು ಮುಕ್ತದಲಿ ಚಿಮ್ಮಿ ಬಂದು
ಜಲಧಾರೆ ಧಾರೆ ಪಾವಿತ್ರ್ಯಪೂರ್ಣ ಹಿಮಶೀತಕಿಂತ ತಣ್ಪು.

ಹಿಮಾಲಯದ ಆ ಮಹತಿ ವೈಭವದ ಶೃಂಗಗಳ ಮೇರೆ ಮೇಲೆ
ಅವನದೇ ಸೃಷ್ಟಿ ಶಿಲಾವೃತ್ತಗಳ ಮೇಲಲ್ಲಿ ಸ್ಥಿತನು ಶಿವನು
ನಿಷ್ಕಂಪಪೂರ್ಣ ವಾಯು ಮಂಡಲದ ಆಧರಿಸಿಕೊಂಡು ತಾನು

ನಿಷ್ಕಾಸಗೊಂಡ ಸಮುದಾಯವೀಗ ರಕ್ಷಣೆಯ ಬಯಸಿ ಅವನ
ವಿಲಾಪದಲಿ ಆ ರಕ್ಕಸನ ದಂಡು ತುಂಬಿರುವ ಸ್ಥಿತಿಯ ತಾನ,
ಗಂಗೆಯೀಗಿದೋ ಅವನ ಕೇಶದಿಂದೀಗ ಮುಕ್ತ ಮುಕ್ತ.

ತುಷಾರಧವಲಗಳ ಶೃಂಗಳನಿಳಿಯೆ ಶೀಘ್ರಾತಿಶೀಘ್ರವಾಗಿ
ಆ ಅಮರಧಾಮದೌನ್ನತ್ಯ ಶಿಖರಗಳ ಶಾಂತ ಶೀತ ತುಂಬಿ,
ದಟ್ಟೈಸಿಕೊಂಡ ತವ–ತರಂಗಗಳ ಸ್ಪರ್ಶಿಸಲು ಮನುಜ ವಿಫಲ.

ಕಣಿವೆಗಳ ಪಯಣ ಗಂಗೋತ್ರಿಯಿಂದ ಗತಿವಡೆದು ಸಾಗುತಿರಲು
ಆ ಊರ್ಧ್ವ ಹಿಮದ ತಲಗಳವು ಘೂರ್ಣಗೊಂಡಿಹವು, ಪೂರ್ಣವಾಗಿ,
ಅಬ್ಬರದಿ ಪುಟಿದು ಶಿವಾದ್ರಿ ತಾಣದಿಂದೀಗ ವೇಗವಾಗಿ.

ಪಾವಿತ್ರಪೂರ್ಣ ಬನಾರಸದಲ್ಲಿ ಅಪವಿತ್ರ ಪರಮ ಪವಿತ್ರ
ನಿನ್ನ ಅಂಗುಲಿಯ ಹಿತಸ್ಪರ್ಶವಿಡುತ ಸಂಚಲನವೀಗ ಇರಲು
ಪುಣ್ಯಧಾಮಗಳು ಜೊತೆ ದೇವನಿಲಯ ಹಿತಸ್ಪರ್ಶ ಪಡೆದುಕೊಂಡು

ತವ ಚಲನೆ ನಿರತ ಅಲೆಗಳಲಿ ಹಿತದ ಲಾಲಿತ್ಯ ಭರಣಗೊಳಿಸೆ,
ಪರಿಶುದ್ಧ ಮುಗ್ಧ ಬಲುಮಂದ್ರ ಗತಿಯ ಹಸಿತದಲಿ ಮಗುವು ಈಗ
ಎದೆಗಪ್ಪಿಕೊಳಲು ಮಾತೆಯಾ ಮಮತೆ ರಕ್ಷೆಯಲಿ ಲಭ್ಯವೀಗ.

ರಾಮನಾ ಪದಗುರುತು ತಾನಿರುವ ತಾಣ, ಕೃಷ್ಣನೂ ಆಗಮಿಸಿ ಇಲ್ಲಿ,
ನೀನೆಲ್ಲಿ ಎಲ್ಲಿ ಸಲಿಲಗೊಂಡಿಹೆಯೋ ಅಲ್ಲೆಲ್ಲ ನಿನ್ನ ಕೃಪೆಯು
ತುಂಬಿಕೊಂಡಿರುವ ಈ ಕೃಪಾ ಹಸ್ತ ನಿತ್ಯತ್ವದಲ್ಲಿ ನಿರತ.

ಸಂಯೋಗಗೊಳಿಸುತಿಹೆ ನಮ್ಮನೀಗ ಭಾಗೀರಥಿಯೇ ನೀನು
ಜಾಹ್ನವಿಯೋ ಇಲ್ಲ ಗಂಗೆಯೋ ನಮಗೆಲ್ಲ ಮಾತಿ ನೀನು
ನಿನ್ನ ನಾಮವಿದು ಆರ್ಯಭೂಮಿಯನು ಪಾವಿತ್ರ್ಯಗೊಳಿಸುತಿಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/256–57**

**ಅವತರಣ**

ನನ್ನ ಕೋಶಗಳು–ಉತ್ಕಂಠ –ಸರ್ವ ವೈಭವದಿ ಪೂರ್ಣ–ಪರ್ವ
ಆತ್ಮ ಜೊತೆ ದೇಹ ಪುಲಕಿತದಿ ಕುಲುಕು, ಮಾಬಲದ ತೋಷಪೂರ್ವ,
ಬೆಳಕಿನಾ ಜೊತೆಗೆ ಈ ಮಹಾಬೆಳಕು, ಅರ್ಣವದ ಹೃದಯದಲೆಗಳಲ್ಲಿ
ನನಗಿದೋ ಊರ್ಧ್ವ, ಆವರಣವೀಗ ನನಗೆ.

ಬಲುಕಠಿಣ, ಶಿಲಾಘನದಂತೆ, ಸ್ಥಿರದ ಗಿರಿಯೊ ವಾ ಭೂಮ ಮೂರ್ತಿ,
ಸುವ್ಯಾಪ್ತ ನನ್ನ ಕರಣ ಸ್ಪಂದಿಸಿದೆ ಈ ಲೋಕಭಾರ ಸಹಿಸಿ ಪೂರ್ತಿ;
ರುಂದ್ರಮಯ ಸಾಂದ್ರ ಮಹತಿ ಅವತರಣ, ಪರಮದೇವನಾಗಮಿಸಿ,
ಕರಣಗಳು ಮಾತ್ರ ಮೃತ್ಯವಶವರ್ತಿ.

ನಿರ್ಮಾಯ ಮೌನ ಸಂದಣಿಸಿಕೊಂಡು, ಅನಂತವದೆನ್ನ ಮೇಲೆ
ಶಾಶ್ವತದ–ಶಕ್ತಿಯಾ ವೈಭವವನಿಂತು ತಲಕಚ್ಚುಗೊಳಿಸಲೆಂದು;
ಚಿತ್ತದಾ ಜೊತೆಗೆ ಹೃದಯವದು ಅರಳಿ ಬ್ರಹ್ಮಾಂಡ ವ್ಯಾಪ್ತದೊಡನೆ.
ಮೃಣ್ಮಯದ ರವದ ಮರ್ಮರವು ಶಾಂತವೀಗ.

ವೇಗದುತ್ಕರ್ಷ ಪ್ರೋತ್ಕರ್ಷದೊಳಗೆ ಸ್ವರ್ಣಮಯ ವಲಯ ಮೀರಿ
ಪುಟನೆಗೆದು ಜ್ಞಾನ, ಸೆಳೆಮಿಂಚುಗಳಲಿ ವೈಭವದ ಧಾರೆ–ಸಾರಿ;
ವರ್ಣನಾತೀತ ಪ್ರಜ್ವಲನಶೀಲದಿಂದುದಿತವಿ ಚಿಂತನವು,
ದೇದೀಪ್ಯಕಾಂತಿ ನನ್ನ ಪ್ರಾಣ.

ಹೃದಯ ಮಿಡಿತಗಳು ಮಂದ್ರ–ತನನದಲಿ, ದೇವ–ದ್ವಾರದಿಂದುದಿತ
ನನ್ನೆಡೆಗೆ ಬಂದ ಧ್ವನಿಗಳಿವು ವರ್ಣ ನಿರ್ದಿಷ್ಟ ಇಷ್ಟಪೂರ್ತ
ಪ್ರಕೃತಿಯಾ ಶೃಂಗಗಳಲೀಗ ಸ್ಥಿತದ ವರ್ಣಗಳು ರಕ್ಷೆಗೊಳವು.
ಭಾವದುತ್ಕರ್ಷದಾ ದಿವ್ಯ ರಥಗಳಾಗಿಹವು.

ಈ ಸರ್ವಲೋಕ ಐಕ್ಯೈಕವಾದ ಅಸದ್ವೈತಕೀಗ ಬದಲುಗೊಂಡು;
ಆತ್ಮಗಳು ಅಮರ, ಬಲಗಳೂ ಅನಂತ, ಸಂಯೋಗಗೊಳ್ಳುತಿರಲು,
ದೇವ–ನೃತ್ಯದಲಿ ಹಾಸು–ಹೊಕ್ಕಾಗಿ ಸಂಧಿ ತಾನಿರದೆ ಪ್ರಕೃತಿ–ನೇಯ್ಗೆ
ನಾದಮಯವಿದುವು ಆ ನಿತ್ಯತ್ವ ತಾನೆ ಇದುವು.

ಚಿತ್ತದಾ ಜೊತೆಗೆ ಹೃದಯ, ಕರಣ ಮತ್ತಿದೋ, ಜೀವಿಯಾ–ತಂತು–ವಾದ್ಯ
ಕ್ರಂದವದು ವಿಶ್ವಗೀತ, ಶಾಶ್ವತದ ನಾದ–ಸ್ವನನವಿರೆ ವೇದ್ಯ,
ಚಿದ್ಬೆಳಕು ಮತ್ತೆ ಸಾಮರ್ಥ್ಯ ಜೊತೆಗೆ ಆನಂದ–ಅಮರ–ಪ್ರಜ್ಞೆ–
ಸಂಯೋಗ–ಯೋಗಗೊಳುತಲಿವೆ ನಿರತ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/578**

---

**ಟಿಪ್ಪಣಿ:** ಇಂದು ಶ್ರೀ ಅರವಿಂದರ 'ಸಿದ್ಧಿ ದಿನ'. ಮಾನವನ ಪ್ರಜ್ಞಾ ವಿಕಾಸವು ನಿಯತಿಯ ಅನುಗುಣವಾಗಿ ಪರಿಪೂರ್ಣಗೊಳ್ಳುವ ಮತ್ತೆ ಪರಿಪಕ್ವತೆಯ ಹಂತದಲ್ಲಿ ಯಾನ ಗೈಯಬೇಕಾದ ಪ್ರಾರಂಭದ ಹೆಜ್ಜೆಯಾಗಿರುವದನ್ನು ಈ 'ಸಿದ್ಧಿ ದಿನ'ದ ಸಾಕ್ಷಾತ್ಕಾರದಲ್ಲಿ ಅಭಿವ್ಯಕ್ತಿಸಿದ್ದಾರೆ.

ಯೋಗದ ಪರಮೋಚ್ಚ ಹಂತದ ಅನುಭೂತಿ ಹಂತದ ಅಭಿವ್ಯಕ್ತಿಗಳು ಶಬ್ದದ ಆಚೆ ಆಚೆ ರೂಪುಗೊಂಡಿರುತ್ತವೆ. ಆ ಹಂತದ ಅನುಭೂತಿಯ ಆಯಾಮಕ್ಕೆ ಹೊರ ಕವಚವಾಗಿ ಮಾತ್ರ 'ಶಬ್ದ' ರೂಪು ಪಡೆದಿರುತ್ತದೆ. ಹೀಗಾಗಿ ಶಬ್ದಾತೀತವನ್ನೂ ಸಹಿತ ಶಬ್ದದ ಮೂಲಕವೇ ಅನುಸಂಧಾನಿಸಬೇಕಾಗಿದೆ. ಇದರ ಸಾಧನಾ ಕ್ರಮವೇ 'ಪೂರ್ಣ ಯೋಗದ ಆದಿಯೂ ಆಗಿದೆ'.

## ಪ್ರಜ್ಞೆಯ ಸ್ವರೂಪದಲ್ಲಿ ಶಿವ

ನಮ್ಮ ವೇದಾಂತದ ಚಿಂತನಾದರ್ಶಗಳ ಪ್ರಕಾರವಾಗಿ, ಈ ಜಗತ್ತು ಮತ್ತು ವಸ್ತುಗಳು ಅವು ಸಾಮಾನ್ಯವೇ ಆಗಿರಲಿ ಅಥವಾ ನಿಗದಿತವಾಗಿರುವ ವಿಶಿಷ್ಟತೆಯನ್ನೇ ಹೊಂದಿ ಜೀವ(ನ)ವನ್ನು ಹೇಗೆ ಪಡೆದುಕೊಂಡಿತು ಎನ್ನುವ ಸಂಗತಿಯನ್ನು ಕುರಿತ ಚಿಂತನೆಗಳಲ್ಲಿ ರೂಪು ಪಡೆದಿದೆ. ಇವೆಲ್ಲವೂ ಪ್ರಪ್ರಥಮದಲ್ಲಿ ಒಂದು "ಬೀಜ"ದ ಸ್ವರೂಪದಲ್ಲಿ ಇದ್ದು ಅಲ್ಲಿ ಘನಪ್ರಶಾಂತತೆಯ ಮತ್ತು ಇನ್ನೂ ಅಭಿವ್ಯಕ್ತಗೊಳ್ಳದ ಚಿಂತನಗಳ ಸ್ವರೂಪದಲ್ಲಿ ಅಸ್ತಿತ್ವವನ್ನು ಹೊಂದಿತ್ತು, ಅಲ್ಲದೇ ಅದೂ ಗಾಢವಾದ ಧ್ಯಾನಾವಸ್ಥೆಯಲ್ಲಿ (ಸಮಾಧಿ ಸ್ಥಿತಿಯಲ್ಲಿ) ಇತ್ತು. ಅಲ್ಲಿ ಯಾವುದೇ ಉದ್ದೇಶದ ಅಥವಾ ಯಾವುದೇ ಕ್ರಿಯೆಯ ಕುರಿತು ಯಾವುದೇ ರೀತಿಯ ಸಂಚಲನವೂ ಇರಲಿಲ್ಲ. ಕೇವಲ ನಿಶ್ಚಲದ ಮತ್ತು ಕ್ರಿಯಾಪ್ರವೃತ್ತಿ ಪ್ರಾರಂಭಗೊಳ್ಳದ ಚಿಂತನಾ ಹಂತದಲ್ಲಿತ್ತು. ಶಿವನು ಪರಮ ಪರಿಶುಭ್ರ ಮತ್ತು ಪರಮಾತಿ ಪರಿಶುದ್ಧನಾಗಿದ್ದು, ಆತ್ಮಸಂಯಮದ ತಪಸ್ವಿಯಾಗಿದ್ದು, ಏಕಾಗ್ರತೆಯಲ್ಲಿ ನಿಶ್ಚಲತೆಯಲ್ಲಿ ಚಿಂತನಾಶೀಲತೆಯಲ್ಲಿರುವ ಯೋಗಿಯಾಗಿ ಇವೆಲ್ಲವನ್ನೂ ತನ್ನ 'ಪ್ರಜ್ಞೆಯನ್ನಾಗಿಸಿಕೊಂಡು', ಪರಮಾತ್ಮನಾಗಿದ್ದಾನೆ. ಆದರೆ, ವಸ್ತುಗಳು ಅಸ್ತಿತ್ವ ಪಡೆಯುವ ಮುನ್ನ ಇದೇ ಶಿವನು, ಅಲ್ಲೊಂದು ಸಂಚಲನವನ್ನು ಪ್ರವರ್ತಿತಗೊಳಿಸಲು ತಾಮಸಿಯಾಗಿ ಮತ್ತು ರಾಜಸಿಕವಾಗಿರಬೇಕಾದ ಅವಶ್ಯಕತೆ ಇದೆ. ಇದರ ನಂತರದಲ್ಲಿ ಆ ಬೀಜದಿಂದ ಮೊಳಕೆಯೊಂದು ಉದಿತಗೊಂಡು ಬಹಿರಂಗಗೊಳ್ಳುತ್ತದೆ. ನಂತರದಲ್ಲಿ ಇದು ಪರಿವರ್ತಶೀಲತೆಯನ್ನು ಪಡೆದುಕೊಳ್ಳುತ್ತದೆ ಮತ್ತು ಇಲ್ಲಿ ಇನ್ನೂ ಯಾವುದೇ ರೀತಿಯಲ್ಲಿಯೂ ರೂಪು ಮೂಡಿರದ ಆಕಾರವೊಂದು ಆತ್ಮಿಕ ಸ್ವರೂಪದ ಆವಕಾಶದಲ್ಲಿ ಉದಿಸುತ್ತದೆ. ಇಲ್ಲಿಯೇ ಇದು ಭೌತಿಕ ಜಗತ್ತಿನಲ್ಲಿ ಜನ್ಮ ಪಡೆದುಕೊಳ್ಳಲು ಕಾಯುತ್ತದೆ. ಇಲ್ಲಿಯೇ ಬ್ರಹ್ಮನು, ಜಾಜ್ವಲ್ಯಮಾನದ, ಆಕಾರವಡೆಯದ, ಮತ್ತು ಹಲವು ಆಕಾರಗಳಲ್ಲಿದ್ದಂತೆ

ಇದ್ದು, ಅದು ಕ್ರಿಯಾಶೀಲ ಪರಿಕಲ್ಪನೆಯಲ್ಲಿ ಮತ್ತು ಚಿಂತನದಲ್ಲಿ ಮತ್ತು ಈ ಜಗತ್ತಿಗೆಲ್ಲ ಅವನದೇ ಸಂಜಾತೆಯಾದ ವಾಕ್–ದೇವತೆಗಳಲ್ಲಿಯೇ ಹಿರಿಯಳಾಗಿರುವ ವಾಣಿಯ ಸ್ವರೂಪದಲ್ಲಿ, ಅತಿ ಉಜ್ಜ್ವಲದ ಕಂಪನಾಶೀಲತೆಯ ಮಾಧ್ಯಮದ ಜೊತೆಗೆ ಸ್ಪಂದಗೊಳ್ಳುತ್ತಲೇ, ಇವೆಲ್ಲವನ್ನೂ ನಿಗದಿತವಾದ ಆಕಾರವನ್ನು ರೂಪಿಸಿ ಅದಕ್ಕೊಂದು ದೇಹ ಸ್ವರೂಪವನ್ನೂ ನೀಡಿ ಅದನ್ನು ಹಿರಣ್ಯಗರ್ಭನ ದೇಹ ಸ್ವರೂಪವಾಗಿಸುತ್ತದೆ. ಈ ಪರಮನು ಕಲ್ಪನಾತ್ಮಕವಾಗಿದ್ದು ಜೊತೆಗೆ ಇದರಿಂದಾಗಿಯೇ ಸೃಷ್ಟಿ ಸಂಕ್ರಾಂತನೂ ಆಗಿದ್ದಾನೆ. ಅಂತಿಮದಲ್ಲಿ ಇಲ್ಲಿ ಇವೆಲ್ಲವೂ ಖಚಿತವಾದ ಒಂದು ಸಾಕಾರವನ್ನು ಪಡೆದುಕೊಳ್ಳುತ್ತ, ಭೌತಿಕ ಶರೀರದ ಸ್ವರೂಪದಲ್ಲಿ ಬದ್ಧಗೊಳ್ಳಲು, ಆಕಾರಗೊಳ್ಳಲು, ಜೀವಸತ್ತೆಗೊಳ್ಳುತ್ತಾನೆ. ಈ ಹಂತವನ್ನು ವಿಷ್ಣುವು ಅವನಿಗಾಗಿಯೇ ನಿಗದಿತವಾಗಿರುವ ಮತ್ತು ಗೋಚರಗೊಳ್ಳುತ್ತಿರುವ ವಿರಾಟ್ ಸ್ವರೂಪದ ಬ್ರಹ್ಮಾಂಡದ ಧಾರಣದಲ್ಲಿ, ದೈವೀ ಇಚ್ಛೆಯು ಎಲ್ಲಿಯವರೆಗೂ ವಿಶ್ರಾಮಗೊಳ್ಳುವದಿಲ್ಲವೋ ಮತ್ತು ಲಯಕರ್ತನಾಗಿ ಶಿವನು, ಪ್ರಕಟಗೊಂಡ ಬಾಹ್ಯಸ್ವರೂಪದ ಆಕಾರಗಳೆಲ್ಲವೂ ಮತ್ತೆ ವಿಘಟನೆಗೊಳಿಸಿ, ಅದರ ಮೂಲವಾಗಿರುವ ಕಲ್ಪನೆಗಳು ಸಂಪೂರ್ಣವಾಗಿ ಕರಗಿಹೋಗುವವರೆಗೆ ಮತ್ತು ಅದೆಲ್ಲವೂ 'ಮೂಲ ಬೀಜಸ್ವರೂಪ'ಕ್ಕೆ ಬರುವವರೆಗೂ ವಿಷ್ಣುವು ಸ್ಥಿತಿಪಾಲಕನಾಗಿರುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/176**

(ಬುದ್ಧಿ–ಮನಸ್ಸು–ಪ್ರಜ್ಞೆ–ಚಿತ್ತದ ಹಂತಗಳ ಕುರಿತು ಶ್ರೀ ಅರವಿಂದರ ಅಭಿವ್ಯಕ್ತಿಯ ಸ್ವರೂಪಗಳು. ಈ ಹಿನ್ನೆಲೆಯಲ್ಲಿ, ಇದರ ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನು ಶ್ರೀ ಅರವಿಂದರ 'ದಿವ್ಯ ಜೀವನ'ದ ಆಂತರ್ಯದಲ್ಲಿ ಕಾಣಬಹುದು. ಅಲ್ಲವೇ?

ಮನಸ್ಸಿನ ಹಂತದೊಳಗೆ ಇಂದ್ರ, ಬುದ್ಧಿಯ ಹಂತದಲ್ಲಿ ವಿಷ್ಣು ಮತ್ತು ಪ್ರಜ್ಞೆಯ ಹಂತದಲ್ಲಿ ಶಿವ ಎನ್ನುವ ವಿಶ್ವಾಸವಿದೆ. ಸಿದ್ಧಾಂತವೂ ಇದೆ. ಶ್ರೀ ಅರವಿಂದರ 'ದಿವ್ಯ ಜೀವನ'ದ ಆಂತರ್ಯವು ಕೇವಲ 'ಅವತರಣ'ವನ್ನು ಮಾತ್ರ ಅಭಿವಕ್ತಿಯಾಗಿದೆಯೇ? ಅಥವಾ ಅವತರಣದ ಪ್ರಕ್ರಿಯೆಯು ಪೂರ್ಣಗೊಂಡ ನಂತರ ನಿಯತಿಯ ಅನುಸಾರವಾಗಿಯೇ 'ಆರೋಹಣ'ವನ್ನು ಅಭಿವ್ಯಕ್ತಿಸುತ್ತ ಅದಕ್ಕೆ ಸೂಕ್ತ ಮಾರ್ಗದರ್ಶೀ ಸೂತ್ರಗಳನ್ನು, ಅನುಷ್ಠಾನ ವಿಧಾನಗಳನ್ನು ಮತ್ತು ಅದರ ಪಥವನ್ನು ಅಭಿವ್ಯಕ್ತಿಸುತ್ತಿದೆಯೇ? ಆಯಾ ಹಂತದಲ್ಲಿ ಸ್ಪಂದಗೊಳ್ಳುವ ಕ್ರಿಯೆಯ ಮೇಲೆ ಆಯಾ ಗ್ರಹಿಕೆಗಳು ರೂಹು ಪಡೆದುಕೊಳ್ಳುತ್ತವೆ.

ಶ್ರದ್ಧೆ ಎನ್ನುವದು ಶರಣಾಗತಿಗೆ ಅಥವಾ ಸಮರ್ಪಣೆಗೆ ಸ್ಥಗಿತಗೊಳ್ಳುವ ಸಂಭವವೇ ಹೆಚ್ಚು. ಆದರೆ 'ಶ್ರದ್ಧಾಪೂರ್ವಕ'ವಾದ ಅನ್ವೇಷಣೆಯು ಪ್ರಗತಿಯ ಪಥವನ್ನು ತೋರಿಸುತ್ತ ಆರೋಹಣಕ್ಕೆ ಸದಾ ಸಹಕಾರಿಯಾಗಿರುತ್ತದೆ. ಇಲ್ಲಿ ಅನ್ವೇಷಣೆ ಎನ್ನುವದನ್ನು ವಿಕಾಸದ ಹಂತದಲ್ಲಿ ಗಮನಿಸಬೇಕಾಗುತ್ತದೆ. ವಿಕಾಸ ಎಂದಿಗೂ ಸ್ಥಗಿತಗೊಳ್ಳುವದಿಲ್ಲ.)

**ನೀಲಕಂಠ, ಏಕಮೇವ ಕರುಣಾಮಯಿ**

ಪ್ರಕೃತಿಯಲ್ಲಿ, ವಿಭಜನೆ ಮತ್ತು ಅಹಂಕಾರಗಳು ಪ್ರಾರಂಭವಾದಾಗಿನಿಂದಲೇ ಅಲ್ಲಿ ಪ್ರಪ್ರಥಮವಾಗಿ ಆಗಮಿಸಿದ್ದು ದೈತ್ಯಾಕಾರದ ತನುವಿಶೇಷವನ್ನು ಹೊಂದಿದ ವ್ಯಕ್ತಿ; ಅವನು ನಮ್ಮಲ್ಲಿಯೇ ನೆಲೆನಿಂತಿರುವ ಹಿರಿಯ ದೈವವಾಗಿ, ಮಾನವನ ಸ್ವರ್ಗ ಮತ್ತು ಭೂಮಿಯ ಆಳ್ವಿಕೆಯನ್ನು ವಹಿಸಿದ್ದಾನೆ. ಇದಾದ ನಂತರದಲ್ಲಿ ಆಗಮಿಸಿದ್ದು ಪರಮಾತ್ಮ ಮತ್ತು ಅವನು ನಮಗೆ ಸೌಷಮ್ಯಗಳನ್ನು ರೂಪಿಸಿದ್ದಾನೆ. ಹೀಗಾಗಿಯೇ ನಮ್ಮ ಪ್ರಾಚೀನ ಕೃತಿಗಳು ಅಭಿವ್ಯಕ್ತಗೊಳಿಸುತ್ತಿರುವದೇನೆಂದರೆ, ದೇವತೆಗಳು ಮತ್ತು ದಾನವರು ಜೊತೆಯಾಗಿಯೇ ಶ್ರಮವಹಿಸಿ, ಮನುಕುಲಕ್ಕೆ ಪರಮೋದ್ದೇಶವಾಗಿ ಇದ್ದ ಅಮರತ್ವದ ಬಗೆಗೆ ಇದ್ದ ಪರಮ ಧ್ಯೇಯದ ಬಗೆಗೆ, ನಮ್ಮ ಜೀವನದ ಸಮುದ್ರ ಮಥನ ಮಾಡಿದ್ದಾರೆ. ಆದರೆ, ಯಾವಾಗ ಈ ವಿಷಯದಲ್ಲಿ ಜಯವು ಪ್ರಾಪ್ತಿಯಾಯಿತೋ, ವಿಷ್ಣುವು ಮಾತ್ರ ಇದನ್ನು ದೇವತೆಗಳಿಗೆ ಮಾತ್ರ ಎಂದು ರೂಪಿಸಿದನು. ಭಯವನ್ನು ಸೃಷ್ಟಿಸುತ್ತಿರುವವರಿಗೆ ಮತ್ತು ಹಿಂಸಾತ್ಮಕವಾದ ಕ್ರಿಯೆಗಳಲ್ಲಿ ತೊಡಗಿಕೊಂಡವರಿಗೆ ದೊರೆಯದಂತೆ ಹುನ್ನಾರು ಮಾಡಿದನು. ಮೇಲ್ನೋಟಕ್ಕೆ ಇದು ಅನ್ಯಾಯದಂತೆ ಕಾಣುತ್ತದೆ; ಮಥನದ ಕ್ರಿಯೆಯಲ್ಲಿ ಅಸುರರ ಪಾತ್ರವೂ ಅಪಾರವಾಗಿಯೇ ಇದ್ದರೂ, ಅದರ ಫಲಪ್ರಾಪ್ತಿಯಲ್ಲಿ ಮಾತ್ರ ಅವರಿಗೆ ಅಲ್ಪ ಪ್ರಮಾಣವು ನೀಡಲ್ಪಟ್ಟಂತೆ ತೋರುತ್ತದೆ. ವಿಷ್ಣುವು ಇಲ್ಲಿ ಪ್ರಾರಂಭಗೊಳಿಸಿದ ಕ್ರಿಯೆಯನ್ನು ಅವನೇ ಮುಂದಾಳುವಾಗಿ ನಡೆಸುತ್ತಾನೆ. ಎಲ್ಲೆಲ್ಲಿ ಅವಶ್ಯವಿದೆಯೋ ಅಲ್ಲೆಲ್ಲ ಕತ್ತರಿಸುತ್ತ, ಆಕಾರ ರೂಪಿಸುತ್ತ, ಬಿತ್ತುತ್ತ, ತಿದ್ದುಪಡಿ ಮಾಡುತ್ತ, ಸಾಕಾರಗೊಳಿಸುತ್ತ ಸಾಗುತ್ತಾನೆ. ಪರಮಾತ್ಮನೂ ಇವನನ್ನು ಅನುಸರಿಸುತ್ತಾನೆ. ಎಷ್ಟೇ ಅಡೆ ತಡೆಗಳು ಉದ್ಭವಿಸಿದರೂ ಅವುಗಳನ್ನು ಅಷ್ಟೇ ಭಯಂಕರವಾಗಿ ಎದುರಿಸುವ ಸಾಮರ್ಥ್ಯವನ್ನು ನಾವು ಹೊಂದುವಂತೆ ಮಾಡುತ್ತಾನೆ. ಉಳಿದವರು ವಿಜಯದ ತೋಷವನ್ನು ಆನಂದಿಸುತ್ತಾರೆ.

ಹೀಗಾಗಿಯೇ ಪರಮಾತ್ಮನಾಗಿರುವ ಮಹತಿಯ ಶಿವನಿಗೆ ಈ ಕಲಂಕಿತ ಮತ್ತು ಹಿಂಸಾತ್ಮಕ ದೈತ್ಯ ಪ್ರಿಯನಾಗಿದ್ದಾನೆ. – ಏಕೆಂದರೆ ಭಯಂಕರವಾಗಿರುವದೇನೆ ಇದ್ದರೂ ಶಿವನು ಅದನ್ನು ಸ್ವೀಕರಿಸಿ ಶಮನಗೊಳಿಸುತ್ತಾನೆ. ಹೀಗಾಗಿಯೇ ಇಲ್ಲಿ ಸಮುದ್ರ ಮಥನದ ಪ್ರಾರಂಭದಲ್ಲಿ ಉದ್ಭವಗೊಂಡ ಭಯಂಕರವಾಗಿದ್ದ ಕಾಲಕೂಟ ವಿಷವನ್ನು ಕುಡಿಯುತ್ತಾನೆ, ನಂತರ ಉದಿಸಿದ ಅಮೃತವನ್ನು ಇನ್ನಿತರರಿಗೆ ಬಿಟ್ಟುಕೊಡುತ್ತಾನೆ. ಇಲ್ಲಿ ಶಿವನ ಆಯ್ಕೆಯು ಜಾಣತನದಿಂದ ಕೂಡಿದ್ದು ಮತ್ತು ಜ್ಞಾನಪೂರ್ಣವೂ ಆಗಿದೆ. ಜೊತೆಗೆ ಪ್ರೇಮಪೂರ್ಣವಾಗಿದೆ. ಈ ದೈತ್ಯಸ್ವರೂಪವು ತಮದಿಂದ ಮತ್ತು ಲಾಲಸೆಯಿಂದ ಕೂಡಿದ್ದು, ಅಷ್ಟೇ ಭಯಂಕರವಾದ ಅಹಂಕಾರವನ್ನೂ ತುಂಬಿಕೊಂಡಿದೆ. ಆದ್ದರಿಂದಲೇ ವಿಷ್ಣುವು ರೂಪಿಸಿದ ಯೋಜನೆಯು ಸ್ವೀಕಾರರ್ಹವಾಗುತ್ತದೆ. ಆದರೆ ಮತ್ತು ಅಮರತ್ವದ ಸಲುವಾಗಿ, ಎಲ್ಲಿಯವರೆಗೂ ವ್ಯಕ್ತಿಯು ತನ್ನಲ್ಲಿ ತಾನು ದಿವ್ಯತ್ವವನ್ನು ಪಡೆದುಕೊಳ್ಳುವದಿಲ್ಲವೋ ಅಲ್ಲಿಯವರೆಗೂ ಮತ್ತು ಎಲ್ಲಿಯವರೆಗೂ ಗರ್ವ ಮತ್ತು ಅಸುರತ್ವವನ್ನು ತೊರೆಯುವದಿಲ್ಲವೋ ಅಲ್ಲಿಯವರೆಗೂ ಪರಮಾತ್ಮನು ಈ ಅಧಿಕಾರದ ಪೀಠವನ್ನು– ಕಿರೀಟವನ್ನು ಬೀಳಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/154**

**ನಟರಾಜ**

ಬಹುತೇಕವಾಗಿ ಶಿವನ ನೃತ್ಯವನ್ನು ತಾಂಡವ ನೃತ್ಯವೆಂದು ತಪ್ಪಾಗಿ ಗ್ರಹಿಸಿ ಅದು ಸಾವಿನ ಅಥವಾ ಪ್ರಳಯದ ನೃತ್ಯವೆಂದೇ ಪರಿಗಣಿಸಲಾಗಿದೆ. ಆದರೆ, ಯಾರಾದರೂ ಸರಿಯೇ, ನಟರಾಜನನ್ನು ಸೂಕ್ಷ್ಮವಾಗಿ ಗಮನಿಸಲು ಬಯಕೆಯನ್ನು ಹೊಂದಿದ್ದರೆ, ಈಗ ನಾವೆಲ್ಲ ಕಾಣುತ್ತಿರುವ ದೃಷ್ಟಿಗೆ ವಿರುದ್ಧವಾಗಿ, ಅಲ್ಲಿ ಇರುವ ಈ ಬ್ರಹ್ಮಾಂಡ ಸ್ವರೂಪದ ನೃತ್ಯದ ರೂಪವು ಎಂದೆಂದಿಗೂ ಅಚಲವಾಗಿರುವ ಶಾಶ್ವತದ ಮತ್ತು ಅನಂತಾನಂತತೆಯ ಪರಮಾನಂದವೇ ಆಗಿದೆ ಎನ್ನುವದು ಕಾಣುತ್ತದೆ. ಇದೇ ರೀತಿಯ ವಿನ್ಯಾಸವೇ ಕಾಲೀ ಮಾತೆಯ ವಿಷಯದಲ್ಲೂ ಇದೆ. ಆದರೆ ಈ ದೃಶ್ಯವು ಪಾಶ್ಚಾತ್ಯರ ಕಣ್ಣುಗಳಿಗೆ ಭಯಾನಕವಾಗಿ ಇದೆ. ಆದರೆ ನಮಗೆಲ್ಲಾ ಗೊತ್ತಿರುವಂತೆ, ಈ ವಿಶ್ವಮಾತೆಯು ಈ ರೀತಿಯ ಭಯಂಕರವಾಗಿರುವ ಘಟನೆಗಳನ್ನು ಸ್ವೀಕರಿಸುತ್ತಲೇ ಮತ್ತು ಇದಕ್ಕೆ ಕಾರಣವಾಗಿರುವ ಮತ್ತು ಹಾನಿಕಾರಕವಾಗಿರುವ ಅಸುರರನ್ನು ಕತ್ತರಿಸಲೆಂದೇ ಈ

ಉಗ್ರಕಾಳಿಯ ರೂಪವನ್ನು ಧರಿಸುತ್ತಾಳೆ, ಈ ಮೂಲಕ ಮಾನವ–ನಲ್ಲಿಯೂ ಮತ್ತು ಜಗತ್ತಿನಲ್ಲಿ ಇಂಥ ದುಷ್ಟಶಕ್ತಿಗಳು ಉದಿಸದಂತೆ ನಿಗ್ರಹಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 10/282**

**ಕೃಪಾಳು ಕಪಾಲಿ (ದಯಾಮಯ ಭಿಕ್ಷುಕ)**

ದೇವಾನುದೇವತೆಗಳಿಗೂ ಪರಮಾತ್ಮನಾಗಿರುವ ನಮ್ಮ ಶಿವನು, ಅವನು ಭಿಕ್ಷುಕನೂ(ಕಪಾಲಿಯೂ) ಆಗಿದ್ದಾನೆ. ತನ್ನ ಬಗೆಗೇ ತಾನು ಏನೂ ಅರಿಯದಂತಿರುವ, ಜ್ಞಾನಶೂನ್ಯನ ಹಾಗೆ, ಕಾಲಜಿ ಇಲ್ಲದವನ ರೀತಿಯಲ್ಲಿ ಕಾಣುತ್ತಾನೆ; ಅದೇ ನಮ್ಮ ಕೃಷ್ಣನೋ ತಾರುಣ್ಯಭರಿತನಾಗಿ, ಸ್ನೇಹಪೂರ್ಣವಾಗಿರುವ ಮುದಹಸಿತನಾಗಿ, ಸದಾ ಮೋಜಿನ ಮತ್ತು ಪ್ರೇಮಮಯ ಭಾವದಲ್ಲಿದ್ದಾನೆ. ಏಕೆಂದರೆ ಇದೇ ಅವನ ಸ್ವಭಾವವೂ ಆಗಿದೆ. ಇದೇ ಭಾವದಲ್ಲಿಯೇ ಅವನು ಲೀಲೆಗಿಳಿಯುತ್ತಾನೆ. ಆದರೆ ಯುರೋಪದ ದೇವತೆ ಎಂದಿಗೂ ನಗುವದೇ ಇಲ್ಲ, ಅಥವಾ ಲೀಲೆಗಳಲ್ಲಿಯೂ ತೊಡಗಿಕೊಳ್ಳುವದಿಲ್ಲ. ಏಕೆಂದರೆ ಈ ಘಟನೆಗಳಿಂದ ಅವನ ಮಹಿಮೆಯು ಕುಂಠಿತಗೊಂಡಿದೆ. ಅವನಲ್ಲಿರುವ ದೈವತ್ವದ ಪ್ರಾಮುಖ್ಯವು ಘಾಸಿಗೊಂಡಿದೆ. ಈ ರೀತಿಯ ಬಾಹ್ಯದ ಪ್ರವೃತ್ತಿಗಳಿಂದಾಗಿ ಅದೇ ಅವನಿಗೆ ಸಹಕಾರಿಯಾಗಿರುವ–ದರಿಂದ ಸಂಪತ್ತಿನ ಸಂಕೇತಗಳಾಗಿರುವದರಿಂದ, ಅವರಿಗೆ ಈ ರೀತಿಯ ಸಂಕೇತಗಳು ಪ್ರತ್ಯಕ್ಷವಾಗಿ ಗೋಚರಿಸದೇ, ಅವುಗಳನ್ನು ಸಂಕೇತಗಳ ಮೂಲಕವೇ ಗ್ರಹಿಸುವದಿಲ್ಲ. ಅವರಲ್ಲಿ ದಿವ್ಯತ್ವವೂ ಇಲ್ಲ, ಸೂಕ್ಷ್ಮ ಪ್ರಾಣವನ್ನು ಕಾಣುವ ದೃಷ್ಟಿಯೂ ಇಲ್ಲ. ಅವರಿಗೆ ಕಾಣುವದೆಲ್ಲವೂ ಬರೀ ಭೌತಿಕವು ಮಾತ್ರ. ನಮ್ಮ ಶಿವನು ಭಿಕ್ಷುಕನಾಗಿದ್ದರೂ, ಯಾರೇ ಆಧ್ಯಾತ್ಮಿಕ ತಲ್ಲೀನತೆಯಲ್ಲಿ ಅಪೇಕ್ಷಿಸುವದೆಲ್ಲವನ್ನೂ ಅತ್ಯಂತ ಸುಲಭವಾಗಿಯೇ ಲಭ್ಯಗೊಳಿಸುತ್ತಾನೆ. ಅವನು ಮೂರುಲೋಕಗಳ ಜ್ಞಾನ ಮತ್ತು ಸಂಪತ್ತನ್ನು ಕರುಣಿಸುತ್ತಾನೆ. ಅವನು ತುಂಬ ದಯಾಳುವೂ ಆಗಿದ್ದಾನೆ, ತಪ್ಪುಗಳನ್ನೂ ಸಹಿತ ಮನ್ನಿಸುವ ದಯಾಮಯನಾಗಿದ್ದಾನೆ. ಆದರೆ ಪ್ರಜ್ಞಾವಂತನಿಗೂ ಲಭ್ಯವಾಗದೇ ಇರುವ ಆ ಪ್ರಜ್ಞೆಯು ಮಾತ್ರ ಜನ್ಮಜಾತವಾಗಿರುವ ಸ್ವತ್ತು ಆಗಿದೆ.

ನಮ್ಮ ಪ್ರೇಮಮಯಿ ಕೃಷ್ಣನ ವಿಷಯದಲ್ಲಿ ನೋಡಿದರೆ, ಈ ತುಂಟ ಕುರುಕ್ಷೇತ್ರದ ನಾಯಕನಾಗಿದ್ದಾನೆ. ಲೋಕಗಳಗೆಲ್ಲ ಕಾರಣಕರ್ತೃವಾಗಿದ್ದಾನೆ. ಮಿತ್ರನಾಗಿದ್ದಾನೆ ಜೊತೆಗೆ ವಿಶ್ವದ ಸಂಗಾತಿಯೂ ಆಗಿದ್ದಾನೆ. ಭಾರತದ ಜ್ಞಾನದ ಅಸ್ಮಿತೆಯೂ ಇವನೇ

ಆಗಿದ್ದಾನೆ. ಸೂಕ್ಷ್ಮಾತಿಸೂಕ್ಷ್ಮ ದೃಷ್ಟಿಯನ್ನು, ಈ ಲೌಕಿಕದ ಹೊದಿಕೆಯ ಮೂಲಕ ಆವರಣಗೊಳ್ಳುವ ಭಯಪ್ರದ ಸಂಗತಿಗಳಿಂದ ಮುಕ್ತಗೊಳ್ಳುವ ಎಂದೆಂದಿಗೂ ವಿಚಲಿತಗೊಳ್ಳದ ದೈವೀ ದೃಷ್ಟಿಕೋನವನ್ನು ಹೊಂದಿದ್ದು, ಈ ಮೂಲಕ ಅಂತರಂಗದಲ್ಲಿಯೂ ಸಹಿತ ಬದಲಾವಣೆಯನ್ನು ತಂದು, ಸತ್ಯದ ನೈಜ ಸ್ವರೂಪವನ್ನು ಅರಿತುಕೊಳ್ಳುವಂತೆ ಮಾಡುತ್ತಾನೆ. ಅದೂ ಆಂತರಂಗಿಕವಾಗಿರುವ ಸೂಕ್ಷ್ಮಾತಿಸೂಕ್ಷ್ಮವಾಗಿರುವ ತತ್ತ್ವಗಳನ್ನು ಆಧರಿಸಿಕೊಂಡೇ ರೂಪುಗೊಳ್ಳುವಂತೆ ಮಾಡುತ್ತಾನೆ.

**– ಬಂಗಾಲಿ ಬರಹಗಳು; 253–54**

## ಮಹಾದೇವ ಮತ್ತು ಸತಿಯ ದೃಷ್ಟಾಂತಬೋಧೆ

**– ಅನು: ನಾಗಜ್ಯೋತಿ ಮಾನ್ವಿ**

### ಮಹಾದೇವ ಮತ್ತು ಸತಿ

ಪ್ರಜಾಪತಿ ದಕ್ಷನಿಗೆ ಸತಿ ಎಂಬ ಮಗಳಿದ್ದಳು. ತನ್ನೆಲ್ಲ ಮಕ್ಕಳಿಗಿಂತಲೂ ಆಕೆಯನ್ನು ಹೆಚ್ಚು ಪ್ರೀತಿಸುತ್ತಿದ್ದನು. ಮತ್ತು ಜಗತ್ತಿನ ಒಡೆಯನಾದ ಮಹಾದೇವನೊಂದಿಗೆ ಋಷಿಗಳು ಆಕೆಯನ್ನು ಮದುವೆ ಮಾಡಿಸಿದ್ದರು. ಋಷಿಗಳ ಆಯ್ಕೆ ದಕ್ಷನಿಗೆ ಇಷ್ಟವಿರಲಿಲ್ಲ, ಏಕೆಂದರೆ ಮಹಾದೇವನು ಮನೆಯಿಲ್ಲದ ವೈರಾಗಿ, ಹಗಲಲ್ಲಿ ಕಾಡು ಮೃಗಗಳ ಜೊತೆ, ರಾತ್ರಿಯಲ್ಲಿ ರಾಕ್ಷಸರ ಜೊತೆ ಸಂಘ. ಕೈಯಲ್ಲಿ ಭಿಕ್ಷಾಪಾತ್ರೆ, ಬೂದಿ ಬಳಿದುಕೊಂಡ ದೇಹ, ಹುಲಿಯ ಚರ್ಮವೇ ಆತನ ಬಟ್ಟೆ, ಇವನ್ನು ಬಿಟ್ಟು ಅವನಲ್ಲಿ ಮತ್ತೇನೂ ಕಾಣಿಸಲಿಲ್ಲ. ಏನೂ ಗಳಿಸದ, ಏನೂ ಮಾಡದ, ಗಾಂಜಾ ಸೇದುತ್ತ, ಮನೆಯಿಲ್ಲದ, ಆಸ್ತಿಯಿಲ್ಲದ, ಪದವಿ ಮತ್ತು ವಿದ್ಯೆಯಿಲ್ಲದ, ಜಗತ್ತಿನಲ್ಲಿ ಏನೂ ಪಾಲುದಾರನಾಗಿಲ್ಲದವನಾಗಿದ್ದ ತನ್ನ ಅಳಿಯನ ಬಗ್ಗೆ ತಿಳಿಯುತ್ತಾ ಹೋದಂತೆ ಆತನ ಬಗೆಗಿನ ತಿರಸ್ಕಾರ ಹೆಚ್ಚಾಯಿತು. ಈ ದೃಷ್ಟಾರರಿಗೆ ಕೈಯಲ್ಲಿ ಭಿಕ್ಷಾಪಾತ್ರೆ ಮತ್ತು ಜಡೆಯನ್ನು ಹೆಣೆದುಕೊಂಡವನು ಜಗತ್ತಿನ ಒಡೆಯನಂತೆ ಹೇಗೆ ಕಂಡನು ಎಂದು ಅವನು ಋಷಿಗಳನ್ನು ಮೂರ್ಖರು ಮತ್ತು ಕೆಟ್ಟ ಸಲಹೆಗಾರರು ಎಂದು ಶಪಿಸಿದ. ಆತನು ಒಂದು ಯಜ್ಞವನ್ನು ಮಾಡುವಾಗ ಉದ್ದೇಶಪೂರ್ವಕವಾಗಿ ತನ್ನ ಅಳಿಯನನ್ನು ಬಿಟ್ಟು ಬೇರೆಲ್ಲಾ ದೇವತೆಗಳಿಗೆ ಆಹ್ವಾನ ಕಳಿಸಿದ್ದನು. ಅದರ ಪರಿಣಾಮ ಒಂದು ದುರಂತವೇ ಆಗಿತ್ತು. ಸತಿಯು ತನ್ನ ಒಡೆಯನಿಗಾದ ಅವಮಾನವನ್ನು ಸಹಿಸದೆ

ದುಃಖ ಮತ್ತು ಆಕ್ರೋಶದಿಂದ ತನ್ನ ದೇಹ ತ್ಯಾಗ ಮಾಡಿದಳು ಮತ್ತು ಮರ್ತ್ಯ ಸ್ತರದಿಂದ ಮಾಯವಾದಳು. ಆಗ ಶಕ್ತಿಶಾಲಿಯಾದ, ವಿಶ್ವಗಳನ್ನು ನಾಶಮಾಡಬಲ್ಲ ಮಹಾದೇವನು ಕ್ರೋಧದಿಂದ ದಕ್ಷನ ಯಜ್ಞವನ್ನು ಚೂರುಚೂರು ಮಾಡಿ ಮತ್ತು ಯಜ್ಞಶಾಲೆಯನ್ನು ನಾಶಪಡಿಸಿ ದಕ್ಷನನ್ನು ಹತ್ಯೆಗೈದನು.

*

ಭಾರತದಲ್ಲಿಯೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಎಂದು ಕರೆಯಲ್ಪಡುವ ದಕ್ಷನಿದ್ದನು. ದಕ್ಷನ ಹಾಗೆಯೇ ಸಹ ಶ್ರೇಷ್ಠ ವ್ಯಕ್ತಿಯಾಗಿದ್ದನು. ಅನೇಕ ಸಂತಾನಗಳುಳ್ಳ ಪ್ರಜಾಪತಿ, ಘನತೆ, ಸಮಚಿತ್ತತೆ, ಸುಜ್ಞಾನದಿಂದ ತುಂಬಿದ ಮತ್ತು ದೇವತೆಗಳಿಂದ ಮನ್ನಣೆ ಪಡೆದವನಾಗಿದ್ದನು. ಈ ದಕ್ಷನಿಗೂ ಸಹ ಆತ ಬಹಳ ಪ್ರೀತಿಸುತ್ತಿದ್ದ ಯುವ ಭಾರತ ರಾಷ್ಟ್ರ ಎಂಬ ಮಗಳಿದ್ದಳು. ಆಕೆಯ ಮದುವೆಯು ಸಮಯ ಬಂದಾಗ ಋಷಿಗಳ ಸಲಹೆಯ ಮೇರೆಗೆ ಮಹಾದೇವನನ್ನೇ ತನ್ನ ಮದುಮಗನನ್ನಾಗಿ ಸ್ವೀಕರಿಸಿದಳು ಆತನೇ 'ಭಾರತದ ವಿಧಿ' ಮತ್ತು ಆಕೆಯ ಪತಿದೇವ. ಪವಿತ್ರ ಬನಾರಸದಲ್ಲಿ ಮೊಟ್ಟಮೊದಲ ಬಾರಿಗೆ ಮಹಾದೇವನನ್ನು ಮುಖಾಮುಖಿಯಾಗಿ ನೋಡಿದಳು ಮತ್ತು ಆತನೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡಳು. ಆದರ ಐಕ್ಯತೆಯ ಪವಿತ್ರ ಸೂತ್ರಗಳಾದ ಸ್ವರಾಜ್ಯ, ಸ್ವದೇಶಿ, ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣವೆಂಬ ನಾಲ್ಕು ಮಂತ್ರಗಳಿಂದ ಮದುವೆಯು ಕಲ್ಕತ್ತಾದಲ್ಲಿ ನೆರವೇರಿತು. ದಕ್ಷನಿಗೆ ಈ ಮದುವೆಯು ಇಷ್ಟವಿರಲಿಲ್ಲ. ಆದರೆ ಋಷಿಗಳ ಬೇಡಿಕೆಯಿತ್ತು ಮತ್ತು ಸತಿಯು ಧೃಢವಾಗಿದ್ದಳು. ಹೀಗಾಗಿ ಆತನು ಮದುವೆ ಮಾಡಿಕೊಡಲೇಬೇಕಾಯಿತು. ಆತನು ಋಷಿಗಳನ್ನು ಸ್ವತಂತ್ರವಾಗಿ ಶಪಿಸಿದನು. 'ನನ್ನ ಮಗಳಾದ ಸತಿಗೆ ಅದೆಂತಹ ಗಂಡನನ್ನು ಕಟ್ಟಿದ್ದೀರಿ? ಮನೆಯಿಲ್ಲದ ಭಿಕ್ಷುಕ, ಗಾಂಜಾ ಸೇದುವ ಅರ್ಧ ಮೂರ್ಖನು ಮತ್ತು ಒರಟಾದವನು, ಗುಡ್ಡಗಳಲ್ಲಿ ಕಾಡು ಮೃಗಗಳ ಜೊತೆ ಮತ್ತು ಭೂತಗಳ ಜೊತೆ ಅಲೆದಾಡುವ, ಸಂಸ್ಕೃತಿಯಿಲ್ಲದ, ಜ್ಞಾನೋದಯ ಮತ್ತು ಶಿಕ್ಷಣವಿಲ್ಲದ, ಒರಟು ನಡೆನುಡಿಯ, ಅರೆವಸ್ತ್ರ ಧರಿಸಿದ, ನಿರ್ಗತಿಕ, ಭೂತ–ವರ್ತಮಾನ–ಭವಿಷತ್ ಇಲ್ಲದವನು! ಆದರೂ ಸಹ ಮತಾಂಧರು ಈತನನ್ನು ಜಗದೀಶ ಎಂದು ಕರೆಯುವರು, ಸರ್ವಶಕ್ತನ ಸಾಕಾರರೂಪ ಮತ್ತು ಇನ್ನೇನೋ ಕರೆಯುವರು.' ಹಾಗಾಗಿ ಆತ ತನ್ನ ದುಃಖ ಮತ್ತು ಕ್ರೋಧವನ್ನು ಅಡಗಿಸಿಟ್ಟುಕೊಂಡು ಸೇಡುತೀರಿಸಿಕೊಳ್ಳಲು ನಿರ್ಧರಿಸಿದ್ದನು. ಸರ್ವಶಕ್ತ ಮಹಾದೇವನು, ಭಾರತದ

'ವಿಧಿ'ಯ ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದು ಬರಡು ಭೂಮಿಯಲ್ಲಿ ಅಲೆದಾಡಬೇಕಾಯಿತು, ಬಡವಾದ ಮತ್ತು ನಿರ್ಗತಿಕ, ವೈರಾಗಿಯಾಗಿ ಬೂದಿ ಬಳಿದುಕೊಂಡ ಮತ್ತು ಹುಲಿ ಚರ್ಮವನ್ನು ಧರಿಸಿದ, ತಲೆಯಿಟ್ಟು ಮಲಗಲು ಮನೆಯಿಲ್ಲದವನಾಗಿದ್ದನು. ಮತ್ತು ಆತ ಮದುವೆಗೆ ಬಂದಾಗ ಭಯಾನಕ ವೇಷಭೂಷಣ ಮತ್ತು ದುಷ್ಟರ ಸಂಘದೊಂದಿಗೆ ಕ್ರೂರವಾಗಿ ಗಾಂಜಾ ಸೇದುತ್ತಾ, "ಬಂ ಬಂ ವಂದೇ ಮಾತರಂ" ಎಂದು ಜೋರಾಗಿ ಕೂಗುತ್ತಾ, ಅಗೌರವಯುತವಾಗಿ ಕಾಣುತ್ತಾ ಮತ್ತು ವಿನಯ ಮತ್ತು ಸಂಸ್ಕೃತಿ ಹೊಂದಿದ ವ್ಯಕ್ತಿಯಾದ ದಕ್ಷನಿಗೆ ಸಹಕರಿಸಲು ಯೋಗ್ಯತೆ ಹೊಂದಿಲ್ಲದ, ಬಡವ, ಒರಟು ಕೂದಲಿನ, ಅರೆವಸ್ತ್ರಧಾರಿ, ವರ್ತಮಾನ ಮತ್ತು ಭವಿಷ್ಯತ್ತಿನಲ್ಲಿ ಅಸ್ತಿತ್ವವನ್ನು ನಿರೀಕ್ಷಿಸದ; ಆತನ ಜೊತೆಗಾರರು ಲಾಠಿ ಹಿಡಿದ ಸ್ವಯಂ ಸೇವಕರಾಗಿದ್ದರು. ಮತ್ತು ಇನ್ನೂ ಕಳವಳಕಾರಿ ಭ್ರಮಾಧೀನ ವ್ಯಕ್ತಿತ್ವವನ್ನೊಳಗೊಂಡಿತ್ತು. ಆದರೆ ಇದು ದಕ್ಷನ ಸೌಂದರ್ಯಯುತ ಮಂಟಪಕ್ಕೆ ವ್ಯತಿರಿಕ್ತವಾಗಿತ್ತು. ಈ ಅಸಭ್ಯ ರೂಪದವನೇ ವಿಶ್ವದ ಸೃಷ್ಟಿ ಮತ್ತು ಲಯಕರ್ತ, ಭಾರತದ ಮತ್ತು ಜಗತ್ತಿನ ಹಣೆ ಬರಹವನ್ನು ತನ್ನ ಕೈಯಲ್ಲಿ ಹಿಡಿದವ ಎಂದು ದಕ್ಷನಿಗೆ ಹೇಗೆ ತಾನೇ ಅರಿವಾಗಲು ಸಾಧ್ಯ? ಋಷಿಗಳಿಗೆ ಮಾತ್ರ ಇದು ತಿಳಿದಿತ್ತು. ಮತ್ತು ಅವರು ತಾವು ಅನುಭವಿಸಿದ ನೋವುಗಳಿಂದಾಗಿ ದ್ರಷ್ಟಾರರು ಎಂದು ಕರೆಯಲ್ಪಟ್ಟರು. ಮದುವೆಯ ಒಂದು ವರ್ಷದ ನಂತರ ದಕ್ಷನು ಒಂದು ಶ್ರೇಷ್ಠವಾದ ಯಜ್ಞವನ್ನು ಸಿದ್ಧಪಡಿಸಿದ್ದನು. ಮತ್ತು ಬಹಳ ಆಡಂಬರದಿಂದ ಆಯೋಜಿಸಿದ್ದನು, ಆದರೆ ಸಶಕ್ತನಾದ ಮಹಾದೇವನನ್ನು ಈ ಯಜ್ಞದಿಂದ ದೂರವಿಡಲು ನಿರ್ಧರಿಸಿದ್ದನು. ಮತ್ತು ಯಜ್ಞದಲ್ಲಿ ಭಾಗಿಯಾಗಲು ತನ್ನ ಅಳಿಯನಿಗೆ ಇಷ್ಟವಾಗದ ಕೆಲವು ನಿಯಮಗಳನ್ನು ಅಳವಡಿಸಿದ್ದನು. ಅದರ ಪರಿಣಾಮ ಎಲ್ಲರಿಗೂ ತಿಳಿದೇ ಇತ್ತು. 'ಭಾರತದ ವಿಧಿ' ಯಾರನ್ನು ದಕ್ಷನು ಹೊರಗಿರಿಸಲು ಪ್ರಯತ್ನಿಸಿದ್ದನೋ ಅವನು ಕ್ರೋಧದಿಂದ ಬಂದು ಯಜ್ಞಶಾಲೆಯ ಮಹಾಗೋಡೆಗಳನ್ನು ಕೆಡವಿದನು. ಮತ್ತು ದಕ್ಷನ ಜನರು ಅವನನ್ನು ತಡೆಯಲು ಪ್ರಯತ್ನಿಸಿದಾಗ ಅದನ್ನು ಮುರಿದು ಯಜ್ಞಶಾಲೆಯನ್ನು ಪ್ರವೇಶಿಸಿದನು. ಮತ್ತು ಯಜ್ಞವನ್ನು ಛಿದ್ರವಾಗಿಸಿ ದಕ್ಷನನ್ನು ಕೊಂದನು.

*

ಕಥೆಯು ಹೀಗೆ ಮುಂದುವರಿಯುತ್ತ ಮಹಾದೇವನು ದಕ್ಷನ ಪರವಾಗಿ ಬಂದು ಆತನಿಗೆ ಮರುಜೀವ ನೀಡಿದನು. ಆದರೆ ದಕ್ಷನ ತಲೆಯನ್ನು ಹುಡುಕಲು

ಅದು ಕಾಣದಾದಾಗ, ಪ್ರಜಾಪತಿಯ ಮುಂಡದ ಮೇಲೆ ಮೇಕೆಯ ತಲೆಯನ್ನು ಅಖಂಡವಾಗಿ ಇಡಲಾಯಿತು. ಯಾವಾಗ ಆಧುನಿಕ ದಕ್ಷ ಸತ್ತನೋ ಆಗ ಅಲ್ಲಿ ಆತನನ್ನು ಪುನರುಜ್ಜೀವನಗೊಳಿಸುವ ವಿಚಾರವು ವ್ಯಕ್ತವಾಯಿತು. ಆದರೆ ಆತನ ತಲೆಯು ದೊರಕದೇ ಹೋಯಿತು. ಕೆಲವರು ಅದು ಕಳೆದುಹೋಯಿತು ಎಂದು ಕೊಂಡಿದ್ದರು, ಇನ್ನೂ ಕೆಲವರು ಕಾನೂನಿನ ಪ್ರಕಾರ ಒಮ್ಮೆ ಕಾರ್ಯಗೈದ ನಂತರ ಮತ್ತೆ ಬದಲಾಯಿಸಲು ಸಾಧ್ಯವಿಲ್ಲ ಎಂದರು. ಅದರ ಅನುಗುಣವಾಗಿ ಈ ಬುದ್ಧಿವಂತರು ಮೇಕೆಯ ತಲೆಯನ್ನು ಕಂಡರು. ಮತ್ತು ಅದನ್ನು 'ಪಂಥ' ಎಂದು ಕರೆದರು. ಮತ್ತು ದಕ್ಷನ ಮುಂಡದ ಮೇಲಿಟ್ಟರು. ಮತ್ತು ಅದಕ್ಕೆ ಜೀವ ನೀಡಿದರು. ಮತ್ತು ಈ ಕಾಲಿಲ್ಲದ ಮೇಕೆ ತಲೆಯ ಅಸಮಂಜಸತೆಯನ್ನು ಭವಿಷ್ಯದಲ್ಲಿ ದಕ್ಷನೆಂದು ಕರೆಯುವಂತೆ ಪ್ರಮಾಣೀಕರಿಸಿದರು. ದುರಾದೃಷ್ಟವಶಾತ್ ಅವರು ಮೇಕೆಯ ತಲೆಯನ್ನು ತಪ್ಪಾಗಿ ಇಡುವದರ ಮೂಲಕ ವಿಕೃತಗೊಳಿಸಿದರು. ಹಾಗಾಗಿ ಅದರ ಮುಖವು ಹಿಂದಕ್ಕೆ ತಿರುಗಿದೆ. ಮತ್ತು ಈ ಅಂಗವಿಕಲ ದೈತ್ಯಾಕಾರನನ್ನು ಬಲವಾಗಿ ತಳ್ಳಿಕೊಂಡು ಮುಂದೆ ಹೋಗಲ್ಪಟ್ಟರೆ ಅದರ ಮುಂದುವರಿಕೆಯು ಒಂದು ನಿರ್ಗಮನವಾಗುತ್ತದೆ. ಅದರ ಕಣ್ಣುಗಳು ಭೂತಕಾಲದ ಕಡೆಗೆ ತಿರುಗುತ್ತವೆಯೇ ಹೊರತು ಭವಿಷ್ಯದ ಕಡೆಗೆ ಅಲ್ಲ.

*

ಅದೇ ಸಮಯದಲ್ಲಿ ಸರ್ವಶಕ್ತನಾದ ಮಹಾದೇವನು ಸತಿಯ ಮೃತದೇಹವನ್ನು ತನ್ನ ತಲೆಯ ಮೇಲೆ ಹೊತ್ತು ಜಗತ್ತಿನಾದ್ಯಂತ ಅಲೆದಾಡಿದನು, ವಿನಾಶದ ಕ್ರೂರ ನೃತ್ಯಕ್ಕೆ ಜಗತ್ತಿನ ಬುನಾದಿಗಳೇ ನಡುಗಿದವು. ಸತಿಯು ತನ್ನ ಹಳೆಯ ದೇಹವನ್ನು ಕಳಚಿದಳು ಮತ್ತು ಜನರು ಆಕೆ ಮೃತಳಾಗಿದ್ದಾಳೆಂದು ಹೇಳಿದರು. ಆದರೆ ಆಕೆ ಮೃತಳಾಗಿಲ್ಲ, ಕೇವಲ ಜನರ ಕಣ್ಣುಗಳಿಂದ ಕಣ್ಮರೆಯಾಗಿದ್ದಾಳೆ. ಮತ್ತು ದೇವತೆಗಳು ಸತಿಯ ದೇಹವನ್ನು ಛಿದ್ರಗೊಳಿಸಿದಾಗ ಅದು ಭಾರತದಲ್ಲೆಲ್ಲಾ ಹರಡಿದವು. ಮತ್ತೊಂದು ದೃಷ್ಟಾಂತವೆಂದರೆ ಕಾಂಗ್ರೇಸನ ಮರಣದ ನಂತರ ಕಾಂಗ್ರೇಸನ ಮಗಳಾದ ಭಾರತದ ಐಕ್ಯತೆಯು ತುಂಡುಗಳು ಮತ್ತು ಗುಂಪುಗಳಾಗಿ ಒಡೆದು–ಹೋಗಲೇಬೇಕಾಯಿತು. ಸಮಾವೇಷವು ಈಗಾಗಲೇ ಪಕ್ಷಗಳನ್ನು ಹುಟ್ಟುಹಾಕಿದೆ. ಮತ್ತು ಮುಂಬರುವ ಕೆಟ್ಟ ಸಮಯದಲ್ಲಿ ರಾಷ್ಟ್ರೀಯವಾದಿಗಳು ಸಹ ಬೇರೆಬೇರೆ ಪಕ್ಷಗಳಾಗಿ ಒಡೆದು ಹೋಗುತ್ತವೆ. ಆಗ ಉಗ್ರವಾದವು ಎಷ್ಟು ಬೆಳೆಯುತ್ತದೆಂದರೆ, ಈಗಿನ ಉಗ್ರವಾದವು ಕ್ಷುಲ್ಲಕವೆನಿಸುತ್ತದೆ. ಮತ್ತು ಭಾರತದಲ್ಲಿ ರಾಜಕೀಯ ಜೀವನವು

ಅರಾಜಕತೆಯತ್ತ ಮುಖಮಾಡುತ್ತದೆ. ಆದರೆ ಇದು ಕೊನೆವರೆಗೆ ಹೀಗೇ ಇರುವದಿಲ್ಲ. ಸತಿಯು ಮತ್ತೆ ಜನ್ಮತಾಳುತ್ತಾಳೆ. ಶಕ್ತಿಶಾಲಿ ಪ್ರಯತ್ನವೆಂಬ ಉನ್ನತ ಶಿಖರಗಳಲ್ಲಿ ಬೃಹತ್ ಅಭೀಪ್ಸೆಯೊಂದಿಗೆ ಅಪ್ರತಿಮ ಸಮರ್ಪಣೆ ಮಾಡಿ, ಉತ್ತಮವಾದ ಮತ್ತು ಹೆಚ್ಚು ಸುಂದರವಾದ ದೇಹದಲ್ಲಿ ಆಕೆ ಮತ್ತೆ ಹುಟ್ಟುತ್ತಾಳೆ. ಕಠಿಣ ತಪಸ್ಸುಗೈದು ಮತ್ತೊಮ್ಮೆ ಮಹಾದೇವನನ್ನು ಭೇಟಿಯಾಗುತ್ತಾಳೆ. ಮತ್ತು ಹೆಚ್ಚು ಶ್ರೇಷ್ಠವಾದ ರೀತಿಯಲ್ಲಿ ಆತನನ್ನು ಮದುವೆಯಾಗುತ್ತಾಳೆ. ಭವಿಷ್ಯದಲ್ಲಿ ಉನ್ನತ ಸಂಕೇತಗಳನ್ನು ಹೊತ್ತು ಸಂತೋಷಕರ ಮತು ್ತ ಉಜ್ವಲ ಭವಿಷ್ಯದೆಡೆಗೆ ನಡೆಯುತ್ತಾಳೆ. ಇದನ್ನು ದೇವತೆಗಳ ಗ್ರಂಥದಲ್ಲಿ ಬರೆಯಲಾಗಿದೆ. ಮತ್ತು ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಸತಿಯು ಮಹಾದೇವನನ್ನು ಮದುವೆಯಾಗುತ್ತಾಳೆ. ಭಾರತೀಯ ರಾಷ್ಟ್ರೀಯತೆಯು ದೈವೀ ಮತ್ತು ಶಕ್ತಿಶಾಲಿ ವಿಧಿಯನ್ನು ಹೊಂದಿಯೇತೀರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/1073–77 – ಶ್ರೀ ಅರವಿಂದರು**

## ಪರಮಾತ್ಮನಾಗಿ ಶಿವ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಕಾಳಿ**

*ಇಂದು ಪ್ರಾರ್ಥಿಸುತ್ತಿರಬೇಕಾದರೆ, ಕಾಳಿ ಮಾತೆಯನ್ನು ಕಂಡೆ. ಅವಳು ಕಪ್ಪಾಗಿದ್ದಳು ಮತ್ತು ವಸ್ತ್ರರಹಿತಳಾಗಿದ್ದಳು ಮತ್ತು ಶಿವನ ಬೆನ್ನ ಮೇಲೆ ತನ್ನ ಕಾಲನ್ನಿರಿಸಿ ನಿಂತಿದ್ದಳು. ಕಾಳಿ ಮಾತೆಯು ಈ ರೂಪದಲ್ಲಿ ಏಕೆ ಕಾಣುತ್ತಾಳೆ ಮತ್ತು ಯಾವ ಸ್ತರದಲ್ಲಿ ಅವಳು ಹೀಗೆ ಕಾಣುತ್ತಾಳೆ?*

ಪ್ರಾಣಿಕ ಸ್ತರದಲ್ಲಿ ಅವಳು ಆ ರೀತಿ ಕಾಣುತ್ತಾಳೆ. ನಾಶಮಾಡುವ ಶಕ್ತಿಯ ರೂಪವಾಗಿ ಕಾಳಿ – ಅಜ್ಞಾನದಲ್ಲಿ ಕಷ್ಟಗಳಿಂದ ಸುತ್ತುವರೆದಿರುವ, ದೈವೀಕತೆಯ ಮೇಲೆ ತನ್ನ ಪಾದವನ್ನಿಟ್ಟು ನಿಲ್ಲುವವರೆಗೂ ಕುರುಡು ಹೋರಾಟದಲ್ಲಿ ಎಲ್ಲವನ್ನೂ ತುಳಿಯುತ್ತಿರುವ, ಸದೆಬಡಿಯುತ್ತಿರುವ ಪ್ರಕೃತಿ ಶಕ್ತಿಯ ಸಂಕೇತವಾಗಿದ್ದಾಳೆ – ಆ ಮೇಲೆ ಅವಳು ತನ್ನ ನೈಜ ಸ್ಥಿತಿಗೆ ಮರಳುತ್ತಾಳೆ ಮತ್ತು ಹೋರಾಟ ಹಾಗೂ ವಿನಾಶ ಕೊನೆಗೊಳ್ಳುತ್ತವೆ. ಅದುವೇ ಆ ಸಂಕೇತದ ಮಹತ್ವ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/68–69**

## ದೇವರುಗಳ ಸ್ವರೂಪ

> *ನಾನೊಬ್ಬರ ಜೊತೆ (X ಎನ್ನುವವರ ಜೊತೆ) ಮಾತನಾಡುತ್ತಿದ್ದೆ, ಆಗ ಅವರು "ಅಥೀನಾ ದೇವತೆ ಮಹೇಶ್ವರಿಯ ರೂಪವಾಗಿದ್ದಾಳೆ ಅಥವಾ ಅವಳನ್ನು ಪ್ರತಿನಿಧಿಸುತ್ತಾಳೆ" ಎಂದು ಹೇಳಿದರು (ಜಾಣ್ಮೆ, ನೈಪುಣ್ಯ ಮತ್ತು ಯುದ್ಧಕಲೆಗೆ ಸಂಬಂಧಿಸಿದ ಹನ್ನೆರಡು ಪ್ರಮುಖ ಒಲಿಂಪಿಯನ್ ದೇವರುಗಳಲ್ಲಿ/ದೇವತೆಗಳಲ್ಲಿ ಅಥೀನಾ ದೇವತೆ ಒಬ್ಬಳು). ಶಿವನಂತಹ ದೇವರುಗಳ ನನ್ನ ಕೆಲವು ದರ್ಶನಗಳು ಮಾನವ ರೂಪಗಳನ್ನು ಹೋಲುವ ರೂಪದಲ್ಲಿದ್ದವು, ಆದರೆ ಇದು ಮಾನವನ ಮನಸ್ಸಿಗೆ ಸಂಬಂಧಿಸಿದ ಸ್ತರದಲ್ಲಿ ನಾನು ನೋಡಿದ್ದರಿಂದ ಹೀಗಾಗಿರಬಹುದೆಂದು ಯೋಚಿಸಿದೆ ಮತ್ತು ನನ್ನ ಮನಸ್ಸು ಆ ರೂಪಗಳನ್ನು ಆ ರೀತಿಯಲ್ಲಿ ನೋಡಿತು. ಭೌತಿಕದ ಸೃಷ್ಟಿ ನಡೆಯುವ ಮೊದಲು, ಪ್ರಾಣಿಕ ಮತ್ತು ಮಾನಸಿಕ ಪ್ರಪಂಚಗಳು ಅಸ್ತಿತ್ವದಲ್ಲಿದ್ದವು ಮತ್ತು ಅದಕ್ಕೂ ಮೊದಲು ಉನ್ನತ ಗೋಳಾರ್ಧದ ಸ್ತರಗಳು ಅಸ್ತಿತ್ವದಲ್ಲಿದ್ದವು. ಆದರೆ ಈ ಸ್ತರಗಳಲ್ಲಿ ದೇವರುಗಳು ರೂಪ ಮತ್ತು ಆಕಾರಗಳೊಂದಿಗೆ ಅಸ್ತಿತ್ವದಲ್ಲಿರುವರೆ ಅಥವಾ ಅವರು ರೂಪಗಳಿಲ್ಲದೆ ನಿರಾಕಾರ ಶಕ್ತಿಗಳಾಗಿ ಮಾತ್ರ ಅಸ್ತಿತ್ವದಲ್ಲಿರುವರೆ?*

ದೇವರುಗಳ ಹಾಗೆ ಮನುಷ್ಯ ತನಗಿಷ್ಟವಾದ ರೂಪಗಳನ್ನು ನಿರ್ಮಿಸಿಕೊಳ್ಳಬಹುದು; ಆದರೆ ಈ ರೂಪಗಳು ಸಹ ದೇವರಿಗೆ ಸಂಬಂಧಿಸಿದ ಸ್ತರಗಳಿಂದ ಮನುಷ್ಯನ ಮನಸ್ಸಿನಲ್ಲಿ ಸ್ಫೂರ್ತಿ ಪಡೆದಿವೆ. ಎಲ್ಲ ಸೃಷ್ಟಿಯು ಎರಡು ಮಗ್ಗುಲುಗಳನ್ನು ಹೊಂದಿದೆ, ಸಾಕಾರ(ಮೂರ್ತ) ಮತ್ತು ನಿರಾಕಾರ(ಅಮೂರ್ತ); ದೇವರುಗಳು ಕೂಡ ನಿರಾಕಾರರಾಗಿದ್ದೂ ರೂಪಗಳನ್ನು ಹೊಂದಿದ್ದಾರೆ, ಆದರೆ ದೇವರು ಅನೇಕ ರೂಪಗಳನ್ನು ಪ್ರಕಟವಾಗಬಹುದು, ಇಲ್ಲಿ ಮಹೇಶ್ವರಿ, ಅಲ್ಲಿ ಪಲ್ಲಾಸ್ ಅಥೀನ್. ಮಾಹೇಶ್ವರಿಯು ತನ್ನ ಅಭಿವ್ಯಕ್ತಿಗಳಲ್ಲಿ ಅನೇಕ ರೂಪಗಳನ್ನು ಹೊಂದಿದ್ದಾಳೆ, ದುರ್ಗೆ, ಉಮಾ, ಪಾರ್ವತಿ, ಚಂಡಿ ಇತ್ಯಾದಿ. ದೇವರುಗಳು ಮಾನವ ರೂಪಗಳಿಗೆ ಸೀಮಿತವಾಗಿಲ್ಲ – ಮನುಷ್ಯನೂ ಸಹ ಅವರನ್ನು ಮಾನವ ರೂಪಗಳಲ್ಲಿ ಮಾತ್ರ ನೋಡಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/66–67**

ಸ್ಥಿರತೆ ಹಾಗೂ ಚಲನೆ ಇವುಗಳು ಪರಿಪೂರ್ಣತೆಯ (ಪರಮಾತ್ಮನ) ನಮ್ಮ ಮಾನಸಿಕ ನಿರೂಪಣೆಗಳು ಮಾತ್ರ, ಏಕತ್ವ ಹಾಗೂ ಬಹುತ್ವ ಅಭಿವ್ಯಕ್ತಿ ಇದ್ದಂತೆ ಎನ್ನುವುದನ್ನು

ನೆನಪಿನಲ್ಲಿಟ್ಟುಕೊಳ್ಳಬೇಕು. ಪರಿಪೂರ್ಣತೆಯು, ಏಕತ್ವದ ಹಾಗೂ ಬಹುತ್ವದ ಆಚೆಗಿನ ಸಂಗತಿ ಇದ್ದಂತೆ, ಅದು ಸ್ಥಿರತೆಯನ್ನು ಹಾಗೂ ಚಲನೆಯನ್ನು ಮೀರಿದ ಸಂಗತಿಯೂ ಆಗಿದೆ. ಆದರೆ ಅದು ತನ್ನ ಶಾಶ್ವತ ಸಮತೋಲನವನ್ನು ಏಕತ್ವದಲ್ಲಿ ಹಾಗೂ ಸ್ಥಿರತೆಯಲ್ಲಿ ಪಡೆದುಕೊಳ್ಳುತ್ತದೆ ಮತ್ತು ಚಲಿಸುವ ಹಾಗೂ ಬಹು ರೂಪಗಳಲ್ಲಿ ತನ್ನ ಸುತ್ತ ಅಪರಿಮಿತವಾಗಿ, ಕಲ್ಪನಾತೀತವಾಗಿ, ನಿರ್ಭಯವಾಗಿ ಪರಿಭ್ರಮಿಸುತ್ತದೆ. ವಿಶ್ವ–ಅಸ್ತಿತ್ವವು, ದೇವರ ದೇಹವನ್ನು ಅಸಂಖ್ಯಾತವಾಗಿ ವೃದ್ಧಿಗೊಳಿಸುವಂಥ ಶಿವನ ಮೋಹಕ ನೃತ್ಯವಾಗಿದೆ. ಅದು ಆ ಶ್ವೇತ ಅಸ್ತಿತ್ವವನ್ನು ಅದು ಎಲ್ಲಿತ್ತೋ ಮತ್ತು ಏನಾಗಿತ್ತೋ, ಎಂದೆಂದಿಗೂ ನಿಖರವಾಗಿ ಹಾಗೆಯೇ ಉಳಿಸುತ್ತದೆ; ಅದರ ಏಕೈಕ ಅಪ್ಪಟ ಉದ್ದೇಶ ನೃತ್ಯ ಮಾಡುವ ಆನಂದವಾಗಿದೆ.

ಆದರೆ ನಾವು ಪರಿಪೂರ್ಣ ಸತ್ಯವನ್ನು ಸ್ಥಿರತೆ ಹಾಗೂ ಚಲನೆಯ ಆಚೆ, ಏಕತೆ ಹಾಗೂ ಬಹುತ್ವದ ಆಚೆ ವಿವರಿಸಲು ಅಥವಾ ಯೋಚಿಸಲು ಸಾಧ್ಯವಿಲ್ಲವಾದ್ದರಿಂದ, – ಅದು ನಮ್ಮ ಕಾರ್ಯವೂ ಅಲ್ಲ, – ನಾವು ಈ ಉಭಯ (ದ್ವಂದ ಅಂಶ) ಅಂಶವನ್ನು ಸ್ವೀಕರಿಸಲೇಬೇಕು, ಶಿವ ಮತ್ತು ಕಾಳಿ ಇಬ್ಬರನ್ನೂ ಒಪ್ಪಿಕೊಳ್ಳಿ. ಕಾಲರಹಿತ, ದೇಶರಹಿತ ಶುದ್ಧ ಅಸ್ತಿತ್ವಕ್ಕೆ ಏಕ ಹಾಗೂ ಸ್ಥಿರವಾದುದಕ್ಕೆ ಸಂಬಂಧಿಸಿದಂತೆ, ಮಿತ ಹಾಗೂ ಅಮಿತತೆಗೆ ಅನ್ವಯಿಸಲಾರದ ಕಾಲ ಹಾಗೂ ದೇಶದಲ್ಲಿ ಅಮಿತವಾದ ಈ ಚಲನೆ/ಕ್ರಿಯೆ ಏನು ಎನ್ನುವುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿ. ಶುದ್ಧ ಅಸ್ತಿತ್ವದ ಬಗ್ಗೆ, ಸತ್ಯದ ಬಗ್ಗೆ ಶುದ್ಧ ವಿವೇಕ, ಅಂತಃಪ್ರಜ್ಞೆ ಮತ್ತು ಅನುಭವ ಏನು ಹೇಳುತ್ತವೆ ಎಂಬುದನ್ನು ನಾವು ನೋಡಿದ್ದೇವೆ; ಬಲದ ಬಗ್ಗೆ, ಶಕ್ತಿಯ ಬಗ್ಗೆ, ಕ್ರಿಯೆಯ ಬಗ್ಗೆ ಅವುಗಳು ಏನು ಹೇಳುತ್ತವೆ?

ಆ ಮಹಾಶಕ್ತಿಯು ಬರೀ ಶಕ್ತಿಯೇ, ಅದು ಬರೀ ಚಲನೆಯ/ಕ್ರಿಯೆಯ ವಿವೇಕರಹಿತ ಶಕ್ತಿಯೇ ಅಥವಾ ನಾವಿರುವ ಈ ಲೌಕಿಕ ಪ್ರಪಂಚದಲ್ಲಿ ಹೊರಹೊಮ್ಮುವಂತೆ ತೋರುವ ಪ್ರಜ್ಞೆಯು ಅದರ ಅದ್ಭುತ ಪರಿಣಾಮಗಳಲ್ಲಿ ಒಂದಾಗದೆ ಅದರ ನೈಜ ಹಾಗೂ ಗುಪ್ತ ಸ್ವಭಾವವಾಗಿದೆಯೇ ಎಂದು ಮೊದಲು ನಮ್ಮನ್ನು ನಾವು ಕೇಳಿಕೊಳ್ಳಬೇಕಾಗಿದೆ. ವೇದಾಂತದ ಭಾಷೆಯಲ್ಲಿ ಹೇಳುವುದಾದರೆ, ಶಕ್ತಿಯು ಬರೀ ಪ್ರಕೃತಿಯೇ, ಕ್ರಮದ ಮತ್ತು ಪ್ರಕ್ರಿಯೆಯ ಒಂದು ಚಲನೆ ಮಾತ್ರವೇ, ಅಥವಾ ಪ್ರಕ್ರತಿಯು ನಿಜವಾಗಿಯೂ ಅದರ ಸೃಜನಾತ್ಮಕ ಅಂತಃಸಾಕ್ಷಿಯಲ್ಲಿನ ಚಿತ್‌ದ ಪ್ರಭಾವವಾಗಿದೆಯೇ? ಈ ಪ್ರಮುಖ ಸಮಸ್ಯೆಯ ಮೇಲೆ ಉಳಿದೆಲ್ಲವೂ ಅವಲಂಬಿಸಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21–22/85–86**

## ಶಿವ ಮತ್ತು ಬುದ್ಧ

*ಶ್ರೀಮಾತೆಯವರೆ, ಬುದ್ಧನ ಬಗ್ಗೆ ನನ್ನಲ್ಲೊಂದು ಪ್ರಶ್ನೆಯಿದೆ. ದೇವರು ಭೂಮಿಯ ಮೇಲೆ ಇರಬಹುದೆಂದು ತೋರಿಸಲು (ದೇವರ) ಅವತಾರವು ಭೂಮಿಯ ಮೇಲಾಗುತ್ತದೆ ಎಂದು ನೀವು ಹೇಳಿದೀರಿ. ಹಾಗಿದ್ದಾಗ, ಅವನು (ಬುದ್ಧನು) ವ್ಯತಿರಿಕ್ತವಾದದ್ದನ್ನು ಏಕೆ ಬೋಧಿಸಿದ? ಅವನೊಬ್ಬ ಅವತಾರ, ಹೌದು ಅಥವಾ ಅಲ್ಲವೆ?*

ಆ ವಿಷಯವೇ! ಕೆಲವರು ಅವನು ಅವತಾರವೆಂದು ಕೆಲವರು ಅವತಾರವಲ್ಲವೆಂದು ಹೇಳುತ್ತಾರೆ. ನಿಮಗೆ ನಿಜ ಸಂಗತಿ ಹೇಳಬೇಕೆಂದರೆ, ಅದು.... ಮೊದಲ ಸಂಗತಿ ಏನೆಂದರೆ, ದೇವರು ಭೂಮಿಯ ಮೇಲೆ ಇರಬಹುದೆಂದು ಸಾಧಿಸಲು (ದೇವರ) ಅವತಾರವು ಭೂಮಿಯ ಮೇಲಾಗುತ್ತದೆ ಎಂದು ನನ್ನ ಅನಿಸಿಕೆ. ಅದನ್ನು ಸಾಕ್ಷಾತ್ಕಾರದಿಂದ ಸಾಬೀತುಪಡಿಸಿದ ಹಾಗೆ ಪದಗಳಿಂದ ಸಾಬೀತುಪಡಿಸಲಾಗುವುದಿಲ್ಲ; ಮತ್ತು ಪರಿವರ್ತಕ ಹಾಗೂ ವಿನಾಶಕ ದೈವೀ ಅಂಶದ ಬದಲಿಗೆ ಖಚಿತವಾಗಿ ಅವತಾರವಾಗುವುದು ರಚನಾತ್ಮಕವಾದ ಹಾಗೂ ಸಂರಕ್ಷಕವಾದ ದೈವೀ ಅಂಶವು ಎಂದು ಭಾವಿಸುತ್ತೇನೆ. ನೋಡಿ, ಭಾರತದಲ್ಲಿ ತಿಳಿದಿರುವ ಭಾರತೀಯ ಹೆಸರುಗಳನ್ನು ಬಳಸಲು, ದೇವರು ಭೂಮಿಯ ಮೇಲೆ ಬರಬಹುದು ಎಂದು ಸಾಬೀತುಪಡಿಸಲು ಬರುವಂಥ ಆ ಅವತಾರಗಳು ವಿಷ್ಣುವಿನ ಅವತಾರಗಳು ಎಂದು ನಾನು ಭಾವಿಸುತ್ತೇನೆ; ಆದರೆ ಪ್ರತಿ ಬಾರಿ ಶಿವನು ಭೂಮಿಯ ಮೇಲೆ ಪ್ರಕಟವಾದಾಗ, ಒಂದು ಭ್ರಾಂತಿಯ ವಿರುದ್ಧ ಹೋರಾಡುವ ಮತ್ತು ಇದ್ದದ್ದನ್ನು ನಾಶಮಾಡಲು ಪ್ರಯತ್ನಿಸುವ ಜೀವಿಗಳಲ್ಲಿ ಅವನು ಯಾವಾಗಲೂ ಪ್ರಕಟಗೊಳ್ಳುತ್ತಾನೆ.

ಬುದ್ಧನು ಒಬ್ಬ ಅವತಾರವೆಂದು ಭಾವಿಸಲು ನನ್ನಲ್ಲಿ ಕಾರಣಗಳಿವೆ. ನಿಖರವಾಗಿ ಹೇಳಬೇಕೆಂದರೆ, ಅವನು ಶಿವನಲ್ಲಿನ ಸಾಮರ್ಥ್ಯ/ಪ್ರಭಾವವನ್ನು ಪ್ರಕಟಗೊಳಿಸಿದ. ಶಿವನ ಅದೇ ಅನುಕಂಪ, ಎಲ್ಲ ದುಃಖದ ಅದೇ ತಿಳುವಳಿಕೆ ಮತ್ತು ಪರಿವರ್ತನೆ ಮಾಡುವ ಉದ್ದೇಶಕ್ಕಾಗಿ ನಾಶ ಮಾಡುವಂಥ ಅದೇ ಸಾಮರ್ಥ್ಯ, ಆದರೆ ರಚಿಸುವುದಕ್ಕಿಂತ ಹೆಚ್ಚು ವಿನಾಶ ಮಾಡುವ ಪ್ರಭಾವ. ಅವನ ಕಾರ್ಯವು ಹೆಚ್ಚು ರಚನಾತ್ಮಕವಾಗಿಲ್ಲ ಎಂದು ತೋರುತ್ತದೆ. ಅಹಂಕಾರಿಯಾಗಿರಬಾರದೆಂದು, ಕಾರ್ಯ ರೂಪದಲ್ಲಿ ಮನುಷ್ಯರಿಗೆ ಕಲಿಸುವ ದೃಷ್ಟಿಕೋನದಿಂದ ಅದು ಬಹಳ ಅಗತ್ಯವಾಗಿತ್ತು. ಆದರೆ ತಾತ್ವಿಕವಾಗಿ ಇದು ಭೂಮಿಯ ರೂಪಾಂತರಣ ಕಾರ್ಯದಲ್ಲಿ ಹೆಚ್ಚು ಸಹಾಯಕವಾಗಿಲ್ಲ.

ನಾನು ಹೇಳಿದ ಹಾಗೆ, ಅದು ಭೂಮಿಯ ಜೀವನಲ್ಲಿ ಉನ್ನತ ಪ್ರಜ್ಞೆಯ ಅವರೋಹಣವಾಗಲು ಸಹಾಯ ಮಾಡುವ ಬದಲು, ಅದು ಪ್ರಜ್ಞೆಯ ಪ್ರತ್ಯೇಕತೆಯನ್ನು ಬಲವಾಗಿ ಪ್ರೋತ್ಸಾಹಿಸಿದೆ. ಅಂದರೆ ಸತ್ಯವಾದ್ದು ಮಾತ್ರ ಎಲ್ಲ ಬಾಹ್ಯ ಅಭಿವ್ಯಕ್ತಿಯಿಂದ ಪ್ರತ್ಯೇಕವಾಗಿದೆ ಎಂದು ಅವನು ಹೇಳಿದ್ದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 7/292–93**

**ಪುರಾಣಗಳ ದೇವರುಗಳು**

ಈ ಶಾಶ್ವತವಾದ ಬದಲಾವಣೆಯ ಸಂಪ್ರದಾಯವು ಯಾವುದೇ ತತ್ವದ ನಾಶದಿಂದ ಮುಂದುವರೆದಿಲ್ಲ, ಆದರೆ ಪ್ರಮುಖ ವೈದಿಕ ರೂಪಗಳು ಕ್ರಮೇಣ ಮರೆಯಾಗುವುದರ ಮೂಲಕ ಮತ್ತು ಇತರರ ಪರ್ಯಾಯ ರೂಪಗಳಿಂದ ಅದು ಮುಂದುವರಿಯಿತು. ಅಲ್ಲಿ ಸಂಕೇತ ಹಾಗೂ ಆಚಾರ ಮತ್ತು ವ್ರತಾಚರಣೆಗಳ ಬದಲಾವಣೆ ಅಥವಾ ಈಗಿರುವ ರೂಪಗಳ ಬದಲಾಗಿ ಇವುಗಳಿಗೆ ಸಂಬಧಿಸಿದ ಪರ್ಯಾಯ ರೂಪಗಳ ಸೇರಿಸುವಿಕೆ, ಮೂಲ ವ್ಯವಸ್ಥೆಯಲ್ಲಿ ಕೇವಲ ಸಂಕೇತಗಳಾಗಿದ್ದ ವಿಷಯಗಳ ಉದಯ, ಮೂಲ ಚಿಂತನೆಯ ಬೀಜದಿಂದ ಹೊಸ ಕಲ್ಪನಾ–ರೂಪಗಳ ಅಭಿವೃದ್ಧಿ ಅಲ್ಲಿತ್ತು. ವಿಶೇಷವಾಗಿ ಅತೀಂದ್ರಿಯ ಮತ್ತು ಆಧ್ಯಾತ್ಮಿಕ ಅನುಭವದ ಹೆಚ್ಚಿನ ವಿಸ್ತಾರ ಮತ್ತು ಅರ್ಥಮಾಡಿಕೊಳ್ಳುವಿಕೆ ಇತ್ತು. ವೈದಿಕ ದೇವತೆಗಳು ತಮ್ಮ ಆಳವಾದ ಮೂಲ ಪ್ರಾಮುಖ್ಯತೆಯನ್ನು ತ್ವರಿತವಾಗಿ ಕಳೆದುಕೊಂಡರು. ಮೊದಲಿಗೆ ಅವರು ತಮ್ಮ ಬಾಹ್ಯ ವಿಶ್ವ ಪ್ರಜ್ಞೆಯಿಂದ ತಮ್ಮ ಹಿಡಿತವನ್ನು ಉಳಿಸಿಕೊಂಡರು ಆದರೆ ಮಹಾನ್ ತ್ರಿಮೂರ್ತಿಗಳಾದ ಬ್ರಹ್ಮ–ವಿಷ್ಣು–ಶಿವರಿಂದ ಅವರ ಪ್ರಾಮುಖ್ಯತೆ ಮಂಕಾಯಿತು ನಂತರ ಸಂಪೂರ್ಣವಾಗಿ ಮರೆಯಾಯಿತು. ಒಂದು ದೇವ ಮಂದಿರವು ಕಾಣಿಸಿಕೊಂಡಿತು. ಅದು ಅದರ ಬಾಹ್ಯ ಸಾಂಕೇತಿಕ ಅಂಶಗಳಲ್ಲಿ ಆಳವಾದ ಸತ್ಯ ಮತ್ತು ಧಾರ್ಮಿಕ ಅನುಭವದ ದೊಡ್ಡ ವ್ಯಾಪ್ತಿಯನ್ನು, ಒಂದು ತೀವ್ರವಾದ ಭಾವನೆಯನ್ನು, ವಿಶಾಲವಾದ ಕಲ್ಪನೆಯನ್ನು ವ್ಯಕ್ತಪಡಿಸಿತು. ವೈದಿಕ ಸಮರ್ಪಣೆಯು ಅರೆಬರೆಯಾಗಿ, ತುಣುಕುಗಳಲ್ಲಿ ಮಾತ್ರ ಮುಂದುವರೆಯಿತು. ಆಹುತಿ ಕೊಡುವ ಕುಟೀರವನ್ನು ದೇವ ಮಂದಿರದಿಂದ ಬದಲಾಯಿಸಲಾಯಿತು; ಸಮರ್ಪಣೆಯ(ಆಹುತಿಯ) ಕರ್ಮಾಚರಣೆಯನ್ನು ದೇವಾಲಯದಲ್ಲಿನ ಭಕ್ತಿಯ ಆಚರಣೆಯನ್ನಾಗಿ ಪರಿವರ್ತಿಸಲಾಯಿತು; ಮಂತ್ರಗಳಲ್ಲಿ ಕಾಣಿಸಿಕೊಂಡಿರುವ ವೈದಿಕ ದೇವರುಗಳ ಅಸ್ಪಷ್ಟ

ಮತ್ತು ರೂಪಾಂತರಗೊಳ್ಳುವ ಮಾನಸಿಕ ಚಿತ್ರಗಳು ಎರಡು ಮಹಾನ್ ದೇವತೆಗಳಾದ ವಿಷ್ಣು ಮತ್ತು ಶಿವ ಮತ್ತು ಅವರ ಶಕ್ತಿಗಳ ಮತ್ತು ಉಪ ಶಕ್ತಿಗಳ ನಿಖರವಾದ ಪರಿಕಲ್ಪನೆಯ ರೂಪಗಳಿಗೆ ಕಾರಣವಾಯಿತು. ಈ ಹೊಸ ಪರಿಕಲ್ಪನೆಗಳು ಆಂತರಿಕ ಆರಾಧನೆಗೆ ಮತ್ತು ಆಹುತಿಯನ್ನು/ಸಮರ್ಪಣೆಯನ್ನು ಬದಲಿಸಿದ ಬಾಹ್ಯ ಪೂಜೆಗೆ ಆಧಾರವಾಗಿರುವ ಭೌತಿಕ ಸ್ವರೂಪಗಳಲ್ಲಿ ಸ್ಥಿರವಾಗಿವೆ. ವೈದಿಕ ಸ್ತೋತ್ರಗಳ ಆಂತರಿಕ ಪ್ರಜ್ಞೆಯಾದ ಅತೀಂದ್ರಿಯ ಮತ್ತು ಆಧ್ಯಾತ್ಮಿಕ ಪ್ರಯತ್ನವು ಪುರಾಣದ ಹಾಗೂ ತಾಂತ್ರಿಕ ಧರ್ಮದ ಮತ್ತು ಯೋಗದ ಅಷ್ಟು ಪ್ರಖರವಲ್ಲದ ಆದರೆ ಹೆಚ್ಚು ವಿಶಾಲ, ಶ್ರೀಮಂತ ಮತ್ತು ಸಂಕೀರ್ಣವಾದ ಮನೋ–ಆಧ್ಯಾತ್ಮಿಕ ಆಂತರಿಕ ಜೀವನದಲ್ಲಿ ಕಣ್ಮರೆಯಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/208–09**

**ದೇವರುಗಳು ಸ್ವತಂತ್ರರು**

ಈ ದೇವರುಗಳು ತಮ್ಮದೇ ಆದ ಶಕ್ತಿಗಳೊಂದಿಗೆ ಸ್ವತಂತ್ರರಾಗಿದ್ದಾರೆ ಮತ್ತು ಅವರು ಇಷ್ಟಪಡುವಂತೆ ಮಾಡಲು ಸ್ವತಂತ್ರರಾಗಿದ್ದಾರೆ.

ನಾನು ಬೇರೆ ಮನೆಯಲ್ಲಿ (ಈ ಮನೆಯಲ್ಲ) ಇದ್ದಾಗ, ಶಿವನೆಂದರೆ ನನಗೆ ಬಹಳೇ ಪ್ರೀತಿ. ಭೂಮಿಯ ಮೇಲೆ ಪ್ರಕಟವಾಗುವಂತೆ ನಾನು ಅವನನ್ನು ಕೇಳಿಕೊಂಡೆ. ಶಿವ ಹೇಳಿದ, “ಇಲ್ಲ, ನಾನು ಹಾಗೆ ಮಾಡಲು ಬರುವುದಿಲ್ಲ. ಅಧಿಮಾನಸ ಕುಲವು ಈ ಭೂಮಿಯ ಮೇಲೆ ಇದ್ದಾಗ ಮಾತ್ರ ನಾನು ಬರುತ್ತೇನೆ.” ಹಾಗಾಗಿ ಹೇಳಲು ನನ್ನಲ್ಲಿ ಏನೂ ಇರಲಿಲ್ಲ. ಶಿವನು ಸ್ವತಂತ್ರ.

ನಾನು ಈ ಭೂಮಿಯ ಮೇಲೆ ಜನ್ಮ ತಾಳಿದಾಗಿನಿಂದ ಈ ದೇವರುಗಳು ಹಾಗೂ ದೇವ–ದೇವಿಯರೆಲ್ಲರೂ ನಿರಂತರವಾಗಿ ನನ್ನೊಂದಿಗಿದ್ದಾರೆ.

ಹಿಂದಿನ ದಿನಗಳಲ್ಲಿ ನಾನು ವರಾಂಡದಲ್ಲಿ ವಿಹರಿಸುವಾಗ, ಕೃಷ್ಣನು ನನ್ನೊಂದಿಗೆ ವಿಹರಿಸುತ್ತಿದ್ದನು.

ಈ ದೇವ–ದೇವತೆಗಳು ಹೊಸ ಸೃಷ್ಟಿಯಲ್ಲಿ, ಅತಿಮಾನಸ ಹೊಸ ಪ್ರಪಂಚದಲ್ಲಿ ಮನುಷ್ಯರಿಗೆ ಸಹಾಯ ಮಾಡುತ್ತಾರೆ ಎಂದು ನನಗೆ ಗೊತ್ತು....

**ಶ್ರೀಮಾತೆಯವರು ನುಡಿದಂತೆ 25.02.1966**

## ವಿಶ್ವಾಹುತಿ (ವಿಶ್ವ ಯಜ್ಞ)

**ವಿಶ್ವ ಜೀವನವೊಂದು ಅಗಾಧವಾದ ಯಜ್ಞವಿದ್ದಂತೆ.**

ದೇವರೇ ಯಜ್ಞಕ್ಕೆ ಅಧಿಪತಿ. ದೇವರು ಶಿವ, ಮತ್ತು ಪ್ರಕೃತಿಯು ಉಮಾ. ಅವಳ ಹೃದಯದಲ್ಲಿ ಶಿವನ ರೂಪವಿದ್ದರೂ, ಅವಳು ಅವನ ಪ್ರತ್ಯಕ್ಷ ರೂಪವನ್ನು ಪಡೆಯದೇ ಹೋಗುತ್ತಾಳೆ; ಅವಳು ಅವನ ಮೂರ್ತ ರೂಪಕ್ಕಾಗಿ ಹಂಬಲಿಸುತ್ತಾಳೆ. ಈ ಹಂಬಲವು ವಿಶ್ವ ಜೀವನದ ಗಹನವಾದ ತಾತ್ಪರ್ಯವಾಗಿದೆ.

ಆದರೆ ಅವಳ ಉದ್ದೇಶವನ್ನು ಯಾವ ವಿಧಾನದಿಂದ ಈಡೇರಿಸಬಹುದು? ಯಾವ ನಿಯೋಜಿತ ಮಾರ್ಗದಿಂದ ಪ್ರಕೃತಿಯು ಪರಮಾತ್ಮನನ್ನು ಪಡೆಯಬಹುದು? ಅವಳು ತನ್ನ ಸ್ವಂತ ಮತ್ತು ಪರಮಾತ್ಮನ ನಿಜವಾದ ರೂಪವನ್ನು ಹೇಗೆ ಮರಳಿ ಪಡೆದುಕೊಳ್ಳಬಹುದು? ಅವಳ ಕಣ್ಣುಗಳು ಅಜ್ಞಾನದ ಪಟ್ಟಿಯಿಂದ ಕಟ್ಟಲ್ಪಟ್ಟಿವೆ ಮತ್ತು ಅವಳ ಪಾದಗಳು ಪ್ರಾಪಂಚಿಕ ವಿಷಯಗಳ ಸಹಸ್ರ ಸರಪಳಿಗಳಿಂದ ಬಂಧಿಸಲ್ಪಟ್ಟಿವೆ; ಭೌತಿಕ ಪ್ರಕೃತಿಯು ತನ್ನ ಎಲ್ಲೆಯೊಳಗೆ ಅನಂತ ಅಸ್ತಿತ್ವವನ್ನು ಬಂಧಿಸಿದಂತೆ ಮತ್ತು ಅವಳು ಸ್ವತಃ ಅಲ್ಲಿ ಖೈದಿಯಾದಂತೆ, ಅವಳಿಗೆ ಇನ್ನು ಮುಂದೆ ಸ್ವಯಂ ನಿರ್ಮಿತ ಸೆರೆಮನೆಯ ಕಳೆದುಹೋದ ಕೀಲಿಯನ್ನು ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ; ಭೌತ ವಸ್ತುವಿನಲ್ಲಿ ಜೀವ–ಶಕ್ತಿಯ ಜಡ ಕಂಪನಗಳು ಮುಕ್ತ ಮತ್ತು ಅನಿಯಮಿತ ಪ್ರಜ್ಞಾ–ಶಕ್ತಿಯನ್ನು ಸೋಲಿಸಿದಂತೆ ಮತ್ತು ಅವಳನ್ನು ಮೌನ, ನಗಣ್ಯ ಮತ್ತು ಪ್ರಜ್ಞಾಹೀನಳನ್ನಾಗಿ ಮಾಡಿದಂತೆ; ಕ್ಷುಲ್ಲಕ ಸುಖ–ದುಃಖಗಳಿಗೆ ಒಳಗಾಗಿ ಕೀಳು ಪ್ರಜ್ಞೆಯ ವೇಷದಲ್ಲಿ ಅಲೆದಾಡುವ ಅನಂತ ಆನಂದವು ತನ್ನ ನಿಜ ಸ್ವರೂಪವನ್ನು ಮರೆತಂತೆ ಮತ್ತು ನೆನಪಿಟ್ಟುಕೊಳ್ಳಲು ಸಾಧ್ಯವಾಗದೆ ಅತೀವ ಸಂಕಟದ ಕೆಸರಿನಲ್ಲಿ ಮುಳುಗಿದಂತೆ; ಮಿಥ್ಯೆಯ ಅನಿಶ್ಚಿತ ಅಲೆಗಳ ಅಡಿಯಲ್ಲಿ ಸತ್ಯವನ್ನು ಮುಳುಗಿಸಿದಂತೆ. ಬುದ್ಧಿಮತ್ತೆಯನ್ನು ಮೀರಿದ ಅಧಿಮಾನಸ ತತ್ವವು ಅನಂತ ಸತ್ಯದ ಅಡಿಪಾಯವಾಗಿದೆ. ಅತಿಮಾನಸದ ಕ್ರಿಯೆಯು ಭೂ–ಪ್ರಜ್ಞೆಯಲ್ಲಿ ನಿಷೇಧಿಸಲ್ಪಟ್ಟಿದೆ ಅಥವಾ ಮುಸುಕಿನ ಹಿಂದಿರುವ ಬಹಳೇ ಅಪರೂಪದ ಹೊಳಪಿನ ಕ್ಷಣಿಕ ನಸುಬೆಳಕಿನಂತೆ ಇರುತ್ತದೆ. ಪುಕ್ಕಲ, ಹೆಳವ ಮತ್ತು ನೀರಸ ಮನಸ್ಸು ಮತ್ತೆ ಮತ್ತೆ ಅದನ್ನು ಹುಡುಕುತ್ತಿದೆ ಮತ್ತು ಅದರ ಅಗಾಧವಾದ ಪ್ರಯತ್ನಗಳಿಂದ ಅದರ ಒಂದು ಮಿಣುಕು ನೋಟವನ್ನು ಪಡೆದುಕೊಳ್ಳಬಹುದು ಆದರೆ ಪೂರ್ಣ ಸತ್ಯದ ನೈಜವಾದ, ಅನಂತವಾದ ಮತ್ತು ಪ್ರಕಾಶಮಾನವಾದ ರೂಪವು ಅದರ ಹಿಡಿತದಿಂದ ತಪ್ಪಿಸಿಕೊಳ್ಳುತ್ತದೆ. ಜ್ಞಾನ ಮತ್ತು

ಮನಸ್ಸಿನ ಕ್ರಿಯೆಯು ಅದೇ ಕಲಹ, ದಾರಿದ್ರ್ಯ ಮತ್ತು ವೈಫಲ್ಯದಿಂದ ಪೀಡಿತವಾಗಿದೆ. ಸತ್ಯ–ಕ್ರಿಯೆಯ ಮಂದಹಾಸದ ಮತ್ತು ಲೀಲಾಜಾಲವಾದ ದಿವ್ಯ ನೃತ್ಯದ ಬದಲಿಗೆ, ಸತ್ಯ ಹಾಗೂ ಮಿಥ್ಯೆಯ, ಸುಗುಣ ಹಾಗೂ ದುರ್ಗುಣ, ವಿಷ ಹಾಗೂ ಅಮೃತ, ಕ್ರಿಯೆ, ನಿಷ್ಕ್ರಿಯೆ ಮತ್ತು ತಪ್ಪು ಕ್ರಿಯೆ ಇವುಗಳ ಬಿಡಿಸಿಕೊಳ್ಳಲಾಗದ ಬಂಧನಗಳೊಂದಿಗೆ ಸಂಕಟದಲ್ಲಿ ಹೋರಾಡುತ್ತಿರುವ ನಿಮ್ಮ ಇಚ್ಛಾಶಕ್ತಿಯ ಫಲಿತಾಂಶವಿಲ್ಲದ ಪ್ರಯತ್ನವು ಅಲ್ಲಿದೆ. ಮುಕ್ತ, ಹಿಂಜರಿಕೆಯಿಲ್ಲದ, ಅಪೇಕ್ಷೆಯಿಲ್ಲದ, ವಿಜಯಶಾಲಿ, ಏಕತೆಯ ಮದ್ಯದಿಂದ ಮತ್ತೇರಿದ ಆನಂದದಾಯಕ ಮತ್ತು ಉತ್ಸುಕ ಕ್ರಿಯೆಯ ದೈವೀ ಶಕ್ತಿಯು ಇನ್ನೂ ಸಾಕ್ಷಾತ್ಕಾರಗೊಳ್ಳದೆ ಉಳಿದುಬಿಡುತ್ತದೆ. ಅದರ ನೈಸರ್ಗಿಕ ಮತ್ತು ಸುಲಭವಾದ ವಿಶ್ವಾತ್ಮಕ ಚಲನೆಗಳು/ಕ್ರಿಯೆಗಳು ನಿಮ್ಮ ಪ್ರಕೃತಿಯ ಇಚ್ಛಾಶಕ್ತಿಗೆ ಅಸಾಧ್ಯವೆನಿಸಿವೆ. ಸೀಮಿತ ಮತ್ತು ಅಸತ್ಯದ ಕುಣಿಕೆಯಲ್ಲಿ ಸಿಕ್ಕಿಹಾಕಿಕೊಂಡಿರುವ ಭೂ–ಪ್ರಕೃತಿಯು ಆ ಮಿತಿಯಿಲ್ಲದ ಅಸ್ತಿತ್ವವನ್ನು, ಆ ಮಿತಿಯಿಲ್ಲದ ಪ್ರಜ್ಞಾ–ಶಕ್ತಿಯನ್ನು ಮತ್ತು ಆ ಅಗಣಿತವಾದ ಆನಂದ–ಪ್ರಜ್ಞೆಯನ್ನು ಪಡೆಯಲು ಆಶಿಸಬಹುದೇ, ಹಾಗಿದ್ದರೆ ಯಾವ ವಿಧಾನದಿಂದ?

ತ್ಯಾಗವೇ ಸಾಧನ. ತ್ಯಾಗವು ಶರಣಾಗತಿ ಮತ್ತು ಆತ್ಮಾಹುತಿಯನ್ನು ಸೂಚಿಸುತ್ತದೆ. ನೀವು ಏನಾಗಿದ್ದೀರಿ, ನಿಮ್ಮಲ್ಲೇನಿದೆ, ನಿಮ್ಮ ಸ್ವಂತ ಪ್ರಯತ್ನದಿಂದ ಅಥವಾ ದೈವೀ ಅನುಗ್ರಹದಿಂದ ನೀವು ಭವಿಷ್ಯದಲ್ಲಿ ಏನಾಗುತ್ತೀರಿ, ನಿಮ್ಮ ಜೀವನ ಯಾತ್ರೆಯಲ್ಲಿ ನೀವು ಏನನ್ನು ಗಳಿಸಬಹುದು ಅಥವಾ ಉಳಿಸಬಹುದು, ಎಲ್ಲವನ್ನೂ ಶುದ್ಧೀಕರಿಸಿದ ಬೆಣ್ಣೆಯಂತೆ, ನಿತ್ಯಾನಂದನಿಗೆ ಸಮರ್ಪಣೆಯಾಗಿ(ಆಹುತಿಯನ್ನಾಗಿ) ದೈವೀ ಶಕ್ತಿಯ ಬೆಂಕಿಯಲ್ಲಿ ಸುರಿಯಿರಿ. ಆ ಪೂರ್ಣದಿಂದ ಚಿಕ್ಕದಾದನ್ನು ನೀಡುವ ಮೂಲಕ ನೀವು ಅನಂತವಾದ ಪೂರ್ಣವನ್ನು ಪಡೆಯುತ್ತೀರಿ. ಯೋಗವು ತ್ಯಾಗದಲ್ಲಿ ಅಂತರ್ಗತ–ವಾಗಿರುತ್ತದೆ. ಅನಂತತೆ, ಅಮರತ್ವ ಮತ್ತು ದೈವೀ ಆನಂದವು ಯೋಗಾಭ್ಯಾಸದ ಧರ್ಮಸಮ್ಮತ ಫಲಿತಾಂಶಗಳಾಗಿವೆ. ಈ ಮಾರ್ಗವನ್ನು ಅನುಸರಿಸುವುದು ಪ್ರಕೃತಿಯ ಮೋಕ್ಷದ ಸಾಧನವಾಗಿದೆ.

**ಬಂಗಾಲಿ ಬರಹಗಳು: 46–47**

## ನಿರಾಕಾರ ಮತ್ತು ಸಾಕಾರ

ವಿಶ್ವ ಸ್ತರದಲ್ಲಿಯೂ ಸಹ ನಾವು ಈ ಎರಡರಲ್ಲಿ ಯಾವುದಾದರು ಒಂದು ಕಡೆ ನಿರಂತರವಾಗಿ ಪರಮಾತ್ಮನೆಡೆಗೆ ಪ್ರಸ್ತಾಪಿಸುತ್ತಿದ್ದೇವೆ. ದೇವರನ್ನು ನಾವು ಸತ್ಯ, ನ್ಯಾಯ,

ನೀತಿ, ಶಕ್ತಿ, ಪ್ರೀತಿ, ಆನಂದ, ಸೌಂದರ್ಯ ಎಂದು ಎಣಿಸಬಹುದು, ಅನುಭವಿಸಬಹುದು ಮತ್ತು ಹೇಳಬಹುದು; ನಾವು ಅವನನ್ನು ವಿಶ್ವ ಶಕ್ತಿಯಾಗಿ ಅಥವಾ ವಿಶ್ವ ಪ್ರಜ್ಞೆಯಾಗಿ ಕಾಣಬಹುದು. ಆದರೆ ಇದು ಅನುಭವದ ಅಮೂರ್ತ ಮಾರ್ಗ ಮಾತ್ರವಾಗಿದೆ. ನಾವು ಕೇವಲ ಹಲವು ಗುಣಗಳ ಪ್ರತಿರೂಪವಲ್ಲ ಅಥವಾ ಶಕ್ತಿಗಳ ಅಥವಾ ಮಾನಸಿಕ ಪ್ರಮಾಣವಲ್ಲ, ಆದರೆ ನಾವೊಂದು ಜೀವಿ, ತನ್ನ ಸ್ವಭಾವವನ್ನು ವ್ಯಕ್ತಪಡಿಸುವ ವ್ಯಕ್ತಿ, ಹಾಗೆಯೇ ದೈವಿಕ ವ್ಯಕ್ತಿ, ತನ್ನ ಸ್ವಭಾವವನ್ನು ನಮಗೆ ವ್ಯಕ್ತಪಡಿಸುವ ಪ್ರಜ್ಞಾಪೂರ್ವಕ ಜೀವಿಯಾಗಿದ್ದೇವೆ. ಈ ಪ್ರಕೃತಿಯ ವಿವಿಧ ರೂಪಗಳ ಮೂಲಕ ನಾವು ಅವನನ್ನು ಆರಾಧಿಸಬಹುದು. ಆ ರೂಪಗಳು, ಸದಾಚಾರದ ದೇವರು, ಪ್ರೀತಿ ಮತ್ತು ಕರುಣೆಯ ದೇವರು, ಶಾಂತಿ ಮತ್ತು ಶುದ್ಧತೆಯ ದೇವರು. ಆದರೆ ದೈವೀ ಪ್ರಕೃತಿಯಲ್ಲಿ ಇತರೇ ಸಂಗತಿಗಳಿವೆ ಎನ್ನುವುದು ಸ್ಪಷ್ಟವಾಗಿದೆ. ನಾವು ಆ ಸಂಗತಿಗಳನ್ನು ಸಾಕಾರ ಸ್ವರೂಪದ ಹೊರಗಡೆ ಇಟ್ಟು ಅವನನ್ನು ಪೂಜಿಸುತ್ತಿದ್ದೇವೆ. ಅಚಲವಾದ ಆಧ್ಯಾತ್ಮಿಕ ದೃಷ್ಟಿಯು ಮತ್ತು ಅನುಭವದ ಧೈರ್ಯವು ಅವನನ್ನು ಇನ್ನೂ ಹೆಚ್ಚು ತೀವ್ರವಾದ ಅಥವಾ ಭಯಾನಕ ರೂಪಗಳಲ್ಲಿ ಕಾಣಬಹುದು. ಇವುಗಳಲ್ಲಿ ಯಾವುದೂ ದೈವತ್ವವಲ್ಲ; ಆದಾಗ್ಯೂ ಆತನ ವ್ಯಕ್ತಿತ್ವದ ಈ ರೂಪಗಳು ನಿಜ ರೂಪಗಳಾಗಿವೆ. ಆತನ ಹಿಂದೆ ಉಳಿದ ರೂಪಗಳಿವೆ ಎಂಬಂತೆ ಆತನು ನಮ್ಮನ್ನು ಭೇಟಿಯಾಗುವುದು ಮತ್ತು ನಮ್ಮೊಂದಿಗೆ ವ್ಯವಹರಿಸುವಂತೆ ತೋರುವುದು ಈ ರೂಪಗಳಲ್ಲಿ. ಆತನು ಪ್ರತ್ಯೇಕ ರೂಪಗಳಲ್ಲಿ ಕಂಡರೂ, ಎಲ್ಲ ರೂಪಗಳು ಆತನಲ್ಲಿ ಒಟ್ಟಾಗಿವೆ. ಆತ ವಿಷ್ಣುವಾಗಿದ್ದಾನೆ, ಕೃಷ್ಣನಾಗಿದ್ದಾನೆ, ಕಾಳಿಯ ರೂಪವಾಗಿದ್ದಾನೆ; ಆತನು ತನ್ನನ್ನು ತಾನು ಮಾನವ ಕೋಟಿಯಲ್ಲಿ ಕ್ರಿಸ್ತನಾಗಿ ಅಥವಾ ಬುದ್ಧನಾಗಿ ಪ್ರಕಟಪಡಿಸಿಕೊಳ್ಳುತ್ತಾನೆ. ನಾವು ನಮ್ಮ ಮೊದಲ ವಿಶೇಷವಾದ ಕೇಂದ್ರೀಕೃತ ದೃಷ್ಟಿಯಾಚೆ ನೋಡಿದಾಗ, ವಿಷ್ಣುವಿನ ಹಿಂದೆ ಶಿವನ ರೂಪವನ್ನು, ಮತ್ತು ಶಿವನ ಹಿಂದೆ ವಿಷ್ಣುವಿನ ರೂಪವನ್ನು ನೋಡುತ್ತೇವೆ. ಆತನು ತನ್ನ ಮೂಲಕ ಸ್ವತಃ ಪ್ರಕಟಗೊಳ್ಳುವ ಅನಂತ ಗುಣ ಮತ್ತು ಅನಂತ ದೈವೀ ಸ್ವರೂಪನಾಗಿದ್ದಾನೆ. ಇನ್ನೊಮ್ಮೆ ಆತನು ಶುದ್ಧ ಆಧ್ಯಾತ್ಮಿಕ ನಿರಾಕಾರತೆಗೆ ಅಥವಾ ನಿರಾಕಾರ ಆತ್ಮದ ಕಲ್ಪನೆಯನ್ನು ಸಹ ಮೀರಿ ಮತ್ತು ಆಧ್ಯಾತ್ಮಿಕ ನಿರೀಶ್ವರವಾದವನ್ನು ಅಥವಾ ಆಜ್ಞೇಯತಾವಾದವನ್ನು ಸಮರ್ಥಿಸಲು ಹಿಂದೆ ಸರಿಯುತ್ತಿದ್ದಾನೆಂದು ತೋರುತ್ತದೆ; ಅವನು ಮನುಷ್ಯನ ಮನಸ್ಸಿಗೆ ಅನಿರ್ವಚನೀಯನಾಗುತ್ತಾನೆ, ಅನಿರ್ದೇಶ್ಯನಾಗುತ್ತಾನೆ. ಆದರೆ, ಈ ಅಜ್ಞಾತದಿಂದ

ಪ್ರಜ್ಞಾ ಪುರುಷ, ದಿವ್ಯ ವ್ಯಕ್ತಿ, ತನ್ನನ್ನು ತಾನು ಇಲ್ಲಿ ಪ್ರಕಟಪಡಿಸಿಕೊಂಡವನು ಹೇಳುತ್ತಾನೆ, "ಇದೂ ಸಹ ನಾನು; ಇಲ್ಲಿಯೂ ಸಹ ಮನಸ್ಸಿನ ನೋಟದಾಚೆ, ನಾನು ಅವನಾಗಿದ್ದೇನೆ, ಪುರುಷೋತ್ತಮನಾಗಿದ್ದೇನೆ."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/585–586**

**ಇಷ್ಟ ದೇವತಾ**

ಕೃಷ್ಣ ಮತ್ತು ಶಕ್ತಿ ಮತ್ತು ಶಿವನ ನಡುವಿನ ಘಿ ಎನ್ನುವವರ ಅಂತಃಕರಣಪೂರ್ವಕ ಡೋಲಾಯಮಾನ ಸ್ಥಿತಿಗೆ ನನಗೆ ನಗಬೇಕೆಂದು ಅನಿಸಲಿಲ್ಲ. ಒಬ್ಬ ಮನುಷ್ಯನ ದೇವರ ಒಂದೋ ಅಥವಾ ಎರಡೋ ರೂಪಗಳಿಂದ ಮಾತ್ರ ಆಕರ್ಷಿತನಾಗಿದ್ದರೆ, ಅದು ಸರಿ, ಆದರೆ ಏಕಕಾಲದಲ್ಲಿ ಅವನು ಹಲವಾರು ರೂಪಗಳೆಡೆಗೆ ಆಕರ್ಷಿತನಾದರೆ ಅದಕ್ಕಾಗಿ ಅವನು ಗೋಳಾಡಬೇಕಾಗಿಲ್ಲ. ಕೊಂಚ ವಿಕಸನ ಹೊಂದಿದ ಮನುಷ್ಯನು ತನ್ನ ಪ್ರಕೃತಿಯಲ್ಲಿ ಅಗತ್ಯವಾಗಿ ಹಲವಾರು ಮಗ್ಗುಲುಗಳನ್ನು ಹೊಂದಿರುತ್ತಾನೆ ಮತ್ತು ವಿಭಿನ್ನ ಅಂಶಗಳು ಅವನಲ್ಲಿನ ವಿಭಿನ್ನ ವ್ಯಕ್ತಿತ್ವಗಳನ್ನು ಆಕರ್ಷಿಸುವುದು ಅಥವಾ ಪ್ರಭಾವ ಬೀರುವುದು ತುಂಬಾ ಸಹಜ – ಅವನು ಆ ಎಲ್ಲ ಅಂಶಗಳನ್ನು ಸ್ವೀಕರಿಸಬಹುದು ಮತ್ತು ಅವೆಲ್ಲವುಗಳನ್ನು ಒಂದೇ ದೇವನಲ್ಲಿ ಮತ್ತು ಎಲ್ಲ ಅಭಿವ್ಯಕ್ತಿಗಳ ಶಕ್ತಿಯಾದ ಆದ್ಯ ಶಕ್ತಿಯಲ್ಲಿ ಅವುಗಳನ್ನು ಸಮನ್ವಯಗೊಳಿಸಬಹುದು.

**ಶಿವನು ತಪಸ್ಸಿನ ಅಧಿಪತಿ. ಶಕ್ತಿಯು ತಪಸ್ಸಿನ ಶಕ್ತಿಯಾಗಿದೆ.**

ಶ್ರೀಕೃಷ್ಣನು ಒಬ್ಬ ಭಗವತ್‌ಸ್ವರೂಪಿಯಾಗಿ ಆನಂದ, ಪ್ರೀತಿ ಮತ್ತು ಭಕ್ತಿಯ ಪ್ರಭುವಾಗಿದ್ದಾನೆ; ಒಬ್ಬ ಅವತಾರಿಯಾಗಿ ಅವನು ಪ್ರಜ್ಞೆಯನ್ನು (ಜ್ಞಾನವನ್ನು) ವ್ಯಕ್ತಪಡಿಸುತ್ತಾನೆ ಮತ್ತು ಭೂ–ವಿಕಸನವನ್ನು ಇದರ ಮುಖಾಂತರ ಆನಂದದಿಂದ, ಪ್ರೇಮದಿಂದ ಹಾಗೂ ಭಕ್ತಿಯಿಂದ ಭಗವಂತನೊಂದಿಗೆ ಒಂದಾಗಿಸಲು ಕೆಲಸಮಾಡುತ್ತಾನೆ ಮತ್ತು ಅದನ್ನು ಮುನ್ನಡೆಸುತ್ತಾನೆ.

ದೇವಿಯು ದಿವ್ಯ ಶಕ್ತಿಯಾಗಿದ್ದಾಳೆ – ಭಗವಂತನ ಪ್ರಜ್ಞೆ ಮತ್ತು ಶಕ್ತಿಯಾಗಿದ್ದಾಳೆ, ಜಗತ್ತುಗಳ ಮಾತೆ ಮತ್ತು ಚೈತನ್ಯವಾಗಿದ್ದಾಳೆ. ಎಲ್ಲ ಶಕ್ತಿ–ಸಾಮರ್ಥ್ಯಗಳು ಅವಳದ್ದಾಗಿವೆ. ಕೆಲವೊಮ್ಮೆ, ದೇವಿ ಪ್ರಭಾವವನ್ನು ವಿಶ್ವಾತ್ಮಕ ಶಕ್ತಿಯೆಂದು ಅರ್ಥೈಸಬಹುದು; ಆದರೆ ಇದು ಶಕ್ತಿಯ ಒಂದು ಆಯಾಮ ಮಾತ್ರವಾಗಿದೆ.

ಮಹಾಕಾಳಿ ಮತ್ತು ಕಾಳಿ ಇಬ್ಬರೂ ಒಂದೇ ಅಲ್ಲ, ಕಾಳಿಯು ಮಹಾಕಾಳಿಗಿಂತ ಕೆಳಗಿನ ವ್ಯಕ್ತರೂಪವಾಗಿದ್ದಾಳೆ. ಮಹಾಕಾಳಿಯು ಉನ್ನತ ಸ್ಥರಗಳಲ್ಲಿ ಸಾಮಾನ್ಯವಾಗಿ ಹೊನ್ನಿನ ಬಣ್ಣದೊಂದಿಗೆ ಪ್ರಕಟವಾಗುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/459–60**

**ಭಾರತೀಯ ಸಂಪ್ರದಾಯದ ವೇದೋತ್ತರ ದೇವತೆಗಳು**

ಬ್ರಹ್ಮ, ವಿಷ್ಣು, ಶಿವ ಈ ಮೂರು ಶಕ್ತಿಗಳು ಮಾತ್ರ ಆ ಏಕ ಬ್ರಹ್ಮಾಂಡ ದೇವಪುರುಷನ ಮೂರು ಶಕ್ತಿಗಳಾಗಿದ್ದಾರೆ ಮತ್ತು ಅಭಿವ್ಯಕ್ತಿಗಳಾಗಿದ್ದಾರೆ.

ಬ್ರಹ್ಮನು ರಚನೆ ಮತ್ತು ಸೃಷ್ಟಿಯ ಹಿಂದಿರುವ ದೈವೀ ಶಕ್ತಿಯಾಗಿದ್ದಾನೆ.

ವಿಷ್ಣುವು ಸೃಷ್ಟಿಕರ್ತನಾಗಿದ್ದಾನೆ. ಬ್ರಹ್ಮ, ವಿಷ್ಣು ಮತ್ತು ಶಿವ, ಈ ಮೂವರೂ ವಿಶ್ವವನ್ನು ಸೃಷ್ಟಿಸಿದ್ದಾರೆಂದು ಹೇಳಲಾಗುತ್ತದೆ – ಸಾಂಪ್ರದಾಯಿಕವಾಗಿ ಶಿವನು ಸಂಹಾರಕನಾಗಿದ್ದರೂ ಸಹ.

ಶಿವ ಮತ್ತು ಅತಿಮಾನಸದ ನಡುವೆ ನಿರ್ದಿಷ್ಟವಾದ ಸಂಬಂಧವಿಲ್ಲ – ಅತಿಮಾನಸವು ಎಲ್ಲ ದೇವರುಗಳ ಎತ್ತರದ ದರ್ಜೆಯಾಗಿದೆ/ಸ್ಥಾನವಾಗಿದೆ.

ಮಹಾಶಿವನೆಂದರೆ ಸಾಮಾನ್ಯವಾಗಿ ಪೂಜಿಸಲ್ಪಡುವ ಶಿವನಿಗಿಂತ ಶ್ರೇಷ್ಠವಾದ ಅಭಿವ್ಯಕ್ತಿಯೆಂದು ಅರ್ಥ – ಮಹಾಶಿವನೆಂದರೆ ಶಕ್ತಿಯನ್ನು ಅಭಿವ್ಯಕ್ತಗೊಳಿಸುತ್ತಿರುವ ಮಹಾದೇವನ ಸೃಜನಶೀಲ ನೃತ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/459**

**ಭಾರತೀಯ ಕಲೆಯಲ್ಲಿ ಶಿವ**

ಮಹಾನ್‌ಕಲೆಯ ಮೆಚ್ಚುಗೆಗೆ ಅಡ್ಡಿಯಾಗಿರುವುದು ನಮ್ಮ ಕಲೆ ಅಥವಾ ಸಾಹಿತ್ಯದ ಅಭಿವೃದ್ಧಿಯ ಒಂದು ನಿರ್ದಿಷ್ಟ ಹಂತದಲ್ಲಿ ಬಳಸಲ್ಪಟ್ಟ ಸಂಕೇತಗಳಿಗೆ ಹಾಗೂ ಸಂಪ್ರದಾಯಗಳಿಗೆ ನೀಡಿದ ಉತ್ಪ್ರೇಕ್ಷಿತ ಗೌರವ ಮತ್ತು ಇದಕ್ಕೆ ಐರೋಪ್ಯ ವಿಚಾರಗಳ ಪ್ರಾಬಲ್ಯವಿಲ್ಲದ ಭಾರತೀಯರು ಸಹ ಹೊಣೆಗಾರರಾಗಿದ್ದಾರೆ. ಉದಾಹರಣೆಗೆ ಶಿವ ಅಥವಾ ಕಾಳಿಯನ್ನು ಪ್ರತಿನಿಧಿಸುವ ಒಂದು ನಿರ್ದಿಷ್ಟ ವಿಧಾನಕ್ಕೆ ನಾನು ಒಗ್ಗಿಕೊಂಡಿದ್ದೇನೆ ಮತ್ತು ನಾನು ಬೇರೆ ವಿಧಾನವನ್ನು ಅನುಸರಿಸಲು ನಿರಾಕರಿಸುತ್ತೇನೆ. ಆದರೆ ಒಬ್ಬ

ಕಲಾವಿದನಿಗೆ ನನ್ನ ಪೂರ್ವಾಗ್ರಹಗಳಿಂದ ಏನೂ ಆಗಬೇಕಾಗಿಲ್ಲ. ಆ ಕಲಾವಿದನು ಶಿವನಾಗಿರುವ ಅಥವಾ ಕಾಳಿಯಾಗಿರುವ ಶಿವನ ಅಥವಾ ಕಾಳಿಯ ಸಾರಭೂತ ಸತ್ಯವನ್ನು ಪ್ರತಿಬಿಂಬಿಸಬೇಕು(ನಿರೂಪಿಸಬೇಕು), ಮತ್ತು ಆತನು ಇತರರ ದೃಷ್ಟಿಕೋನವನ್ನು ನಕಲಿಸುವ ಯಾವುದೇ ಬಾಧ್ಯತೆಯನ್ನು ಹೊಂದಿರುವುದಿಲ್ಲ. ಆತನಿಗೆ ಶಿವನ ಅಥವಾ ಕಾಳಿಯ ಮತ್ತೊಂದು ರೂಪದ ದರ್ಶನವಾಗಿದ್ದರೆ, ಆ ರೂಪಕ್ಕೆ ಅವನು ನಿಷ್ಠನಾಗಿರಬೇಕು. ಶಿಷ್ಟಾಚಾರ ಕುರಿತಂತೆ ಅಥವಾ ಗಡ್ಡ ಮತ್ತು ಮೀಸೆಯಿಲ್ಲದ ದೇವರುಗಳನ್ನು ಪ್ರತಿನಿಧಿಸುವ ಕುರಿತಂತೆ ಇತ್ತೀಚೆಗೆ ಹುಟ್ಟಿಕೊಂಡ ಕುತೂಹಲದ ಚರ್ಚೆಯು ಹದಿನೆಂಟನೇ ಶತಮಾನದ ರೂಪ ಮತ್ತು ಗುಣ ಸ್ವಭಾವಕ್ಕೆ ಅಂಟಿಕೊಂಡ ಗುಲಾಮಗಿರಿಯ ಉಳಿಯುವಿಕೆಯ ವಾಸ್ತವಿಕವಾದದ ಒಂದು ನಿದರ್ಶನವಾಗಿದೆ. ಮೀಸೆ ಅಥವಾ ಗಡ್ಡ ಅಥವಾ ಸಂಕೇತವು ದೈವೀ ಸ್ವರೂಪವನ್ನು ಮಾಡುತ್ತವೆ ಎಂದು ವಾಸ್ತವಿಕವಾದಿಯು ಅಲ್ಲಗಳೆಯುತ್ತಾನೆ. ಆದರೆ ದೈವೀ ಶ್ರೇಷ್ಠತೆ, ಅಮರ ಶಕ್ತಿ, ಸೌಂದರ್ಯ, ಯೌವನ, ಶುದ್ಧತೆ ಅಥವಾ ಆಂತರಿಕ ಶಾಂತಿಯು ದೈವೀ ಸ್ವರೂಪಿಯನ್ನಾಗಿ ಮಾಡುತ್ತವೆ ಎನ್ನುವುದು ವಾಸ್ತವಿಕವಾದಿಯ ನಂಬಿಕೆ. ದೈವೀ ಸ್ವರೂಪವನ್ನು ಚಿತ್ರಿಸಿ ಅದಕ್ಕೆ ಬಣ್ಣ ಹಾಕಬೇಕಾದವನು ಒಬ್ಬ ಕಲಾವಿದ. ಆ ದೈವೀ ಸ್ವರೂಪವನ್ನು ಆತ ತನ್ನ ಧ್ಯಾನದಲ್ಲಿನ ದರ್ಶನದಿಂದ ಆಯ್ಕೆ ಮಾಡುತ್ತಾನೆ.

ಅವನ ವ್ಯಾಖ್ಯಾನವು ಮನುಕುಲದ ಆಲೋಚನೆ ಮತ್ತು ಕಲ್ಪನೆಯಲ್ಲಿ ಸ್ಥಿರವಾದ ಸ್ಥಾನವನ್ನು ಪಡೆಯುತ್ತದೆಯೋ ಇಲ್ಲವೋ ಎನ್ನವುದು ಅದು ಮನುಕುಲದಲ್ಲಿ ದರ್ಶನವನ್ನು ಜಾಗೃತಗೊಳಿಸುವ ಅದರ ಶಕ್ತಿಯನ್ನು ಅವಲಂಬಿಸಿರುತ್ತದೆ. ನಾವು ಬೇಡಿಕೊಳ್ಳುವುದು ಆ ದರ್ಶನವು ದೇವರ, ಶಿವನ, ಕಾಳಿಯ ನಿಜವಾದ ದರ್ಶನವಾಗಿರಬೇಕೆಂದು. ಮತ್ತು ಆ ದರ್ಶನವು ಅವನ ಕಲ್ಪನೆಯ ವಿಲಕ್ಷಣ ಅಥವಾ ಅವನ ಶಿಕ್ಷಣದ ಅಥವಾ ಕಲಾತ್ಮಕ ಪಾಲನೆಯ ಸಂಸ್ಕಾರದ ಫಲಿತಾಂಶವಾಗಿರ–ಬಾರದೆಂದು ನಮ್ಮ ಬೇಡಿಕೆ. ಅವನು ತನ್ನೊಳಗಿರುವ ಜ್ಞಾನದ ಚಿಲುಮೆಯನ್ನು ಪಡೆದುಕೊಳ್ಳಲೇಬೇಕು ಇಲ್ಲದಿದ್ದರೆ ಅವನ ಸ್ವಾತಂತ್ರ್ಯದ ಹಕ್ಕು ಬಿದ್ದುಹೋಗುತ್ತದೆ. ಸತ್ಯಾನ್ವೇಷಣೆಯು ನಮ್ಮ ವಿಮೋಚನೆಯ ಷರತ್ತಾಗಿದೆ ಎಂದು ಆಗಲೇ ಹೇಳಿಯಾಗಿದೆ ಮತ್ತು ಕಲಾವಿದನು ತನ್ನ ಕಲ್ಪನೆಯು ಉನ್ನತ ಗುಣತತ್ವದ ಸ್ಥಾನವನ್ನು ಪಡೆಯಲು ಅನುಮತಿಸಬಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/466–67**

## ದೈವತದ ಅವತಾರ ಮತ್ತು ವಿಭೂತಿ ರೂಪಗಳು

**– ಅನು: ಕಿಶೋರಕುಮಾರ, ಮಾಶಾಳ**

ದೇವತೆಗಳು ತಮ್ಮೊಳಗೆ ಆಧ್ಯಾತ್ಮಿಕತೆಯ ದಿವ್ಯ ಕಿಡಿಯನ್ನು ಹೊತ್ತಿಸಿಕೊಳ್ಳ–ಲಾರರು. ಏಕೆಂದರೆ ಈ ಭೂಮಿಯ ಮೇಲೆ ಮಾತ್ರ (ನಾನಿಲ್ಲಿ ಭೂಮಿಯೆಂದರೆ ಕೇವಲ ಭೌತಿಕ ವಿಶ್ವಕ್ಕೆ ಮಾತ್ರ ಸೀಮಿತವಾಗಿರಿಸಿ ಹೇಳುತ್ತಿಲ್ಲ) ದಿವ್ಯ ಪ್ರೇಮದ ಅವತರಣವಾಗಿದೆ. ಈ ದಿವ್ಯ ಪ್ರೇಮವೊಂದೇ ಭೌತಿಕ ವಲಯದಲ್ಲಿ ದಿವ್ಯತೆಯ ಅಸ್ತಿತ್ವವನ್ನು ಸಂಕೇತಿಸುತ್ತದೆ. ಸಹಜವಾಗಿಯೇ ಇಲ್ಲಿಯ ಜೀವಿಗಳು ಅತೀಂದ್ರಿಯತೆಯ ಶಕ್ತಿಯನ್ನು ಹೊಂದಿಲ್ಲ, ಈ ಜೀವಿಗಳಿಗೆ ಅತೀಂದ್ರಿಯತೆಯ ಕುರಿತಾದ ಅರಿವೂ ಇಲ್ಲ, ಹಾಗಾಗಿ ಇಲ್ಲಿನ ನಿವಾಸಿಗಳಲ್ಲಿ ಕೆಲವು ಜೀವಿಗಳು ಅತೀಂದ್ರಿಯ ಕಾಯವೊಂದನ್ನು ಧಾರಣೆಗೈದು ಆ ಅತೀಂದ್ರಿಯತೆಯ ಅನುಭವವನ್ನು ಪಡೆಯಲೆಂದು ಬಯಸುತ್ತಿರುತ್ತವೆ. ಆದರೆ ಇಲ್ಲಿನ ಎಲ್ಲಾ ಜೀವಿಗಳು ಈ ಬಯಕೆಯನ್ನು ಹೊಂದಿಲ್ಲ.

**ಒಂದು ನಿಯಮದ ಪ್ರಕಾರ, ಇಲ್ಲಿನ ನಿವಾಸಿಗಳು ಅದನ್ನು ಅವರೋಹಣ ವಿಧಾನದ ಮೂಲಕ ಮಾತ್ರ ಕಂಡುಕೊಂಡಿದ್ದಾರೆಯೇ ವಿನಃ, ಪೂರ್ಣಾವತರಣದ ಮೂಲಕ ಆ ಅತೀಂದ್ರಿಯತೆಯನ್ನು ಅವರು ಸ್ಥಾಪಿಸಿಲ್ಲ**. ಉದಾಹರಣೆಗೆ ಸ್ವಾಮಿ ವಿವೇಕಾನಂದರನ್ನು ಶಿವನ ಅವತಾರವೆಂದೂ, ವಿಭೂತಿಯೆಂದೂ ಹೇಳಲಾಗುತ್ತದೆ. ಆದರೆ ಮೂಲದಲ್ಲಿ ಶಿವನು ಒಂದೊಮ್ಮೆ ತನ್ನ ಜೊತೆಗೆ ಇಡೀ ಸುಪ್ರಮಾನಸದ ವಲಯವನ್ನು ಹೊತ್ತುಕೊಂಡೇ ಮರ್ತ್ಯಕ್ಕೆ ಅವತರಿಸುತ್ತಾನೆ. ಅಂದು ಈ ಬುವಿಯೇ ಭುವನವಾಗುತ್ತದೆ. ಆದರೆ ಅದಕ್ಕಿನ್ನೂ ಸಮಯವಿದೆ. ಈ ಪೃಥ್ವಿಯು ಸುಪ್ರಮಾನಸದ ಅವತರಣಿಕೆಗಾಗಿ ಪೂರ್ಣರೂಪದಲ್ಲಿ ಸಿದ್ಧವಾದಾಗ ಮಾತ್ರ ಅದು ಸಾಧ್ಯವಾಗುತ್ತದೆ. ಅಂದು ಅವನ ಆಗಮನವಾಗುತ್ತದೆ. ಆ ಹೊತ್ತಿಗೆ ಇಡೀ ಪೃಥ್ವಿಯ ಜೀವಸಂಕುಲಗಳೆಲ್ಲವೂ ಅತೀಂದ್ರಿಯ ಜೀವಿಗಳಾಗಿ ರೂಪಾಂತರವಾಗುತ್ತವೆ. ಆ ದಿವ್ಯ ಕ್ಷಣಕ್ಕಾಗಿ ಇಡೀ ಪೃಥ್ವಿಯೇ ಕಾಯುತ್ತಿದೆ. ಅಂದು ಭೂಮಿಯ ಜೀವಿಗಳೆಲ್ಲವೂ ಭೌತಿಕ ಜಡಜಂಜಡಗಳಿಂದ ಮುಕ್ತವಾಗಿ ಜೀವಿಸುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 10/202–03**

**ಸಾಕಾರ ಮತ್ತು ನಿರಾಕಾರ**

ಓರ್ವ ಭಕ್ತನು ತನ್ನ ದೈನಂದಿನದ ಜೀವನದಲ್ಲಿ ತೃಪ್ತ ಭಾವನೆಯನ್ನು ಹೊಂದಲೆಂದು ತನ್ನ ವ್ಯಕ್ತಿಗತವಾದ ಏಕಾಗ್ರತೆಯನ್ನು ಸ್ಥಿರಪಡಿಸಿಕೊಂಡಿರುತ್ತಾನೆ. ಅಥವಾ ತನ್ನ ವೈಯಕ್ತಿಕ ಬಲದ ಮೇಲೆಯೇ ಅವಲಂಬಿತವಾಗಿರುತ್ತಾನೆ. ಅವನ ಈ ನಿರ್ಧಾರವನ್ನು ಮರ್ತ್ಯ ವಲಯದಲ್ಲೂ ಮೃತ್ಯುನಂತರವೂ ಅನುಸರಿಸುತ್ತಾನೆ. ಹಾಗೆಯೇ ತನ್ನ ಬಲಕ್ಕೆ ಶಕ್ತಿಯನು ತುಂಬಲಿರುವ ಓರ್ವ ದೈವತಕ್ಕೆ ತನ್ನನ್ನು ತಾನು ಕಟ್ಟಿಹಾಕಿಕೊಂಡಿರುತ್ತಾನೆ. ಅವನ ದೃಷ್ಟಿಯಲ್ಲಿ ತಾನು ನಂಬಿಕೊಂಡು ಬಂದ ದೈವತವೇ ಶ್ರೇಷ್ಠವೆಂದು ತಿಳಿದಿರುತ್ತಾನೆ. ಹಾಗೂ ವಿಶ್ವದ ಉಗಮಕ್ಕೆ ಕಾರಣವಾದ ನಿರಾಕಾರವಾದ–ನಿರ್ವಿಕಾರವಾದ ಚೈತನ್ಯ ಪುರುಷನ ಅಸ್ತಿತ್ವವನ್ನೇ ಅಲ್ಲಗಳೆಯುತ್ತಾನೆ. ಆದರೆ ಮೂಲದಲ್ಲಿ ಅವನ ಈ ಎರಡೂ ನಂಬುಗೆಗಳು ಪೂರ್ಣ ಸತ್ಯವೂ ಅಲ್ಲ ಪೂರ್ಣ ಮಿಥ್ಯವೂ ಅಲ್ಲ. ಇನ್ನು ದೈವತಗಳ ವಿಚಾರಕ್ಕೆ ಬಂದರೆ ಶಿವನು ವಿಷ್ಣುವಿಗಿಂತ ಶ್ರೇಷ್ಠನಲ್ಲ, ವಿಷ್ಣುವೂ ಶಿವನಿಗಿಂತ ಶ್ರೇಷ್ಠನಲ್ಲ ಅಥವಾ ಇನ್ನುಳಿದ ಸಕಲ ದೈವತಗಳು ಕೃಷ್ಣ–ಕಾಳಿಯರಿಗಿಂತ ಶ್ರೇಷ್ಠರೂ ಅಲ್ಲ ಕನಿಷ್ಠರೂ ಅಲ್ಲ. ಪ್ರತಿಯೋರ್ವ ಸಾಧಕನ ಯೋಗ ದೃಷ್ಟಿಯಲ್ಲಿ ಅವನದೇ ನಂಬುಗೆಗಳಿಗನುಗುಣವಾಗಿ ವಿಶ್ವಾತ್ಮನು ಬೇರೆಬೇರೆ ರೂಪಗಳಲ್ಲಿ ದರ್ಶನವಿತ್ತು ಪೊರೆಯುತ್ತಾನೆ. ನಾವುಗಳು ಆ ದೈವಿಕ ವೇಷಗಳನ್ನೇ ಅಂತಿಮ ಸತ್ಯವೆಂದು ಬಗೆದು ಮುಂದಿರುವ ಋತಂಬರವನ್ನು ಕಾಣದೆ ದಿವ್ಯತೆಯಲ್ಲಿ ಅಡಕವಾಗಿರುವ ಏಕತೆಯನ್ನು ಮುರಿಯಲು ಪ್ರಯತ್ನಿಸಬಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 17/428**

ಸಕಲ ಚರಾಚರ ಭೂತ–ವರ್ತಮಾನ–ಭವಿಷತ್‌ಗಳ ಈ ವಿಶ್ವವು ಶಿವನಿಂದಲೇ ಸೃಷ್ಟಿಯಾಗಿದ್ದು, ಈ ಅಂತವಿರದ ಅನಂತ ಬ್ರಹ್ಮಾಂಡಕ್ಕೆ ಅವನೇ ನಾಯಕನು. ಈ ಜಗತ್ತು ಶಿವನ ಅಸ್ತಿತ್ವದ ಕೇವಲ ಒಂದು ಭಾಗವಷ್ಟೇ ಆಗಿದೆ. ಪಂಖಯುತ ಆತ್ಮಗಳನ್ನು ಸೆರೆಹಿಡಿದಿರುವ ದೇಹವೆಂಬ ಗೂಡಿಗಷ್ಟೇ ಅವನು ಸೀಮಿತವಾಗಿಲ್ಲ. ಅದಾಗ್ಯೂ ಆ ಗೂಡಿನೊಳಗಿರುವ ಗೂಢ ಹೃದಯದಲ್ಲಿ ಶಿವನ ನಿವಾಸವಿದ್ದು, ಅವನನ್ನು ಅರಿತು ಆರಾಧಿಸುವವರು ದೇಹಾಂತರಾದರೂ ಅಮರರಾಗಿ–ಚಿರಂತನರಾಗಿ–ನಿತ್ಯನಿರಂತರರಾಗಿ ಬದುಕಬಲ್ಲರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 18/243** **– ಶ್ರೀ ಅರವಿಂದರು**

**ಶಿವನ ಪುಷ್ಪ**

ಒಮ್ಮೆ ಯಾರೋ ಒಬ್ಬರು ನನಗೆ ತಿಳಿಯದಂತೆ ಒಂದು ತುಳಸಿ ಕಡ್ಡಿಯನ್ನು ತಂದುಕೊಟ್ಟರು. ನಾನು ಅದರ ಸುವಾಸನೆಯನ್ನು ಆಘ್ರಾಣಿಸುತ್ತ, 'ಓಹ್, ಭಕ್ತಿಯೇ!' ಎಂದು ಉದ್ಗರಿಸಿದೆ. ಭಕ್ತಿಯಾಧಿಕ್ಯದ ಕಂಪನವೊಂದು ಸುಳಿದಂತಾಯ್ತು. ಆನಂತರವಷ್ಟೇ ಈ ತುಳಸಿಯು ಕೃಷ್ಣನಿಗೆ ಅರ್ಪಿತವಾದ ಸಸ್ಯವೆಂದು ನನಗೆ ಗೊತ್ತಾಗಿದ್ದು.

ಇನ್ನೊಂದು ಸಲ ಸ್ವಲ್ಪ ದೊಡ್ಡದೆನಿಸುವ ಪುಷ್ಪವೊಂದನ್ನು ತಂದುಕೊಟ್ಟರು (ಅಸಲಿಗೆ ಅದೊಂದು ಪುಷ್ಪವೇ ಅಲ್ಲ.) ಅದು ನೋಡಲು ಜೋಳದ ತೆನೆಯಂತೆ ಕಾಣುತ್ತಿತ್ತು. ಅದರ ಉದ್ದವಾದ ಗರಿಗಳು ಸುವಾಸನಾಭರಿತವಾಗಿದ್ದು, ನಾನದನ್ನು ಆಘ್ರಾಣಿಸುತ್ತ, 'ತಪಶ್ಶುದ್ಧಿ' ಎಂದು ಉಚ್ಚರಿಸಿದೆ. ಅದರ ಸುವಾಸನೆಯಲ್ಲಿ ಮಗ್ನಳಾಗಿದ್ದಾಗಲೇ ಅದು ಶಿವನು ತಪಸ್ಸಿನಲ್ಲಿದ್ದಾಗ ಮೂಡಿದ ಪುಷ್ಪವೆಂಬುದನ್ನು ಅರಿತೆ.

ಈ ಜನರು ತಮ್ಮಲ್ಲಿದ್ದ ಪ್ರಾಕ್ತನವಾದ ಜ್ಞಾನವನ್ನು ವೇದಗಳ ರೂಪದಲ್ಲಿ ಸಂರಕ್ಷಿಸಿದ್ದಾರೆ. ಹಾಗೆ ಅವರಿಂದ ಸಂರಕ್ಷಿಸಲ್ಪಟ್ಟ ಜ್ಞಾನವು ನಿಜವಾದ ಋತಂಬರ ಸತ್ಯವಾಗಿದೆ. ಇದು ಕೇವಲ ಮನಸ್ಸು, ಆಲೋಚನೆ ಅಥವಾ ಭಾವನೆಗಳಿಂದ ಸೃಷ್ಟಿಯಾದುದಲ್ಲ. ಇದು ಭಕ್ತಿಯಾಧಿಕ್ಯದ ಕಂಪನವಾಗಿದೆ.

*

*ಜೋಳದಂತೆ ಉದ್ದನೆಯ ಗರಿಗಳಿಂದ ಕೂಡಿದ ಈ ಹೂವಿನ ಬಗ್ಗೆ ತಿಳಿಸಿಕೊಡಿ.*

**ಅದು ಶಿವನ ತಪೋ ಸಮಯದ ಪುಷ್ಪವಾಗಿದೆ.**

ಈ ಹೂವಿನ ಕುರಿತಾದ ಒಂದು ವಿಶೇಷವೆಂದರೆ, ಇದರ ವಾಸನೆಯಿಂದ ಆಕರ್ಷಿತವಾದ ಹಾವುಗಳು ದೂರದ ನೆಲೆಗಳಿಂದ ಬಂದು ಈ ಹೂವಿನ ಸಮೀಪದ ಪೊದೆಗಳಲ್ಲಿ ಗೂಡುಕಟ್ಟಿಕೊಂಡು ನೆಲೆಸುತ್ತವೆ. ನಿಮಗೆ ಗೊತ್ತಿರಬಹುದು, ಸರ್ಪವು ವಿಕಾಸದ ಸಾಂಕೇತಿಕ ಶಕ್ತಿ ಸ್ವರೂಪವಾಗಿದೆ. ಸರ್ಪಗಳನ್ನು ಶಿವನೇ ಸ್ವತಃ ಸೃಷ್ಟಿಸಿರುವನು. ಹಾಗೂ ಆ ಸರ್ಪಗಳನ್ನು ತನ್ನ ಶಿರದ ಮೇಲೆ–ಕುತ್ತಿಗೆಯಲ್ಲಿ ಸುತ್ತಿಕೊಂಡಿರುವದನ್ನು ಕಾಣಬಹುದು. ಅದು ವಿಕಾಸ ಮತ್ತು ರೂಪಾಂತರಣವನ್ನು

ಪ್ರತಿನಿಧಿಸುತ್ತದೆ. ಈ ಪುಷ್ಪಗಳು ಸಾಮಾನ್ಯವಾಗಿ ನದೀ ತೀರಗಳಲ್ಲಿ ಬೆಳೆಯುತ್ತವೆ. ಅಂತಹ ತಾಣಗಳಲ್ಲಿ ನೀವು ಹಾವಿನ ಗೂಡುಗಳ ಸಮೂಹವನ್ನೇ ಕಾಣಬಹುದು.

ಯಾರದೋ ಪೂರ್ವ ನಿರ್ಧಾರದಂತೆ ಈ ಪ್ರಕೃತಿಯು ಇಷ್ಟು ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿರುವದನ್ನು ಕಂಡು ನಾನು ಕೆಲವೊಮ್ಮೆ ವಿಸ್ಮಯಕ್ಕೆ ಒಳಗಾಗಿದ್ದೇನೆ. ಇಡೀ ನಿಸರ್ಗವೇ ಯಾವುದೋ ಒಂದು ಪ್ರಜ್ಞಾಯುತ ಕಂಪನಕ್ಕೆ ಒಳಪಟ್ಟು ಸುಗಂಧ, ವರ್ಣ, ಆಕಾರಗಳನ್ನು ಪಡೆದು ಇದು ಬಹು ಸಹಜವಾದ ಪ್ರಕ್ರಿಯೆಯೋ ಎಂಬಂತೆ ನಡೆಯುತ್ತಿರುತ್ತದೆ.

*ಸರ್ಪವು ಭೌತಿಕ ರೂಪದಲ್ಲಿ ಏನನ್ನು ಪ್ರತಿನಿಧಿಸುತ್ತದೆ? ಈ ಭೌತಿಕ ವಲಯದಲ್ಲಿ ಸರ್ಪಗಳ ಪ್ರಾಮುಖ್ಯತೆ ಏನು?*

**ಸರ್ಪಗಳು ವಿಕಾಸದ ಕಂಪನಗಳಾಗಿವೆ.**

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 4 ಫೆಬ್ರವರಿ 1961**

**1926ರಲ್ಲಿ ನಡೆದ ಒಂದು ಘಟನೆಯನ್ನು ಸ್ಮರಿಸುತ್ತ,**

ಆ ಸಂದರ್ಭವನ್ನು ನಾನು ಹೇಗೆ ವರ್ಣಿಸಬೇಕೆಂದೇ ತಿಳಿಯುತ್ತಿಲ್ಲ. ಅದನ್ನು ಕೃಷ್ಣನ ಒಂದು ಲೀಲೆಯೇ ಎನ್ನಬಹುದು. ಆ ಘಟನೆಯಿಂದ ಶ್ರೀ ಅರವಿಂದರು ಅಷ್ಟಾಗಿ ಪ್ರಭಾವಿತರಾಗಲಿಲ್ಲವೆಂದೇ ಹೇಳಬಹುದು. ಅದು ಕಳೆದುಹೋದ ಕಾಲಘಟ್ಟದ ಭೂತ ಪ್ರಪಂಚವೊಂದು ಪ್ರಸ್ತುತ ವರ್ತಮಾನದಲ್ಲಿ ತನ್ನ ಅಭಿವ್ಯಕ್ತಿಯನ್ನು ಪ್ರಚುರಪಡಿಸಲೆಂದು ಬಂದಂತಿತ್ತು. ಸುಪ್ರಮಾನಸದ ಅವತರಣಿಕೆಯಾದ ಆ ಕಾಯವು, ಜಗತ್ತನ್ನು ನವ್ಯ ಅಭಿವ್ಯಕ್ತಿಯೆಡೆಗೆ ಪರಿವರ್ತಿಸುವ ಕಾರ್ಯದಲ್ಲಿ ತೊಡಗಿತ್ತು.

ಇನ್ನೊಂದು ಬಾರಿ ನನಗೆ ದರ್ಶನವಿತ್ತ ಶಿವನು ಸದ್ಯಕ್ಕೆ ಪೃಥ್ವಿಯಲ್ಲಿ ತಾನು ಅವತರಿಸುವದಿಲ್ಲವೆಂದೂ, ಈ ಸ್ತರದಲ್ಲಿ ನನಗೆ ಮೀಸಲಿರುವ ಕಾರ್ಯಗಳನ್ನು ನಾನು ಪೂರ್ಣಗೊಳಿಸಿದ ನಂತರವಷ್ಟೇ ಅವನು ಇಡೀ ಲೋಕಕ್ಕೆ ಸಹಾಯ ಸಿದ್ಧ ಹಸ್ತನಾಗಿ ಮರ್ತ್ಯಕ್ಕಿಳಿಯಲಿರುವನೆಂದು ತಿಳಿಸಿದ್ದನು. ಅಂದು ನನ್ನ ಕೋಣೆಯೊಳಗೆ ಸಾಕ್ಷಾತ್ಕಾರವಾದ ಶಿವನ ಶಿರವು ಛಾವಣಿಯನ್ನು ತಾಗುವಷ್ಟು ಎತ್ತರದಲ್ಲಿತ್ತು. ಹಾಗೂ ಆ ದಿವ್ಯ ಶರೀರದಿಂದ ಹೊಮ್ಮುತ್ತಿದ್ದ ದಿವ್ಯ ಪ್ರಭೆಯಲ್ಲಿ ಶಿವ ದೇಹವು

ಸ್ವರ್ಣಮಯವಾದ–ರುಧಿರಮಯವಾದ ಕಾಂತಿಯಲ್ಲಿ ಜ್ವಲಿಸುತ್ತಿತ್ತು. ಅವನ ಮಂದಸ್ಮಿತ ವದನವನ್ನು ಕಂಡು ಎದ್ದು ನಿಂತ ನಾನು ಶಿವನ ಎತ್ತರಕ್ಕೆ ಅಲ್ಲದಿದ್ದರೂ ನನ್ನ ಶಿರವು ಅವನ ಭುಜವನ್ನು ತಾಕುವಷ್ಟು ಎತ್ತರಕ್ಕಾದರೂ ಬೆಳೆದು ನಿಂತು ಪ್ರಾರ್ಥಿಸಿದೆನು. ಆನಂತರ ನನ್ನೊಡನೆ ಸಂಭಾಷಣೆಗೈದ ಶಿವನು, ತಾನು ಜಡ ದೇಹಗಳಲ್ಲಿ ಅವತರಸಿ ತನ್ನನ್ನು ತಾನು ಭೌತಿಕ ಶರೀರಕ್ಕೆ ಸೀಮಿತವಾಗಿರಿಸಿ–ಕೊಳ್ಳುವದಿಲ್ಲವೆಂದೂ, ಆದರೆ ಮರ್ತ್ಯಸಂಕುಲಕ್ಕೆ ಬೇಕಿರುವ ಸಕಲ ಸಂಪದವನ್ನು ಕರುಣಿಸುವದಾಗಿಯೂ ತಿಳಿಸಿದನು. ಪಡಿನುಡಿದ ನಾನು ನನ್ನನ್ನು ಈ ಭೌತಿಕದ ಅಹಮಿಕೆಯಿಂದ ಮುಕ್ತಳಾಗಿಸುವಂತೆ ಕೋರಿದೆ. ನಮ್ಮಿಬ್ಬರ ನಡುವಿನ ಈ ಸಂಭಾಷಣೆಯು ಶಬ್ದರಾಹಿತ್ಯವಾಗಿದ್ದು, ಕೇವಲ ಅಂತರಂಗದ ಸಂಸ್ಪರ್ಶದಿಂದಲೇ ನಡೆದಿತ್ತು.

ನನ್ನ ಪ್ರಾರ್ಥನೆಯನ್ನು ಮೆಚ್ಚಿದ ಶಿವನು ಮುಗುಳುನಗುತ್ತ, 'ಆಯ್ತು ನನ್ನ ಮುದ್ದು ಮನವೇ! ನೀನು ಹೇಳಿದಂತೆಯೇ ಆಗಲಿ' ಎನ್ನುತ್ತ ಆಶೀರ್ವಚನವನ್ನಿತ್ತನು. ಮೃದು ಮಂದಹಾಸದ ಆ ಮೊಗವು ಕರಗುತ ಮಾಯವಾಯಿತು. ಆ ಕ್ಷಣಕ್ಕೆ ನಾನು ಪಡೆದ ಶಕ್ತಿಯನ್ನುಕಂಡು ವಿಸ್ಮಿತಳಾದೆ. ನನ್ನ ಭೌತಿಕ ಶರೀರದ ಜೀವಕಣಗಳೆಲ್ಲವೂ ನಾನು ಬೇಕೆಂದಾಗ ಒಗ್ಗಟ್ಟಾಗಿ ಈ ಅನ್ನಮಯ ಶರೀರವನ್ನು ದೃಗ್ಗೋಚರ–ವನ್ನಾಗಿಸುತ್ತಿದ್ದವು. ನಾನು ಬಯಸಿದಾಗಲೆಲ್ಲ ಒತ್ತೊತ್ತಾಗಿರುವ ಆ ಕೋಶಗಳೆಲ್ಲ ಚದುರಿ ನಾನು ಅದೃಶ್ಯವಾಗುವಂತೆ ಗೈಯುತ್ತಿದ್ದವು. ಹರ್ಷಚಿತ್ತಳಾದ ನಾನು ನನಗೆ ಲಭಿಸಿದ ಈ ಅಮೋಘ ಶಕ್ತಿಯ ಕುರಿತು ತಿಳಿಸಲೆಂದು ಶ್ರೀ ಅರವಿಂದರನ್ನು ಹುಡುಕುತ್ತಾ ಹೊರಟೆ. ಆದರೆ ನಾನು ಅಲ್ಲಿಗೆ ತಲುಪುವದರೊಳಗಾಗಿ ಅದೆಲ್ಲವನ್ನೂ ಮೊದಲೇ ಅರಿತಿದ್ದ ಅವರು ಮಂದಹಾಸವನ್ನು ಬೀರಿ, ಸದ್ಯಕ್ಕೆ ಈ ಶಕ್ತಿಯನ್ನು ಉಪಯೋಗಿಸದಂತೆಯೂ, ಅದಕ್ಕೆ ಇನ್ನೂ ಕಾಲ ಕೂಡಿಬಂದಿಲ್ಲವೆಂದೂ ಹೇಳುತ್ತ, ನಾನು ಅನವಶ್ಯಕವಾಗಿ ಶಕ್ತಿಯ ದುರ್ಬಳಕೆ ಮಾಡದಂತೆ ನಿರ್ಬಂಧಿಸಿದರು. ಅದೇ ಕ್ಷಣಕ್ಕೆ ನನ್ನ ಶಕ್ತಿಯು ತಾತ್ಕಾಲಿಕವೆಂಬಂತೆ ಮರೆಯಾಗಿಹೋಯಿತು.

ಇದಕ್ಕೆ ಪ್ರತಿಯಾಗಿ ನುಡಿದ ನಾನು, ಶಿವನಿಂದ ಅನುಗ್ರಹಿತವಾದ ಆ ಶಕ್ತಿಯನ್ನು ಬಳಸುವದರಲ್ಲಿ ತಪ್ಪೇನಿದೆ ಎಂದು ವಾದಿಸಿದೆ. ಅದಕ್ಕೆ ಶ್ರೀ ಅರವಿಂದರು ಶಿವಾರ್ಪಣವಾದ ದಿವ್ಯ ಶಕ್ತಿಯನ್ನು ಬಳಸುವ ಕಾಲ ಇನ್ನೂ ದೂರದಲ್ಲಿದೆ. ಅಲ್ಲಿವರೆಗೂ ಆ ಶಕ್ತಿಯನ್ನು ಕೂಡಿಡುವಂತೆ ನನಗೆ ಮನವರಿಕೆ ಮಾಡಿಕೊಟ್ಟರು.

ನನಗೆ ಆ ದಿವ್ಯ ಶಕ್ತಿಯು ಸಂದು ಅದಾಗಲೇಎರಡು ವರ್ಷಗಳಾಗಿವೆ. ಆದರೆ ಒಮ್ಮೆಯೂ ನಾನದನ್ನು ಪ್ರಯೋಗಿಸಬೇಕೆಂದು ಬಯಸಿಲ್ಲ. ಏಕೆಂದರೆ, ಈಗ ಸಮಯ ಬದಲಾಗಿದೆ. ನನ್ನ ಕರ್ತವ್ಯಗಳು ಇನ್ನೂ ಸಾಕಷ್ಟಿವೆ. ಹಾಗಾಗಿ ಈ ಶಕ್ತಿಗಳ ದುಂದು ವೆಚ್ಚದಲ್ಲಿಯೇ ಕಾಲಹರಣ ಮಾಡಲು ನನಗೆ ಇಷ್ಟವಿಲ್ಲ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 6 ಆಗಸ್ಟ 1961**

**ಚತುರ್ವಿಧ ಪುರುಷ**

ಏಕತ್ವದಿಂದ ದ್ವಿತ್ವವಾಗಿ ಆ ದ್ವಿತ್ವವೇ ಸರ್ವತ್ವವಾಗಿ ಬೆಳೆಯುವ ಈ ನಿಯಮವೇ ಸಚ್ಚಿದಾನಂದ ಲೋಕದಲಿ ಚಿರಂತನವಾದ ಕಾಲಾತೀತವಾದ ಅಭಿವ್ಯಕ್ತಿಯ ಸೂತ್ರವಾಗಿದೆ.

ಇನ್ನು ಭೌತಿಕ–ಪ್ರಾಣಿಕ–ಮಾನಸ ಲೋಕಗಳ ವಿಚಾರಕ್ಕೆ ಬಂದರೆ, ಸರ್ವತ್ರ ವ್ಯಾಪ್ತಿಯಿಂದ ದ್ವಿತ್ವಕ್ಕಿಳಿದು ಅಲ್ಲಿಯಿಂದ ಏಕಮೇವತೆಗೆ ಇಳಿದು ಬರುವ ಅಭಿವ್ಯಕ್ತಿಯ ಸೂತ್ರವು ಈ ತ್ರಿಲೋಕಗಳನ್ನು ನಡೆಸುತ್ತಿದೆ.

ಏಕಮೇವತೆಯ ವಿಶ್ವಾತ್ಮವು ತನ್ನೊಳಗೆ ದ್ವಿತ್ವವನ್ನು ರಚಿಸಿಕೊಂಡು ಅನಂತವನ್ನೇ ಆಳುವ ಶಾಶ್ವತ ನಿಯಮವೊಂದು ಪಾರಮಾರ್ಥದ ಪರಮ ಪುರುಷನನ್ನು ಪ್ರತಿನಿಧಿಸುತ್ತದೆ. ಆ ಪರಮಾತ್ಮ ಮೂಲವು ಕಾಲಾತೀತವೂ–ವಿಶ್ವಾತೀತವೂ ಆಗಿದ್ದು ದಿವ್ಯತೆಯನ್ನು ಸಾಕ್ಷೀಕರಿಸುತ್ತದೆ.

ಆನಂದಮಯದ ಮಂಡಲದಲ್ಲಿ ಸುಪ್ರಮಾನಸದ ಚತುರ್ವಿಧ ತತ್ತ್ವಗಳನ್ನು ಹೊಂದಿರುವ ಚೈತನ್ಯ ಪುರುಷನು ಪ್ರಜ್ಞೆಯ ಅಂತಿಮ ಸಾಕ್ಷಾತ್ಕಾರದ ಪ್ರತೀಕವಾಗಿದ್ದಾನೆ.

ಬ್ರಹ್ಮ, ವಿಷ್ಣು, ಶಿವ ಮತ್ತು ಕೃಷ್ಣ ರೂಪಗಳೇ ಆ ಚೈತನ್ಯ ಪುರುಷನು ಹೊಂದಿರುವ ನಾಲ್ಕು ಮುಖಗಳಾಗಿವೆ.

ಬ್ರಹ್ಮ ತತ್ವವು ಅಸ್ತಿತ್ವದ ಮೂಲವನ್ನು ಪ್ರತಿನಿಧಿಸುತ್ತದೆ. ಬ್ರಹ್ಮನ ಉಪಸ್ಥಿತಿಯಲ್ಲಿ ಅವನ ಶಕ್ತಿ–ಪ್ರಚೋದನೆಗಳಿಂದಲೇ ಸಕಲ ವಿಶ್ವವನು ಸೃಷ್ಟಿಸಲಾಗಿದೆ.

ವಿಷ್ಣುವು ಪ್ರಜ್ಞೆಯ ಸಾಕಾರ ಮೂರ್ತಿಯಾಗಿದ್ದಾನೆ. ಅವನ ವೈಶಾಲ್ಯತೆ, ಸ್ಥಿರತೆ ಮತ್ತು ರಚನಾತ್ಮಕ ದ್ರವ್ಯಗಳಲ್ಲಿಯೇ ವಿಶ್ವವು ಸ್ಥಿತವಾಗಿದೆ.

ಶಿವನು ಅನಂತ ಶಕ್ತಿಯ ಅಭಿವ್ಯಕ್ತಿಯಾಗಿದ್ದಾನೆ. ಅವನ ತಾಂಡವತೆ, ಚೈತನ್ಯ ಮತ್ತು ತಪಸ್ಸಿನಿಂದಲೇ ಸಕಲ ಚರಾಚರಗಳನ್ನು ರಚಿಸಲಾಗಿದೆ.

ಕೃಷ್ಣನು ಅನಂತಾನಂದದ ಪ್ರತಿಮೆಯಾಗಿದ್ದಾನೆ. ಅವನ ಲೀಲೆ, ಮಾಧುರ್ಯ ಹಾಗೂ ಆನಂದದಿಂದಲೇ ಸೃಷ್ಟಿಯ ರೂಪ ರಚನೆಗಳನ್ನು ನಿರ್ಮಿಸಲಾಗಿದೆ.

ಬ್ರಹ್ಮನು ಅಮರತ್ವವನ್ನು, ವಿಷ್ಣುವು ಚಿರಂತನತೆಯನ್ನು, ಶಿವನು ಅನಂತವನ್ನು ಪ್ರತಿನಿಧಿಸಿದರೆ ಕೃಷ್ಣನು ತ್ರಿಮೂರ್ತಿಗಳ ಒಟ್ಟು ಸಂಕೇತಗಳಾದ ಅಮರತ್ವ, ಚಿರಂತನತೆ ಹಾಗೂ ಅನಂತವನ್ನು ಪ್ರತಿನಿಧಿಸುವದರೊಡನೆ ಸ್ವಾಧೀನತೇ, ಸ್ವಾಮಿತ್ವ, ಸ್ವಾಭಿವ್ಯಕ್ತಿತ್ವ ಹಾಗೂ ಸ್ವಯಂಶೋಧನಗಳೆಂಬ ನಾಲ್ಕು ವಿಧವಾದ ತತ್ವಗಳನ್ನೂ ಪರಿಪಾಲಿಸುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/208–09**

**ಪಾರ್ವತಿ**

ನರಕತ್ರಯಾದಿ ತ್ರಿಭುವನಪರ್ಯಂತದ ವಿಕಸನೋಪಾದಿಯ ಸಕಲಸೃಷ್ಟಿಗಿವಳೇ
ಕರ್ತೃಕಾರಣಳು–ಮಾತೃ ಸ್ವರೂಪಳು
ಪರಮಪುರುಷನಓಂಕಾರದಿಂದ ಒಗೆತಂದ ಶಬ್ದಬ್ರಹ್ಮನ ಶತರೂಪೆಯೀಕೆ

ಸೋಮಮಂಡಲದ ಕ್ಷೀರಾಬ್ಧಿ ತಟದ ಆನಂದಧಾಮ ನಾಯಕಿ
ಅನಂತನಂಗಳದಲ್ಲಿ ಅಂಬೆಗಾಲಿಕ್ಕುವ ಅರ್ಭಕರಮಾತೆ
ಕಮಲೋದ್ಭವನ–ಕಮಲನೇತ್ರನ–ಕಲ್ಪಾಂತಕನ ಕಾರಣದೇಹ ನಿವಾಸಿ
ಸೃಷ್ಟಿಸ್ಥಿತ್ಯಾದಿ ಲಯಗಳ ಆಜ್ಞಾದಂಡಧಾರಕಿ
ಕಣ್ತೆರೆಯುತಲೇ ಕಾಲಾಂತವಿಹ ವಿಶ್ವಕೆ ಸೃಷ್ಟಿಮಾತೆಯಾದರೂ
ನೀನಿಹೆ ನಿತ್ಯನೂತನೆ–ಅಮರಚಿರಂತನೇ
ನೀರ್ಗಲ್ಲನಿಯಲದ ಪರ್ವತರಾಜನ ಕುವರಿಯಾದರೂ
ಹೃನ್ಮಂಡಲದಿ ಬೂರಲರಳೆಯ ಮಂಜಿನಂತೆ ಮೃದುಮಧುರಶೀತಲೆ
ವೇದಮಾತೆಯೀಕೆಯನು ವರ್ಣಿಸಲಾರದೆ ನಿರ್ವರ್ಣವಾಗಿ ಹೋದರೆಲ್ಲ
ಋಕ್ಸಾಮಾದಿ ಯಜುರಥರ್ವಣದಾರಣ್ಯಕರು
ಸಪ್ತಾದಿತ್ಯರ ಸಪ್ತಭುವನಗಳ ಸುಪ್ತಮಾರ್ಗಗಳ ತಪದರ್ಶನವಗೈದರೂ
ನಿನ್ನಾಂಕಿತದ ಸುಪ್ರಮಾನಸದ ಪ್ರದೀಪ್ತವನು ಸೂರೆಗೈಯದೆ ಸೊರಗಿಹರೆಲ್ಲ ಧ್ಯಾನಿಗಳು

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 1/574–75 – ಶ್ರೀ ಅರವಿಂದರು**

**ವೃಷಭ**

ವೃಷಭವು ಬಲ ಮತ್ತು ಶಕ್ತಿಯ ಪ್ರತಿಮಾ ರೂಪವಾಗಿದೆ. ವೇದಗಳಲ್ಲಿ ವೃಷಭವನ್ನು ಪರಮ ಪುರುಷನ ಸಂಕೇತವೆಂದು ಹೇಳಲಾಗಿದೆ. ವೃಷ್ಣಿವೃಷಭವು ಪುರುಷನ ಅಸ್ತಿತ್ವವನ್ನು ಸೂಚಿಸಿದರೆ, ಧೇನುವು ಪ್ರಕೃತಿಯ ಸಂಕೇತವನ್ನು ಪ್ರತಿನಿಧಿಸುತ್ತದೆ. ಇನ್ನು ಪ್ರಕೃತಿ–ಪುರುಷರಿಂದ ಒಗೆತಂದ ಜೀವ ಸಂಕುಲವನ್ನು ಪೃಷ್ನಿ ಗರ್ಭರೆಂದು ಸೂಚಿಸಲಾಗಿದೆ. ಅಲ್ಲದೆ ವೃಷಭವು ಶಿವನ ವಾಹನವಾಗಿಯೂ ಚಿತ್ರಿತವಾಗಿದೆ. ವೃಷಭವು ನಮ್ಮ ಸ್ವಪ್ನಗಳಲ್ಲಿ ಅಥವಾ ಅನುಭವಿಕ ಕಲ್ಪನೆಗಳಲ್ಲಿ ಸುಳಿದು ದೈವತ್ವದ ಇರುವಿಕೆಯನ್ನು ಸ್ಪಷ್ಟಪಡಿಸಬಹುದು. ಆದರೆ ಇದರ ಪ್ರಥಮ ಉಲ್ಲೇಖವು ವೇದಗಳಲ್ಲಿಯೇ ಗೋಚರವಾಗಿತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/166**

**ಸಾವಿತ್ರಿಯಲ್ಲಿ ಶಿವ**

ಆತ್ಮಮಂಡಲದ ಪರ್ವತಾಗ್ರದ ಗಹ್ವರದಲಿ ನಾಗೇಂದ್ರ ಬಳ್ಳಿಯ
ಗರುಡದ್ವಾರವನುದಾಟಿ ಒಳಹೊಕ್ಕಳಾಕೆ
ಅಲ್ಲಿರುವಎಲ್ಲವೂ ತಾನೆಂಬ ಸತ್ಯವು ಗೋಚರವಾದೊಡನೆ ಆಂತರ್ಯದ
ಅಳಿದುಳಿದ ಭಾಗಗಳ ಶೋಧಿಸುತ ನಡೆದಳಾಕೆ
ಜಗದಾದಿಯಲ್ಲಿ ಪುರುಷವೃಷಭನೊಡನೆ ತಾನೇ ಕಾಮಧೇನುವಾಗಿ ಧೇನಿಸಿ
ಪೃಷ್ನಿಮಾತೆಯಾದುದನು ನೆನೆಸಿದಳು
ಓಂಕಾರರೂಪಿ ಪರಮಾತ್ಮನ ಮನದನ್ನೆಯಾಗಿ ಮನೋರಾಜ್ಯಗಳ ಹೆತ್ತ
ಅನುಭೂತಿಯನ್ನವಳಲ್ಲಿ ಪಡೆದಳು
ಜಗದಾದಿ ಪುರುಷನೊಡನೆ ಪಾರ್ವತಿಯಾಗಿ ಶಿವಶಂಕರನ ಶಿವಾಂಗಿನಿಯಾಗಿ
ದೇವಪೀಠದ ಅರ್ಧಾಸನವನು ಹೊಂದಿ, ಅರ್ಧನಾರೀಶ್ವರನ
ತೊಡೆಯನೇಯೇರಿ ಕುಳಿತಿರುವ ತನ್ನ ರೂಪವನ್ನೇ ಕಂಡಳಲ್ಲಿ
ಮಹಾದೇವನ ಮಹಾಶಕ್ತಿಯಾಗಿ ಸೌಂದರ್ಯಾನಂದಗಳ ಮಹಾಮಾತೆಯಾಗಿ
ವಿಶ್ವವ ಸಲಹಿದುದನರಿತಳು
ತಾನಾಡಿಸಿ ನಡೆಸಿದ ವಿಶ್ವದಂಗಳದಲಿ ಜೀವಿಸುತಿಹ ಜೀವನಗಳ ಪ್ರಭುವಾಗಿ–
ವಿಭುವಾಗಿ ತಾನೇ ನಿಂತಿರುವದ ಕಂಡಳು

ಕೊನೆಗೊಮ್ಮೆ ಸಹಜಸುಂದರ ಭಂಗಿಯಲಿ ಕೃಷ್ಣನಿಗೆ ರಾಧೆಯಾಗಿ
ಬೃಂದಾವನವನರಳಿಸಿದ ಲೀಲೆಯನೇ ದರ್ಶಿಸಿದಳು

**Savitri, p. (ಸಾವಿತ್ರಿ ಪುಟ) 525**

ಮೃತ್ಯುವಲಯದಂಚಿನ ಕವಾಟಪುಟಭೇದನವಾದೊಡನೆ ಸರಿದುಹೋಗುವ
ಸರಣಿಚಿತ್ರದಂತೆ ಕಾಲಜ್ಞಾನವು ತೆರೆದುಕೊಂಡಿತ್ತು
ನಟರಾಜಶಂಕರನ ಪ್ರಳಯರುದ್ರನಾಟ್ಯವು ಭೂತಗಣದಂತಿಹ ಭೂತಕ್ಷಣಗಳನೆಲ್ಲ
ತೊತ್ತುಳಿದು ಹಾಕುತಿತ್ತು
ಶಿವಪಾದದಲಿ ಸಿಲುಕಿ ಸಂಹಾರವಾಗುತಿಹ ಭುವನಗಳ ಸದ್ದು
ಮೇಘಸ್ಫೋಟದಂತೆ ಗುಡುಗಿತ್ತು
ಅವನ ಉದರಾಗ್ನಿಯಿಂದಾಗಿ ಪುಟಿದೆದ್ದ ಪೃಥ್ವಿಯೀಗ ಅವನ
ಮೃತ್ಯುಭಯಂಕರಕೋಪಾಗ್ನಿಯಲಿ ಜ್ವಲಿಸುತ್ತ ನಲುಗಿತ್ತು
ಕಾಲಾಂತದಲಿ ಬೀಸುವ ವಿನಾಶದ ಬೃಹದ್ರೆಕ್ಕೆಗಳು ಎಲ್ಲವನು ಗುಡಿಸುತ
ಧೂಳೆಬ್ಬಿಸುವಂತೆ ಬೀಸುತ್ತಿತ್ತು
ಅಪ್ರಜ್ಞೆಯ ಕಾಳಕರಾಳ ಕೂಪಗಳೆಡೆಯಿಂದ ಹೆಡೆಯೆತ್ತಿದ ವಲವೃತ್ರಾದಿ ದೈತ್ಯರ
ಕೂಗುಕಹಳೆಗಳು ನೆಲದಡಿಯಿಂದ ಕೇಳುತ್ತಿತ್ತು
ಸರ್ವಸುಭದ್ರಯುತ ರಾತ್ರಿಗಳಲ್ಲಿ ಅರಿಕಂಠಗಳಿಂದ ಹರಿದ ಎಚ್ಚರಿಕೆಯ
ಮೊಳಗುಗಳು ಎದೆಯನೇ ಝಲ್ಲೆನಿಸಿತ್ತು
ಭುವಿಭುವನಗಳನ್ನು ಕಾಯುತ ಪಹರೆ ಸುತ್ತುವ ಸರ್ವಶಕ್ತನ ಜ್ವಲಂತ
ಸುಭಟರು, ಸ್ವರ್ಗದಂಚಿನಿಂದ
ಜನನದ ನಿಃಶ್ರೇಣೀಯನ್ನಿಳಿದು ಮೃತ್ಯುವಲಯಕೆ ಬರುವನದನು ಕಂಡೆ.

**Savitri, p. (ಸಾವಿತ್ರಿ ಪುಟ) 343**

**ಶಿವ ಮತ್ತು ಕಾಳಿ**

ಪುರಾತನ ಭಾರತೀಯ ಮನಗಳ ಪ್ರಕಾರ ಶಕ್ತಿಯು ಅಸ್ತಿತ್ವದ ಆಂತರ್ಯದಲ್ಲಿ ಅಡಕವಾಗಿದೆ. ಶಿವ–ಕಾಳಿ ಮತ್ತು ಬ್ರಹ್ಮ–ಶಕ್ತಿಗಳೆಂಬ ಈ ಪ್ರತಿಮಾ ರೂಪಕ ಜೋಡಿಗಳಲ್ಲಿ ಒಂದು ಇನ್ನೊಂದಕ್ಕೆ ಬೇರೆಯಾದುದಲ್ಲ. ಇವೆರಡೂ ಒಂದೇ

ಸಂಕೇತದ ವಿವಿಧ ರೂಪಕಗಳಾಗಿವೆ. ಅಸ್ತಿತ್ವದೊಳಗೆ ಅಂತರ್ಗತವಾದ ಶಕ್ತಿಯು ವಿಶ್ರಾಂತ ಸ್ಥಿತಿಯಲ್ಲಿಯಾದರೂ ಇರಬಹುದು, ಚಲನಾ ಸ್ಥಿತಿಯಲ್ಲಿಯಾದರೂ ಇರಬಹುದು. ಒಂದು ವೇಳೆ ಆ ಬಲವು ವಿಶ್ರಾಂತ ಸ್ಥಿತಿಯಲ್ಲಿದ್ದರೆ ಅದು ತನ್ನ ಅಸ್ತಿತ್ವವನ್ನು ಕಾಯ್ದುಕೊಂಡೇ ಇರುತ್ತದೆ. ಅಂತಹ ಸಂದರ್ಭದಲ್ಲಿ ಅದರ ಪರಿಣಾಮವನ್ನು ಕಡಿಮೆಗೊಳಿಸುವದಾಗಲೀ, ಪೂರ್ತಿಯಾಗಿ ತೆಗೆದುಹಾಕುವ–ದಾಗಲಿ ಅಥವಾ ಆ ಶಕ್ತಿಗೆ ಪರ್ಯಾಯವಾದ ಬೇರೊಂದು ಮಾರ್ಗವನ್ನು ಕಂಡುಕೊಳ್ಳುವದಾಗಲೀ ಮಾಡಲು ಸಾಧ್ಯವಿಲ್ಲ. ಈ ಸಾರ್ವಕಾಲಿಕ ಸತ್ಯವನ್ನು ನಾವು ಸ್ವೀಕರಿಸಲೇಕು. ಏಕೆಂದರೆ ಪ್ರಾಕೃತಿಕ ದ್ರವ್ಯಗಳ ಮೂಲಸ್ವರೂಪಗಳಿಗೆ ಅನುಗುಣವಾಗಿ ಈ ನಿಯಮವು ತರ್ಕಬದ್ಧವಾಗಿಯೇ ನಿರೂಪಿತವಾಗಿದೆ. ಅಲ್ಲದೆ ಈ ಸಿದ್ಧಾಂತವು ಸ್ಥಾನಿಕ ಮತ್ತು ಅನಂತ ವ್ಯಾಪ್ತಿಯ ಅಸ್ತಿತ್ವಕ್ಕೆ ಪರಕೀಯವಾಗಿದ್ದು, ಬೇರೊಂದು ಆಯಾಮದಿಂದ ಅಥವಾ ಬೇರೊಂದು ಕಾಲಘಟ್ಟದಿಂದ ಈ ವಲಯಕ್ಕೆ ಅತಿಕ್ರಮಣ ಪ್ರವೇಶ ಮಾಡಿದೆ ಎಂದು ಭಾವಿಸುವ ಹಾಗಿಲ್ಲ. ಮಿಥ್ಯಾತ್ವವೆಂಬುದು ಈ ವಿಶ್ವದಲ್ಲಿ ಮಾಯೆ ಮತ್ತು ಭ್ರಮಾತ್ಮಕ ತತ್ವವನ್ನು ಒಪ್ಪಿಕೊಳ್ಳಲೇಬೇಕು. ಕೊನೆಗೆ ಸಾಂಖ್ಯ ದರ್ಶನವು ವೈದಿಕ ಸತ್ಯವಾದ ಪ್ರಕೃತಿ–ಪುರುಷರ ಸಿದ್ಧಾಂತವನ್ನೇ ಪ್ರತಿಪಾದಿಸುತ್ತದೆ. ಅದರ ಪ್ರಕಾರ ಸ್ಥಾನಿಕ ಪ್ರಕೃತಿಯು ವೈಶ್ವಿಕ ಆತ್ಮದೊಂದಿಗೆ ಸಹಬಾಳ್ವೆಯನ್ನು ನಡೆಸಲೇಬೇಕು ಎಂಬುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21–22/90 – ಶ್ರೀ ಅರವಿಂದರು**

## ಶಿವ ಮತ್ತು ರುದ್ರ

**– ಅನು: ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

ಪ್ರತಿಯೊಂದು ಘಟನೆಯನ್ನು 'ಧೀರ'ನು ಸೂಕ್ಷ್ಮವಾಗಿ ಅವಲೋಕಿಸುವನು. ಒಮ್ಮೆಲೆ ಅದನ್ನು ಅರಿಯಲಾಗದಿದ್ದರೆ, ಅದರ ಅಂತಿಮ ಗುರಿ ಮತ್ತು ವಾಸ್ತವತೆಯು ಪ್ರಭೋದನೆಯಾಗುವವರೆಗೂ ಕಾಯುವನು. ಹೀಗೆ ಕಾಯುತ್ತಿದ್ದು, ಶಾಂತವಾಗಿ ಗಮನಿಸಿದಾಗ, ಮನಸ್ಸಿನಲ್ಲಿ ಜೀವನದ ಅರ್ಥವು ಸ್ಫುರಿಸುವದು. ಸಂಭವಿಸುವದರಲ್ಲಿ ಉತ್ತಮವಾದುದು ಮತ್ತು ಅಹಿತಕರವಾದುದು, ದೊಡ್ಡದು ಮತ್ತು ಚಿಕ್ಕ ವಿಷಯಗಳಲ್ಲಿ ಒಂದು ಅನಂತ ಗುರಿಯು ತನ್ನಂತೆ ತಾನು ತೆರೆದುಕೊಳ್ಳುವದು. "ಇರುವೆಯ ಸಾವಿನಲ್ಲಿ ಮತ್ತು ಗುಬ್ಬಚ್ಚಿಯು ಕೆಳಗೆ

ಬೀಳುವದರಲ್ಲಿ ಸರ್ವವನ್ನೂ ಬಲ್ಲ ಭಗವಂತನು ಕಾಣತೊಡಗುವನು. ಇದೇ ರೀತಿ ಬೃಹತ್ತಾದ ನಗರಗಳನ್ನು ನಾಶ ಮಾಡುವ ಭೂಕಂಪ ಮತ್ತು ಸಾವಿರಾರು ಜನರು ಮನೆಯಿಲ್ಲದೆ ಅನಾಥರನ್ನಾಗಿ ಮಾಡುವ ಪ್ರವಾಹಗಳಲ್ಲೂ ಭಗವಂತನು ಕಾಣಿಸಿಕೊಳ್ಳುವನು. ರುದ್ರ ಮತ್ತು ಶಿವರಿಬ್ಬರೂ ಒಂದಾಗಿ ಗೋಚರಿಸುವರು. ಎಲ್ಲಾ ವಸ್ತುಗಳಲ್ಲಿ ಯೋಗಿಯು ದೈವವನ್ನು ದರ್ಶಿಸುವನು. ಸಮಸ್ತ ಸತ್ತೆಗಳಲ್ಲಿ ಮಾತ್ರವಲ್ಲ, ಆದರೆ ಎಲ್ಲಾ ಘಟನೆಗಳಲ್ಲೂ ಆತನು ಭಗವಂತನನ್ನು ಕಾಣುವನು. ಆತನು ಪ್ರವಾಹ, ಆತನೇ ಭೂಕಂಪ, ಆತನೇ ಇನ್ನೂ ಉತ್ತಮ ಜೀವನದ ಕಡೆಗೆ ಕರೆದೊಯ್ಯುವ ಮರಣ. ಆತನೇ ನಮ್ಮನ್ನು ಇನ್ನೂ ಉತ್ತಮ ಮಹದಾನಂದಕ್ಕೆ ಸಿದ್ಧಪಡಿಸುವ ದುಃಖ" ವಾದ ಮಾಡಲು ಸಾಧ್ಯವಿಲ್ಲದಿರುವಂತಹ ವಿಷಯವಿದು. ಇದನ್ನು ನೋಡಿ ಮಾತ್ರ ಅರಿಯಲು ಸಾಧ್ಯ. "ಪರಿಪಶ್ಯಂತಿ ಧೀರಾಃ". ವಿಚಲಿತವಾಗದ ಗ್ರಹಣ ಶಕ್ತಿ ಮತ್ತು ಶಾಂತ ಹೃದಯಗಳು ಮಾತ್ರ ಇದನ್ನು ದೃಗ್ಗೋಚರ ಮಾಡಿಕೊಳ್ಳಬಲ್ಲವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/61–62 – ಶ್ರೀ ಅರವಿಂದರು**

## ಶಿವ ಮತ್ತು ನವ ಸೃಷ್ಟಿ

**– ಅನು: ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

### ಶಿವ ಮತ್ತು ಶಕ್ತಿ

ಆಕೆಯ ತುಟಿಗಳ ಮೇಲೆ ಒಂದು ಸಂತಸಭರಿತ ತೃಪ್ತ ಮುಗುಳ್ನಗೆಯು ಲಾಸ್ಯವಾಡುತ್ತಿತ್ತು. ಹೀಗೆ ಹೇಳಿದಾಗ; ಇಲ್ಲಿಗೆ ಬಂದಿರುವ ನೀನು ಅದೃಷ್ಟವಂತೆ. ನಿನಗೆ ಗೊತ್ತೇ, ಆಧ್ಯಾತ್ಮಿಕತೆಯೊಂದಿಗೆ ಸಹಭಾಗಿತ್ವವನ್ನು ಹೊಂದಲು ತನ್ನ ಸಂಪೂರ್ಣ ಸಮ್ಮತಿಯನ್ನು ಸೂಚಿಸಲು ಶ್ರೀಮಾತೆ ಪ್ರಕೃತಿಯು ಈಗತಾನೇ ನನ್ನ ಬಳಿಗೆ ಬಂದಿದ್ದಳು.

ಆಕೆಯ ಧ್ಯಾನದ ಸಮಯದಲ್ಲಿ ಶ್ರೀಮಾತೆಯ ಚಹರೆಗಳ ಇಡೀ ಚಿತ್ರಣವು ತತ್ಕ್ಷಣದಲ್ಲಿ ನನ್ನ ಮನದ ಚೌಕಟ್ಟಿನಲ್ಲಿ ಮೂಡಿತು. ಆಕೆಯು ಏಕೆ ಆನಂದಭರಿತಳಾದಳು ಎಂಬುದನ್ನು ನಾನು ಅರಿತೆ.

ನಂತರ ತಾನು ಬರೆದಿರುವದನ್ನು ನನಗೆ ತೋರಿಸಿ ಹೀಗೆ ಹೇಳಿದಳು: ಇದು ಹೊಸ ವರ್ಷದ ಸಂದೇಶವಾಗುವದು, ಮಗು, ಯಾರಿಗೂ ಹೇಳಬೇಡ.

ಅದರ ಬಗ್ಗೆ ನಾನು ಯಾರಿಗೂ ಏನೂ ಹೇಳುವದಿಲ್ಲವೆಂದು ಆಕೆಗೆ ನಾನು ವಾಗ್ದಾನ ಮಾಡಿದೆ.

ಆ ಸಂದೇಶ:

ಓ ಪ್ರಕೃತಿ, ಭೌತಿಕ ಮಾತೆ,

ಸಹಭಾಗಿತ್ವವನ್ನು ವಹಿಸುವೆನೆಂದು ನೀನೇ ಹೇಳಿರುವೆ,

ಈ ಸಹಭಾಗಿತ್ವದಲ್ಲಿ ವೈವಿಧ್ಯತೆಗೆ ಪರಿಮಿತಿಯೇ ಇಲ್ಲ.

ನಂತರ ಶ್ರೀಮಾತೆಯು ನನಗೆ ಒಂದು ಸಣ್ಣ ವಿವರಣೆಯನ್ನು ನೀಡಿದರು. ತದನಂತರ ನನ್ನ ಕೈಗಳನ್ನು ಆಕೆಯು ಹಿಡಿದುಕೊಂಡು ಆಳವಾಗಿ ನನ್ನ ಕಣ್ಣುಗಳೊಳಗಡೆ ನೋಡಿದಳು. ನಂತರ ಆಕೆಯು ನನ್ನನ್ನು ಮೃದುವಾಗಿ ಆಲಂಗಿಸಿದಳು. ಹೂವುಗಳನ್ನು ಸ್ವೀಕರಿಸಿದ ನಂತರ ನಾನು ಗೋಲ್ಕಂಡ ಕಡೆಗೆ ಪ್ರಯಾಣ ಮಾಡಿದೆ.

ಮಾರನೆ ದಿನ ಬೆಳಿಗ್ಗೆ ಶಿವ ಮತ್ತು ಶಕ್ತಿಯನ್ನು ವಿವರಿಸುವ ಒಂದು ದೊಡ್ಡ ವೃತ್ತವನ್ನು ನನಗೆ ಶ್ರೀಮಾತೆ ಕಳಿಸಿದರು.

ಅದರೆ ಮೇಲೆ ಶ್ರೀಮಾತೆ ಬರೆದಿದ್ದರು:

ಭೌತಿಕ ಪ್ರಕೃತಿ ಮತ್ತು ಆಧ್ಯಾತ್ಮಿಕ ಶಕ್ತಿಗಳ ನಡುವಿನ ಸಹಭಾಗಿತ್ವದ ಒಂದು ಅಂಶವೆಂದು ಇದನ್ನು ಪರಿಗಣಿಸಬಹುದು.

ಹಿಂದಿನ ದಿನ ಸಾಯಂಕಾಲ ಆಕೆಯು ಹೇಳಿದ್ದರ ವರದಿಯನ್ನು ನಾನು ಆಕೆಗೆ ಕಳಿಸಿದೆ, ಅದು ಹೀಗಿತ್ತು:

ತನ್ನದೇ ಆದ ಹಾದಿಯಲ್ಲಿ ಪ್ರಕೃತಿಯು ಯಾವಾಗಲೂ ಚಲಿಸುತ್ತಿರುವಳು. ಆಧ್ಯಾತ್ಮಿಕತೆಯೂ ತನ್ನದೇ ಆದ ಹಾದಿಯಲ್ಲಿ ಚಲಿಸುತ್ತಿದೆ. ಪ್ರಕೃತಿ ಮತ್ತು ಆಧ್ಯಾತ್ಮಿಕತೆ ಜೊತೆಗೂಡಿ ಸಾಗುವದಿಲ್ಲ. ಇದುವರೆಗೆ ಅವುಗಳ ನಡುವೆ ಸಹಭಾಗಿತ್ವವಿಲ್ಲ. ಆದರೆ ಯಾವಾಗಲೂ ಒಬ್ಬರನ್ನು ಇನ್ನೊಬ್ಬರು ದ್ವೇಷಿಸುತ್ತಿರುವರು.

ನವ ವರ್ಷವು ಪ್ರಾರಂಭವಾದಾಗ ಅವರಿಬ್ಬರ ನಡುವೆ ಅಂತ್ಯರಹಿತ ಸಹಭಾಗಿತ್ವವು ಉಂಟಾಗುವುದು. ಸಮೃದ್ಧತೆ, ಸಂತಸ, ನಿರ್ಮಲ ಯಶಸ್ಸು ಮತ್ತು ಭವ್ಯತೆಗಳು ಬಂದು ನೆಲೆಸುವವು. ಸುಪ್ರಮಾನಸ ಲೋಕದ ಹೊಸ ಪ್ರಪಂಚವು

ಆಗಮಿಸುವದೆಂಬ ಭರವಸೆ ನಮ್ಮೊಂದಿಗಿರುವದು. ಏಕೆಂದರೆ ತಾನು ಸಹಭಾಗಿತ್ವದಲ್ಲಿ ಜೊತೆಗೂಡುವರಾಗಿ ಭೌತಿಕ ಮಾತೆಯಾದ ಪ್ರಕೃತಿ ದೇವಿಯು ಆಶ್ವಾಸನೆ ನೀಡುವಳು. ಆದುದರಿಂದ ಎಲ್ಲರೂ ಆಕೆಯನ್ನು ಪ್ರೀತಿಸಬೇಕು.

**ತಾಯಿ ನೀವು ಹೇಳಿದಿರಿ: 8.11.57**

**ಪರಿವರ್ತನೆಗೆ ಹಾದಿಯನ್ನು ನಿರ್ಮಿಸುತ್ತಿರುವ ಶಿವ**

ಗುರಿಯತ್ತಲಿನ ಪಥವೇ ನೀನು ಕಂಡ ದರ್ಶನ. ಬೆಳಕನ್ನು ಸುರಿಯುವ ಶಕ್ತಿಯಾಗಿರುವನು ಹಾದಿಯಲ್ಲಿಯ ಶಿವ.. ಆದರೆ ಮುಂದಿನ ಸಾಧನೆಗೆ ಸಾಧಕನು ಸಿದ್ಧವಾಗಿರುವನೇ ಎಂದು ಆತನು ಪರೀಕ್ಷಿಸುವನು. ಆ ಸಾಧಕನು ಮುಂದುವರಿಯಲು ಅನುಮತಿ ನೀಡಿದಾಗ, ಹೊಸ ಮತ್ತು ಉನ್ನತ ಅನುಭವಗಳು ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳುವವು. ದೇವತೆಗಳು ಮತ್ತು ಅವರ ಶಕ್ತಿಗಳು ಹಾಗೂ ದೈವೀ ಶಕ್ತಿಗಳ ಮುನ್ನಡೆ ಮತ್ತು ಪ್ರಗತಿಯು ಉಂಟಾಗುವದು. ಅಂದರೆ ಉನ್ನತ ಪ್ರಜ್ಞೆಯಾಗಿ ಪ್ರಕೃತಿಯು ಪರಿವರ್ತನೆಗೊಳ್ಳುವಳು. ನಿನ್ನ ದರ್ಶನದಲ್ಲಿ ಈ ಶಕ್ತಿಗಳ ಚಲಿಸುವಿಕೆಯನ್ನೇ ನೀನು ಕಂಡದ್ದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/155**

**ಶಿವನ ಉಡುಗೊರೆ**

ಶ್ರೀ ಅರಬಿಂದೋರವರು ಇಲ್ಲಿ ಇದ್ದ ದಿನಗಳು ನನಗೆ ನೆನಪಿದೆ.

ನಾನು ಆಗ ಮಹಡಿಯಿಂದ ಕೆಳಗೆ ಹೋಗಿ ಕೋಣೆಯಲ್ಲಿ ನೆರೆದಿದ್ದ ಜನರಿಗೆ ಧ್ಯಾನವನ್ನು ಬೋಧಿಸುತ್ತಿದ್ದೆ. ಅಲ್ಲಿದ್ದ ಕಂಬಗಳ ಮೇಲೆ ಒಂದು ಬಡುವಿದೆ. ಅಲ್ಲಿ ಎಲ್ಲಾ ದೇವತೆಗಳೂ ಕುಳಿತುಕೊಳ್ಳುತ್ತಿದ್ದರು. ಶಿವ, ಕೃಷ್ಣ, ಲಕ್ಷ್ಮೀ, ತ್ರಿಮೂರ್ತಿ, ಚಿಕ್ಕವರು, ದೊಡ್ಡವರು ಎಲ್ಲರೂ ಪ್ರತಿದಿನ ತಪ್ಪದೆ ಧ್ಯಾನಗಳಿಗೆ ಹಾಜರಾಗುತ್ತಿದ್ದರು. ಅದೊಂದು ಸುಂದರವಾದ ದೃಶ್ಯ. ಆದರೆ ಪರಮೋತ್ತಮನ ಬಗ್ಗೆ ಈ ತರಹದ ನಿಷ್ಠೆಯಿಂದ ಕೂಡಿದ ಪ್ರೇಮವನ್ನು ಅವರು ಹೊಂದಿರಲಿಲ್ಲ. ಆ ಚಿಂತನೆಯ ಉಪಯೋಗವನ್ನು ಅವರು ಬಳಸಿರಲಿಲ್ಲ – ಪ್ರತಿಯೊಬ್ಬರೂ, ಸತ್ತೆಯ ಆತನದೇ ಆದ ಸ್ವಂತ ರೀತಿಯಲ್ಲಿ, ಆತನ ನಿರಂತರ ದೈವತ್ವದ ಬಗ್ಗೆ ಸಂಪೂರ್ಣವಾಗಿ

ಜಾಗೃತರಾಗಿದ್ದರು. ಇತರರೆಲ್ಲರನ್ನೂ ತಾನು ಪ್ರತಿನಿಧಿಸಬಹುದೆಂದು ಪ್ರತಿಯೊಬ್ಬರೂ ಅರಿತಿದ್ದರು (ಜನಪ್ರಿಯ ಭಕ್ತಿಭಾವದ ತಳಹದಿಯೇ ಅದಾಗಿತ್ತು). ಯಾವುದೋ ಒಂದು ಏಕತ್ವವನ್ನು ಪ್ರತಿನಿಧಿಸುವ ದೈವವಾಗಿದೆ ತಾನು ಪೂಜಿಸುವ ದೇವರು ಎಂಬುದನ್ನು ಎಲ್ಲಾ ಪಂಥಗಳ ಪ್ರತಿಯೊಬ್ಬ ಭಕ್ತನೂ ತಿಳಿದಿದ್ದನು. ತಾವು ಒಂದು ರೀತಿಯ ಸಮುದಾಯ ಎಂದು ಅವರು ಭಾವಿಸಿದ್ದರು. ಆದರೆ ಚೈತ್ಯ ಜೀವನವು ನೀಡುವ ಯಾವುದೇ ಗುಣಗಳನ್ನು ಅವರು ಹೊಂದಿರಲಿಲ್ಲ. ಆಳವಾದ ಪ್ರೇಮವಿರಲಿಲ್ಲ. ಆಳವಾದ ಅನುಕಂಪವಿರಲಿಲ್ಲ. ಒಗ್ಗಟ್ಟಿನ ಭಾವನೆಯೂ ಇರಲಿಲ್ಲ. ತಮ್ಮ ಸ್ವಂತ ದೈವತ್ವದ ಭಾವನೆಯನ್ನು ಮಾತ್ರ ಅವರು ಹೊಂದಿದ್ದರು. ಅವರು ಕೆಲವು ನಿರ್ದಿಷ್ಟ ಚಲನೆಗಳನ್ನು ಹೊಂದಿದ್ದರು. ಆದರೆ ಪರಮೋತ್ತಮನನ್ನು ಹೀಗೆ ಆರಾಧಿಸುತ್ತಿರಲಿಲ್ಲ, ಅಥವಾ ತಾವು ಉಪಕರಣಗಳು ಎಂಬ ಭಾವನೆಯೂ ಅವರಿಗೆ ಇರಲಿಲ್ಲ. ತಾವು ಪರಮೋತ್ತಮನನ್ನು ಪ್ರತಿನಿಧಿಸುತ್ತಿದ್ದೇವೆ ಎಂಬ ಭಾವನೆ ಅವರಿಗೆ ಇದ್ದಿತು ಮತ್ತು ತನ್ನ ನಿರ್ದಿಷ್ಟ ಪ್ರಾತಿನಿಧ್ಯದ ಬಗ್ಗೆ ಪ್ರತಿಯೊಬ್ಬನೂ ಸಂಪೂರ್ಣವಾಗಿ ತೃಪ್ತನಾಗಿದ್ದನು.

ಕೃಷ್ಣನ ಹೊರತಾಗಿ.... 1926 ರಲ್ಲಿ, ನಾನು ಒಂದು ವಿಧದ ಅಧಿ ಮನಸ್ಸಿನ ಸೃಷ್ಟಿಯನ್ನು ಪ್ರಾರಂಭಿಸಿದ್ದೆನು. ಅಂದರೆ, ಭೌತ ವಸ್ತುವಿನೊಳಗಡೆಗೆ ಅಧಿ ಮನವನ್ನು ಇಳಿಸಿದ್ದೆನು. ಇಲ್ಲಿ ಭೂಮಿಯ ಮೇಲೆ (ಪವಾಡಗಳು, ಮತ್ತು ಇತರ ಎಲ್ಲಾ ತರಹದ ಘಟನೆಗಳು ಸಂಭವಿಸಲು ಪ್ರಾರಂಭವಾಗಿತ್ತು) ಅವತರಿಸಿರೆಂದು ನಾನು ಈ ಎಲ್ಲಾ ದೇವತೆಗಳಿಗೂ ಹೇಳಿದೆ. ಅಂದರೆ ಒಂದು ದೇಹದೊಂದಿಗೆ ಮೂರ್ತೀಭವಿಸಿರೆಂದು ಹೇಳಿದೆ (ಕೆಲವರು ಅಸಾಧ್ಯವೆಂದು ನಿರಾಕರಿಸಿದರು). ಆದರೆ, ಶ್ರೀ ಅರಬಿಂದೋರವರೊಂದಿಗೆ ಯಾವಾಗಲೂ ಸೌಹಾರ್ದದ ಸಂಬಂಧವನ್ನು ಕೃಷ್ಣನು ಹೊಂದಿದ್ದನು. ಆತನು ಮೈದಾಳಲು ಅಂಗೀಕರಿಸಿದ್ದನ್ನು ನಾನು ನನ್ನ ಸ್ವಂತ ಕಣ್ಣುಗಳಿಂದ ನೋಡಿದೆನು. ಇದು ಸಂಭವಿಸಿದ್ದು ನವೆಂಬರ್ 24 ರಂದು. ಅದೇ "ಶ್ರೀಮಾತೆ"ಯ ಪ್ರಾರಂಭ (1926 ರಿಂದ ಶಿಷ್ಯರಿಗೆ ತಾಯಿಯನ್ನು "ಶ್ರೀಮಾತೆ"ಯೆಂದು ಶ್ರೀ ಅರಬಿಂದೋ ಅವರು ವಿಧ್ಯುಕ್ತವಾಗಿ ಪರಿಚಯಿಸಿದರು. ಹಿಂದೆ ಅವರು ಆಕೆಯನ್ನು "ಮಿರ" ಎಂದು ಸಂಬೋಧಿಸುತ್ತಿದ್ದರು).

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಆಗಸ್ಟ್ 2, 1961**

**ಪರಿವರ್ತನೆಯ ಕಡೆಗಿನ ಮೂರು ಹಾದಿಗಳು**

ಈ ಪರಿವರ್ತನೆಯ ಸಮಸ್ಯೆ, ಅದಕ್ಕೆ ಮೂರು ಹಾದಿಗಳಿವೆ ಎಂಬುದು ನನಗೆ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಕಾಣುತ್ತಿದೆ. ಮುಂದುವರಿಯಲು ಮೂರು ದಾರಿಗಳು ಮತ್ತು ಮೂರನ್ನೂ ಜೊತೆಗೂಡಿಸಿದಾಗ ಮಾತ್ರ ತಲುಪಿ ಪೂರ್ಣಗೊಳಿಸುವದು.

ಮೊದಲನೆಯದು, ಸಹಜವಾಗಿ ಬಹಳ ಮುಖ್ಯವಾದುದು, "ಆಧ್ಯಾತ್ಮಿಕ" ಎಂದು ಕರೆಯಬಹುದಾದಂತಹುದು, ಪ್ರಜ್ಞೆಯೊಂದಿಗೆ ಸಂಪರ್ಕ ಹೊಂದಿರುವಂತಹುದು – ಪ್ರೇಮ–ಪ್ರಜ್ಞೆ–ಶಕ್ತಿ. ಹೌದು, ಅದೇ ಆಗಿದೆ. ಅದು ಈ ಮೂರು ಅಂಶಗಳು. ಪರಮೋತ್ತಮ ಪ್ರೇಮ–ಪ್ರಜ್ಞೆ–ಶಕ್ತಿ ಮತ್ತು ಸಂಪರ್ಕ, ಅದರೊಂದಿಗೆ ಒಂದಾಗುವ: ಅದನ್ನು ಸ್ವೀಕರಿಸಲು, ಅದನ್ನು ವ್ಯಕ್ತಪಡಿಸಲು ಮತ್ತು ಅದೇ ಆಗಿರಬಲ್ಲ ಎಲ್ಲಾ ಭೌತಿಕ ಜೀವಕೋಶಗಳ ಸಮರ್ಪಣೆ.

ಎಲ್ಲಾ ಹಾದಿಗಳನ್ನು ಗಮನಿಸಿದಾಗ, ಇದೇ ಅತ್ಯಧಿಕ ಶಕ್ತಿಭರಿತವಾಗಿರುವದು ಮತ್ತು ಅತ್ಯಂತ ಅನಿವಾರ್ಯವಾದುದು.

ಅತೀಂದ್ರಿಯವಾದ ಹಾದಿಯೂ ಸಹ ಇದೆ. ಅದು ಎಲ್ಲಾ ಮಧ್ಯಸ್ಥ ಲೋಕಗಳು ನಡುವೆ ಪ್ರವೇಶಿಸುವಂತೆ ಮಾಡುವದು. ಎಲ್ಲಾ ಶಕ್ತಿಗಳ ಮತ್ತು ವ್ಯಕ್ತಿತ್ವಗಳ ಒಂದು ಸವಿವರವಾದ ಜ್ಞಾನವಿದೆ. ಎಲ್ಲಾ ಮಧ್ಯಸ್ಥ ಪ್ರದೇಶಗಳ ಜ್ಞಾನವೂ ಇದೆ. ಅದು ಅವುಗಳೆಲ್ಲವನ್ನೂ ಉಪಯೋಗಿಸುವದು. ಅಧಿ ಮನಸ್ಸಿನ (Over mind) ದೈವತ್ವಗಳನ್ನು ಯಾರಾದರೂ ಉಪಯೋಗಿಸಲೆಂದು ಅದು ಅಸ್ತಿತ್ವದಲ್ಲಿ ಇದೆ. ಇದು ಎರಡನೆಯ ಪಥ. ಈ ಎರಡನೆಯ ಪಥದ ಭಾಗವಾಗಿರುವರು ಶಿವ, ಕೃಷ್ಣ ಮತ್ತು ಶ್ರೀಮಾತೆಯ ಎಲ್ಲಾ ಅಂಶಗಳು.

ಉನ್ನತ ಭೌದ್ಧಿಕ ಹಾದಿಯೂ ಸಹ ಇದೆ. ಇದು ವೈಜ್ಞಾನಿಕತೆಯನ್ನು ಮೀರಿರುವ ಆತ್ಮದ ಪ್ರಕ್ಷೇಪ. ಇದು ಸಮಸ್ಯೆಯನ್ನು ಕೆಳಗಿನಿಂದ ಸ್ವಾಧೀನಪಡಿಸಿಕೊಳ್ಳುವದು ಮತ್ತು ತನ್ನದೇ ಆದ ಪ್ರಾಮುಖ್ಯತೆಯನ್ನು ಸಹ ಹೊಂದಿದೆ. ಸವಿವರವಾದ ನಿರ್ವಹಣೆಯ ದೃಷ್ಟಿಕೋನದಿಂದ, ಕಲ್ಪನೆಗಳನ್ನು ಈ ಹಾದಿಯು ಕಡಿಮೆಗೊಳಿಸಿ, ಇನ್ನೂ ಹೆಚ್ಚು ನೇರವಾದ ಮತ್ತು ನಿರ್ದಿಷ್ಟ ಕ್ರಿಯೆಯನ್ನು ಕರೆತರುವದು.

ಮೂರನ್ನು ಜೊತೆಗೂಡಿಸಿದರೆ, ಕಾರ್ಯವು ಖಂಡಿತವಾಗಿ ಶೀಘ್ರ ನೆರವೇರುವದು.

ಮೊದಲನೆಯದರ ಹೊರತಾಗಿ ಏನೂ ಮಾಡಲು ಸಾಧ್ಯವಿಲ್ಲ. ಅದಿಲ್ಲದೆ ಇತರವುಗಳು ಕಾಲ್ಪನಿಕವಾಗುವವೆಂದೇ ಹೇಳಬಹುದು. ಮತ್ತು ಅವು ಸರಿಯಾದ ಹಾದಿಯಲ್ಲಿ ಮುನ್ನಡೆಸುವದಿಲ್ಲ. ಅನಿರ್ದಿಷ್ಟವಾಗಿ ನೀನು ಸುತ್ತುಹಾಕುತ್ತಲೇ ಇರಬೇಕಾಗುವದು. ಆದರೆ ಇತರ ಎರಡು ಮೊದಲನೆಯದನ್ನು ಸುತ್ತುವರಿದಿದ್ದರೆ, ಆಗ ಕ್ರಿಯೆಯು ಹೆಚ್ಚು ನಿರ್ದಿಷ್ಟ, ನೇರ ಮತ್ತು ಶೀಘ್ರವಾಗಿ ನೆರವೇರುವದು ಎಂಬುದೇ ನನ್ನ ಚಿಂತನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/60**

*ಪ್ರಶ್ನೆ: ನೀವು ಬೇಕೆನಿಸಿದವರಿಗೆಲ್ಲಾ ನಿಮ್ಮ ಶಕ್ತಿಯನ್ನು ರವಾನಿಸುವಿರಿ – ಲೆನಿನ್, ಕೇಮಲ್, ಗಾಂಧಿ, ಆದರೆ ತಮ್ಮ ಇಷ್ಟ ದೇವತೆಯಾಗಿ ಶಿವ ಅಥವಾ ಕೃಷ್ಣನನ್ನು ಕರೆಯುವವರು ನಿಮ್ಮಿಂದ ಹೇಗೆ ಪ್ರತಿಕ್ರಿಯೆಯನ್ನು ಪಡೆಯುವರು? ನನಗೆ ಅರ್ಥವಾಗುತ್ತಿಲ್ಲ.*

ಪುನಃ ಶಿವನು ಯಾರು? ಕೃಷ್ಣನು ಯಾರು? ಮತ್ತು ಇಷ್ಟ ದೈವವೆಂದರೆ ಏನು? ಇರುವದು ಒಂದೇ ದೈವತ್ವ. ಒಂದು ಸಾವಿರ ದೈವತ್ವಗಳು ಇಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/493 – ಶ್ರೀ ಅರವಿಂದರು**

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

**19**

### ಅಧ್ಯಾಯ – 18

ಗೀತೆಯ ಕರ್ಮ ಯೋಗವನ್ನು ಹೀಗೆ ಸಂಕ್ಷೇಪಿಸಬಹುದು, ದಿವ್ಯ ಜನ್ಮವನ್ನು ಪಡೆಯುವುದು ಮತ್ತು ದಿವ್ಯ ಕಾರ್ಯಗಳನ್ನು ಮಾಡುವುದು; ದಿವ್ಯ ಜನ್ಮ ಅಂದರೆ ಜೀವವು ಉಚ್ಚತರ ಪ್ರಜ್ಞೆಯಲ್ಲಿ ಜನ್ಮ ತಳೆದು ಅದನ್ನು ದೈವೀಕರಿಸುವುದು ಮತ್ತು ದಿವ್ಯ ಕರ್ಮ ಅಂದರೆ ಜನ್ಮ ತೆಗೆದುಕೊಳ್ಳುವ ಮೊದಲು ದಿವ್ಯ ಜನ್ಮ ಪ್ರಾಪ್ತಿಗಾಗಿ ಕರ್ಮ ಮಾಡುವುದು, ಆನಂತರ, ಜನ್ಮ ತಾಳಿದ ನಂತರ ಅದನ್ನು ಅಭಿವ್ಯಕ್ತಗೊಳಿಸಲು ದಿವ್ಯ ಕಾರ್ಯ ಮಾಡುವುದು ಎಂದು ಅರ್ಥ. ಇದು ಗೀತೆಯ ಕರ್ಮ ಯೋಗದ ನಿಜವಾದ ತಥ್ಯಗೀತೆಯು, ಕರ್ಮಗಳನ್ನು ಕುರಿತು ಯಾವ ಬಾಹ್ಯ ಲಕ್ಷಣಗಳನ್ನು ಹೇಳುವುದಿಲ್ಲ. ಸಾಮಾನ್ಯವಾಗಿ ಪ್ರಪಂಚವು ಬಾಹ್ಯ ಲಕ್ಷಣಗಳನ್ನು ಹುಡುಕುವುದು, ಅವುಗಳನ್ನೇ ಗುರುತಿಸುವುದು; ಆದರೆ ಗೀತೆಯು ಬಾಹ್ಯ ಲಕ್ಷಣಗಳ ಗೋಜಿಗೆ ಹೋಗುವುದೇ ಇಲ್ಲ. ಸಾಮಾನ್ಯವಾಗಿ ನಾವು ಅತಿ ಉನ್ನತವೆಂದು ಬಗೆಯುವ ಯಾವ ನೈತಿಕ ಗುಣಗಳನ್ನೂ ಹೇಳುವುದಿಲ್ಲ, ಮಾನವನ ತರ್ಕಾಧಾರಿತ ಯಾವ ವಿವರಣೆಯನ್ನೂ ಅದು ಕೊಡುವುದಿಲ್ಲ. ಗೀತೆಯು ಹೇಳುವ ಲಕ್ಷಣಗಳು ತೀರ ವೈಯಕ್ತಿಕ, ವ್ಯಕ್ತಿ ನಿಷ್ಠ ಅಥವಾ ಆತ್ಮ ನಿಷ್ಠ ಮತ್ತು ತೀರ ಆಂತರಿಕವಾದವುಗಳು. ಅವು ಯಾವುವೂ ಮೇಲೆ ಪ್ರಕಟವಾಗಿ ಕಾಣುವಂಥವುಗಳಲ್ಲ, ಅವು ತೀರ ಆಧ್ಯಾತ್ಮಿಕ ಹಾಗೂ ಅತಿ ನೈತಿಕ(ನೈತಿಕತೆಯನ್ನು ಮೀರಿದವುಗಳು)ವಾಗಿವೆ.

ದಿವ್ಯ ಕರ್ಮಗಳು ಆತ್ಮದ ಮೂಲದಿಂದ ಉಗಮವಾಗುತ್ತವೆ ಅಥವಾ ಬರುತ್ತವೆ, ಅವುಗಳನ್ನು ಆತ್ಮದ ಬೆಳಕಿನಲ್ಲಿ ಮಾತ್ರ ಗುರುತಿಸಲು ಸಾಧ್ಯ. ಏಕೆಂದರೆ, “ಕರ್ಮ ಯಾವುದು, ಅಕರ್ಮ ಯಾವುದು ಎಂಬುದನ್ನು ತಿಳಿಯುವುದು ಕಠಿಣವಾಗಿದೆ, ಋಷಿ ಮುನಿಗಳೂ ಸಹ ಇದರಲ್ಲಿ ಎಡವುತ್ತಾರೆ” ಎಂದು ಗೀತೆ ಕೂಡ ಹೇಳುತ್ತದೆ (4.16) ಅವರೂ ಸಹ ಎಲ್ಲರಂತೆ ವ್ಯಾವಹಾರಿಕ ದೃಷ್ಟಿಕೋನದಿಂದ, ಸಾಮಾಜಿಕ, ನೈತಿಕ, ಬೌದ್ಧಿಕ ಮಾಪನಗಳ ಮೂಲಕವೇ ತೀರ್ಮಾನ ಮಾಡಲು ಪ್ರಯತ್ನಿಸುತ್ತಾರೆ. ಅವರೇನೂ ಮೂಲ ಆಳಕ್ಕಿಳಿದು ಪರೀಕ್ಷಿಸಲು ಪ್ರಯತ್ನಿಸುವುದಿಲ್ಲ. ಗೀತೆ ಸ್ಪಷ್ಟ

ಶಬ್ದಗಳಲ್ಲಿ ಹೀಗೆ ಹೇಳುತ್ತದೆ, "ನಾನು ನಿನಗೆ ಬೋಧಿಸುವ ಈ ಜ್ಞಾನಸಮ್ಮತ ಕರ್ಮಗಳನ್ನು ಮಾಡುವುದರ ಮೂಲಕ ನೀನು ಎಲ್ಲ ಪಾಪ ಕರ್ಮಗಳನ್ನೂ ಮೀರಿ ನಿಲ್ಲಲು ಸಾಧ್ಯವಾಗುವುದು. ಕರ್ಮ ಯಾವುದು ಅಕರ್ಮ ಯಾವುದು ಎಂಬುದನ್ನು ಮೊದಲು ಚೆನ್ನಾಗಿ ಅರಿತು–ಕೊಳ್ಳಬೇಕು. ಇದು ಕಠಿಣವಾದ ಕೆಲಸ, ಏಕೆಂದರೆ ಕರ್ಮಣಾ ಗಹನೋಗಲೆ; ಕರ್ಮ ದಾರಿ ತುಂಬ ಸಂಕ್ಲಿಷ್ಟವಾಗಿದೆ". (4.16–17) ಪ್ರಪಂಚದಲ್ಲಿ ಕರ್ಮ ಮಾಡುವುದೆಂಬುದೊಂದು ಘನ ನಿಬಿಡವಾದ ಅರಣ್ಯವನ್ನು ಪ್ರವೇಶಿಸುವ ತರಹ ಅತಿ ನಿಗೂಢವಾಗಿದೆ. ಸುಲಭ ವೇಧ್ಯವಲ್ಲ.

ಮಾನವನು ಎಷ್ಟೇ ಪ್ರಯತ್ನ ಮಾಡಿದರೂ ಅರಣ್ಯದಲ್ಲಿ ಹೇಗೆ ದಾರಿ ತಪ್ಪುವ ಸಂಭವವಿರುವುದೋ ಹಾಗೆ ಕರ್ಮವನ್ನು ನಿರ್ಧರಿಸುವುದರಲ್ಲಿ ಕೂಡ ಬಹಳ ತಪ್ಪು ಸಂಭವಿಸುವುದು ಸಾಧ್ಯವಿದೆ. ಏನೇ ಮಾಡಿದರೂ ಅವನು ತಾನಿರುವ ಕಾಲಮಾನ ಪರಿಸ್ಥಿತಿ ಹಾಗೂ ಬೌದ್ಧಿಕ ವಿಚಾರ ಮಾಡಿಕೊಂಡೇ ಮುನ್ನಡೆಯಬೇಕು. ಅನೇಕ ಸಲ ಅನೇಕ ತರಹದ ವ್ಯಕ್ತಿತ್ವಗಳೂ ಸಹ ಅವನಿಗೆದುರಾಗುತ್ತವೆ. ಆಯಾ ಕಾಲಘಟ್ಟದ ಆಲೋಚನೆ, ಸಾಮಾಜಿಕ ಅರಿವಿನ ಹಿನ್ನಲೆಯಲ್ಲಿ ವ್ಯಕ್ತವಾಗುವ ಪರಿಕಲ್ಪನೆಗಳು ಅನೇಕ ಸಲ ಗೊಂದಲವನ್ನುಂಟು ಮಾಡುವಂಥವುಗಳಾಗಿರುತ್ತವೆ. ಎಷ್ಟೋ ವಿಚಾರಗಳು ತೀರ ಸಾಂಪ್ರದಾಯಿಕ, ಕಾಲಾನುಬಂಧಿಯಾಗಿ ತಾತ್ಕಾಲಿಕವಾಗಿರುವ ಸಾಧ್ಯತೆಯೂ ಇದೆ. ತಾವೇ ಪರಿಪೂರ್ಣ ಎಂದು ಘೋಷಿಸಿಕೊಳ್ಳುವ ಅನೇಕ ಕಾರ್ಯಗಳು, ಅವಿಕಾರಿಯಾದ ಸತ್ಯಗಳೆಂದು ಸಾರುವ ಸಂಗತಿಗಳು ತೀರ ತೆಳುವಾಗಿದ್ದು, ಮೇಲ್ಮೈ ಸ್ತರದ ಸತ್ಯಗಳಾಗಿದ್ದು ತರ್ಕವಿರುದ್ಧವಾಗಿರುವುದೂ ಉಂಟು. ಕೊನೆಗೆ ಇವೆಲ್ಲ ನ್ಯೂನತೆ, ಕೊರತೆ, ತಪ್ಪುಗಳ ನಡುವೆ ದೃಢವಾದ ಆಧಾರದ ಮೇಲೆ ನಿಂತಿರುವ ಉಚ್ಚತ ಮೂಲ ಸತ್ಯವನ್ನು ಹುಡುಕಲೆಳಸುತ್ತಿರುವ ಜಿಜ್ಞಾಸುವು "ಇವೆಲ್ಲ ಭ್ರಮೆಯಲ್ಲವೇ? ಕರ್ಮಗಳು, ಜೀವ, ಜೀವನ ಎಲ್ಲವೂ ಬಂಧನಗಳೇ ಅಲ್ಲವೇ? ಅಕರ್ಮವೇ ಶ್ರೇಯಸ್ಕರವಲ್ಲವೇ? ಅಕರ್ಮವನ್ನು ಆಶ್ರಯಿಸುವುದೇ ಅನಿವಾರ್ಯ ಹಾಗೂ ಶ್ರೇಷ್ಠ ಧರ್ಮವಲ್ಲವೇ? ಎಂಬ ಪ್ರಶ್ನೆಯನ್ನು ತನಗೆ ತಾನೇ ಹಾಕಿಕೊಳ್ಳುವ ಪ್ರಸಂಗ ಬರುತ್ತದೆ. ಆದರೆ ಶ್ರೀ ಕೃಷ್ಣ ಹೇಳುತ್ತಾನೆ: ಈ ವಿಷಯದಲ್ಲಿ ಋಷಿ ಮುನಿಗಳೂ ಗೊಂದಲಕ್ಕೀಡಾಗಿದ್ದಾರೆಯೇ ಹೊರತು ಭ್ರಮಿಷ್ಠರಾಗಿಲ್ಲ, ಏಕೆಂದರೆ ಜ್ಞಾನ ಹಾಗೂ ಮೋಕ್ಷ ಪ್ರಾಪ್ತಿಯು ಕರ್ಮದಿಂದಲೇ ಬರುವುದು, ಅಕರ್ಮದಿಂದಲ್ಲ.

ಹಾಗಾದರೆ ಪರಿಹಾರವೇನು? ಯಾವ ತರಹದ ಕರ್ಮ ಮಾಡುವುದರಿಂದ ಜೀವನದ ದೋಷಗಳಿಂದ ಪಾರಾಗಬಹುದು? ಈ ಸಂದೇಹ, ಅನುಮಾನ, ತಪ್ಪು,

ಅಪರಾಧ, ದುಃಖ, ನೋವು, ಈ ರೀತಿಯ ಸಂಮಿಶ್ರ, ಸದೋಷ ಹಾಗೂ ಗೊಂದಲಗೆಡಿಸುವ ಪರಿಣಾಮಗಳಿಂದ ಪಾರಾಗುವುದು ಹೇಗೆ? ನಮ್ಮ ಅತಿ ನಿರ್ದಿಷ್ಟ, ಪರಿಶುದ್ಧ, ಸದುದ್ದೇಶಪೂರಿತ ಕರ್ಮಗಳಿಂದ ಕೂಡ ಮುಕ್ತಿ ಹೊಂದುವುದು ಹೇಗೆ? ನೂರಾರು ಬಗೆಯ ದುಃಖ, ಯಾತನೆ ಇವುಗಳಿಂದ ಪಾರಾಗುವುದು ಹೇಗೆ? ಇವುಗಳಿಗೆ ಸಮರ್ಪಕವಾದ ಉತ್ತರವೆಂದರೆ, ಯಾವ ರೀತಿಯ ಬಾಹ್ಯ ಲಕ್ಷಣ, ಭೇದ ಇತ್ಯಾದಿಗಳನ್ನು ಹೇಳುವುದರಿಂದ ಪ್ರಯೋಜನವಿಲ್ಲ. ಯಾವ ಕರ್ಮಗಳು ಈ ಪ್ರಪಂಚಕ್ಕೆ ಅನವಶ್ಯಕವೋ ಅವುಗಳನ್ನು ಮಾಡಲೇಬಾರದು. ನಮ್ಮ ಮಾನವೀಯ ಚಟುವಟಿಕೆಗಳಿಗೆ, ಕಾರ್ಯಗಳಿಗೆ ಯಾವ ರೀತಿಯ ಬಂಧನವನ್ನು, ಮಿತಿಯನ್ನು ಹೇರುವ ಅಗತ್ಯವಿಲ್ಲ. ವಿಪರೀತವಾಗಿ ಎಲ್ಲ ರೀತಿಯ ಕರ್ಮಗಳನ್ನು ಮಾಡಬಹುದು. ಆದರೆ ಅವೆಲ್ಲವುಗಳ ಜೀವಾಳವು, ಆತ್ಮವು ಪರಮಾತ್ಮನ ಜೊತೆ ಸಂಯೋಗ ಹೊಂದಿರಬೇಕು, ಬೆರೆತಿರಬೇಕು, 'ಮುಕ್ತಃ ಕೃತ್ ಸ್ನ ಕರ್ಮಕ್ರತ್ (ಗೀ.4.18)' – ಅಕರ್ಮವು ದಾರಿಯಲ್ಲ, ಉಚ್ಚತಮ ಬುದ್ಧಿಯ ಅಂತದೃಷ್ಟಿಯುಳ್ಳ ವ್ಯಕ್ತಿಯು ಅಕರ್ಮವೇ ಒಂದು ನಿರಂತರವಾದ ಕರ್ಮವೆಂದೂ, ಪ್ರಕೃತಿ ಮತ್ತು ಅದರ ಗುಣಗಳ ನಿರಂತರ ಕ್ರಿಯೆಗೆ ಸದಾ ಆಸ್ಪದ ನೀಡಿರುವ ಸ್ಥಿತಿ ಎಂಬುದನ್ನು ಸುಲಭವಾಗಿ ಕಂಡುಕೊಳ್ಳುತ್ತಾನೆ. ಭೌತಿಕ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಮನಸ್ಸು ತಾನೇ ಎಲ್ಲ ಕಾರ್ಯಗಳನ್ನು ಚಟುವಟಿಕೆಗಳನ್ನು ಮಾಡುತ್ತದೆ, ಪ್ರಕೃತಿ ಇವುಗಳ ಕರ್ತೃ ಅಲ್ಲವೆಂಬ ಭ್ರಮೆಯಲ್ಲಿ ಬಿದ್ದಿರುತ್ತದೆ. ಅದು ನಿಷ್ಕ್ರಿಯೆಯನ್ನೇ ಜಡತ್ವವನ್ನೇ ಮೋಕ್ಷವೆಂದು ತಪ್ಪಾಗಿ ಅರ್ಥೈಸಿಕೊಂಡಿದೆ. ಯಾವುದು ಸಂಪೂರ್ಣ ಜಡ, ನಿಷ್ಕ್ರಿಯವೆಂದು ಅದು ಭಾವಿಸಿದೆಯೋ, ಅಂಥ ಕಲ್ಲು, ಮಣ್ಣುಗಳಲ್ಲಿ ಕೂಡ ಪ್ರಕೃತಿಯ ಕಾರ್ಯ ತತ್ಪರವಾಗಿರುತ್ತದೆ, ತನ್ನ ಸಂಯಮವನ್ನು, ಸಮತೋಲನವನ್ನದೆಂದಿಗೂ ಕಳೆದು ಕೊಂಡಿರುವುದಿಲ್ಲ. ಹಾಗೆ ನೋಡಿದರೆ ಅತ್ಯಂತ ಘನಿಷ್ಠ ಕಾರ್ಯಗಳ ಮಧ್ಯೆಯೂ ಆತ್ಮವು ಕರ್ಮಗಳ ಬಂಧನದಿಂದ ಮುಕ್ತವಾಗಿಯೇ ಇರುತ್ತದೆ. ಅದು ಕರ್ತೃವಾಗಿರುವುದಿಲ್ಲ, ನಡೆಯುವ ಚಟುವಟಿಕೆ, ಕರ್ಮಗಳಿಂದ ಬಂಧಿತವಾಗುವುದಿಲ್ಲ. ಯಾರು ನಿಜವಾಗಿ ಆತ್ಮನ ಸ್ವಾತಂತ್ರ್ಯದಡಿ ಜೀವಿಸುತ್ತಾರೋ, ಪ್ರಕೃತಿಯ ತ್ರಿಗುಣಗಳ ಮಿತಿಯನ್ನು ಮೀರಿರುತ್ತಾರೋ ಅವರು ಮಾತ್ರ ಕರ್ಮ ಮುಕ್ತರಾಗಿರುತ್ತಾರೆ. ಇದನ್ನೇ ಗೀತೆಯು ಸ್ಪಷ್ಟವಾಗಿ ಹೇಳುತ್ತದೆ. "ಕರ್ಮಗಳಲ್ಲಿ ಅಕರ್ಮವನ್ನು ಹಾಗೂ ಅಕರ್ಮಗಳಲ್ಲಿ ಕರ್ಮವನ್ನು ಕಾಣುವ ವ್ಯಕ್ತಿಯೇ ನಿಜವಾಗಿ ವಿವೇಕ ಶಾಲಿಯು (4.18) ಗೀತೆಯ ಈ ವಾಕ್ಯವು ಸಾಂಖ್ಯ ತತ್ವವು ಮಾಡುವ ಪುರುಷ ಮತ್ತು ಪ್ರಕೃತಿಯರ ನಡುವಿನ ಭೇದವನ್ನು ತೊಡೆದು

ಹಾಕಿ ಅವೆರಡನ್ನೂ ಬೆಸೆಯುತ್ತದೆ, ನಿಷ್ಕ್ರಿಯ, ಶಾಂತ, ನಿಶ್ಚಲ, ಅವಿಕಾರಿ, ಅನಾಸಕ್ತ ಆತ್ಮವನ್ನು, ಸದಾ ಚಟುವಟಿಕೆ, ಕ್ರಿಯೆಗಳಲ್ಲಿ ಮಗ್ನವಾಗಿರುವ ಪ್ರಕೃತಿ ಎರಡನ್ನೂ ಹೆಣೆದು ಒಂದಾಗಿಸುತ್ತದೆ. ನಿಷ್ಕ್ರಿಯತೆಯಲ್ಲಿ, ಜಡದಲ್ಲಿ, ಅಚೇತನದಲ್ಲಿ ಕೂಡ ಪ್ರಕೃತಿಯು ಕ್ರಿಯಾಶೀಲವಾಗಿದೆ, ಗಲಭೆ, ಗೊಂದಲ, ಹೋರಾಟಗಳಲ್ಲಿ ಕ್ರಿಯಾಶೀಲವಾಗಿರುವಷ್ಟೇ, ಅದೇ ಸಮ ಪ್ರಮಾಣದಲ್ಲಿಯೇ ಇಲ್ಲ ಕ್ರಿಯಾಶೀಲವಾಗಿದೆ ಎಂಬುದನ್ನು ಗೀತೆ ಸಿದ್ಧಮಾಡಿ ತೋರಿಸುತ್ತದೆ. ಅವೆರಡೂ ಬೇರೆ ಬೇರೆ ಅಲ್ಲ, ಒಂದೇ ಎಂಬುದನ್ನು ಖಚಿತಪಡಿಸುತ್ತದೆ. ಉಚ್ಚತಮ ವಿವೇಕ, ವಿಚಾರ, ತರ್ಕ, ಯುಕ್ತಿಯನ್ನು ಹೊಂದಿರುವ ಬುದ್ಧಿಯು ನಮಗೀ ಸತ್ಯವನ್ನು ಮನದಟ್ಟು ಮಾಡಿಕೊಡುತ್ತದೆ. ಯಾರಲ್ಲಿ ಇಂಥ ಬುದ್ಧಿ ಇದೆಯೋ ಅವನೇ "ಬುದ್ಧಿಮಾನ್ ಸ ಮನುಷ್ಯೇಷು" ಎಂದು ಗೀತೆ ಸಾರುತ್ತದೆ. ಕರ್ಮಗಳನ್ನು ಯಾರು ಕೇವಲ ಮೇಲ್ ನೋಟದಿಂದ ಅಳೆಯುತ್ತಾರೋ, ಬಾಹ್ಯ ಅರ್ಥವನ್ನು ಮಾತ್ರ ಗ್ರಹಿಸುತ್ತಾರೋ ಅವರು ಸತ್ಯ ತಿಳಿಯುವುದಿಲ್ಲ, ಅಂಥವರು ಗೊಂದಲಕ್ಕೀಡಾಗುತ್ತಾರೆ ಎಂದು ಗೀತೆ ಸ್ಪಷ್ಟವಾಗಿ ಹೇಳುತ್ತದೆ.

ನಿಜವಾಗಿ ಮುಕ್ತನಾದ ವ್ಯಕ್ತಿಯು ಕರ್ಮಗಳಿಗೆ ಹೆದರುವುದಿಲ್ಲ, ಕರ್ಮ ಮಾಡಲು ಅಂಜುವುದಿಲ್ಲ, ಅವನು ಅತಿ ವಿಶಾಲವಾದ ಅರ್ಥದಲ್ಲಿ ಕರ್ಮ ಮಾಡುವವನಾಗಿರುತ್ತಾನೆ. ಅವನು ಇತರರಂತೆ ಪ್ರಕೃತಿಗೆ ಅಧೀನನಾಗಿ ಕರ್ಮ ಮಾಡುವುದಿಲ್ಲ. ತನ್ನ ಆತ್ಮದಲ್ಲಿ ಸ್ಥಿತನಾಗಿ, ಶಾಂತ ಪ್ರಸನ್ನ ಯೋಗ ಮನಸ್ಕನಾಗಿ, ಸರ್ವ ಕರ್ಮಗಳ ನಡುವೆ ಸಮಚಿತ್ತದಿಂದ ಕೆಲಸ ಮಾಡುತ್ತಾನೆ. ಅವನ ಎಲ್ಲ ಕರ್ಮಗಳ ಈಶ್ವರ ಪರಮಾತ್ಮನೇ. ಅವನು ಈಶ್ವರನ ಕಾರ್ಯಗಳ ಮಾಧ್ಯಮ ಅಷ್ಟೇ. ಭಗವಂತನಿಗೆ ಸಂಪೂರ್ಣ ಶರಣಾಗಿ, ಅಧೀನನಾಗಿ, ಪೂರ್ಣ ಪ್ರಜ್ಞಾಯುಕ್ತನಾಗಿ ಕಾರ್ಯ ಮಾಡುತ್ತಾನೆ. ಅತಿ ಪ್ರಖರವಾದ, ತೀಕ್ಷ್ಣವಾದ ಈ ಜ್ಞಾನವಿರುವುದರಿಂದ, ಅದರ ಪಾವಿತ್ರ್ಯ ಹಾಗೂ ತೀಕ್ಷ್ಣತೆಯ ಮೂಲಕ ಕೆಲಸ ಮಾಡುವುದರಿಂದ, ಅವನ ಕರ್ಮಗಳೆಲ್ಲವೂ ಸುಟ್ಟು ಭಸ್ಮವಾಗುತ್ತವೆ. ಅವನ ಮನದ ಮೇಲಾಗಲಿ, ಬುದ್ಧಿಯ ಮೇಲಾಗಲಿ ಯಾವ ಕಳಂಕವೂ, ಕಲೆಯೂ (ಗುರುತು) ಉಳಿಯುವುದಿಲ್ಲ. ಅವುಗಳ ಶಾಂತಿಗೆ, ಪ್ರಸನ್ನತೆಗೆ, ಯಾವ ಧಕ್ಕೆಯೂ ಒದಗದೇ ಅವು ಶ್ವೇತವೂ, ನಿರ್ಮಲವೂ, ಪರಿಶುದ್ಧವಾಗಿ ಉಳಿಯುತ್ತವೆ. ಎಲ್ಲವನ್ನೂ ಯಾವುದೇ ರೀತಿಯ ವೈಯಕ್ತಿಕ ಅಹಂ ಇಲ್ಲದೇ, ಕರ್ತೃತ್ವ ಭಾವವಿಲ್ಲದೇ, ಮುಕ್ತ ಜ್ಞಾನದ ಬೆಳಕಲ್ಲಿ ಮಾಡುವುದೇ ದಿವ್ಯ ಕರ್ತರನ ಮೊದಲ ಚಿಹ್ನೆಯಾಗಿದೆ.

ಎರಡನೇಯ ಚಿಹ್ನೆ ಎಂದರೆ ವೈಯಕ್ತಿಕ ಆಶೆಯಿಂದ ಮುಕ್ತನಾಗಿರುವುದು, ಎಲ್ಲಿ ವೈಯಕ್ತಿಕ ಕರ್ತೃತ್ವ ಭಾವದ ಅಹಂ ಇರುವುದಿಲ್ಲವೋ, ಅಂದರೆ "ನಾನು

ಮಾಡುವವನು” ಎಂಬ ಭಾವವೇ ನಷ್ಟವಾಗಿರುವುದೋ, ಅಲ್ಲಿ ಆಶೆ ಅನ್ನುವುದೇ ಇರುವುದಿಲ್ಲ. ಅದು ನಷ್ಟವಾಗಿ ಹೋಗಿರುತ್ತದೆ. ಬಾಹ್ಯದಲ್ಲಿ ಅವನು ಉಳಿದೆಲ್ಲರಂತೆ ಎಲ್ಲ ಕೆಲಸಗಳನ್ನು ಮಾಡುತ್ತಿರುವುದು ಕಂಡುಬಂದರೂ ಸಹ, ಅಷ್ಟೇ ವಿಶಾಲ ಅರ್ಥದಲ್ಲಿ ಎಲ್ಲರಿಗಿಂತ ಹೆಚ್ಚಿನ ಇಚ್ಛಾ ಬಲದಿಂದ, ಕ್ರಿಯಾ ಶಕ್ತಿಯಿಂದ ಕೆಲಸ ಮಾಡುತ್ತಿರುವಂತೆ ತೋರಿದರೂ ಸಹ ಅವನಲ್ಲಿ ಬಯಕೆ ಎಂಬ ಅಂಶ ಇರುವುದಿಲ್ಲ. ಅವನ ಮೂಲಕ, ಅವನ ಪ್ರಕ್ರಿಯೆ ಪ್ರಕೃತಿಯಲ್ಲಿ ದೈವೀ ಸಂಕಲ್ಪ, ದೈವೀ ಶಕ್ತಿಯೇ ಕೆಲಸ ಮಾಡುತ್ತಿರುವುದರಿಂದ ಅವನು ಕೆಲಸ ಮಾಡುವ ರೀತಿ ಹಾಗೂ ಶಕ್ತಿ ಪ್ರಬಲವಾಗಿರುವಂತೆಯೇ ತೋರುವುದು ಸಹಜವಾಗಿದೆ. ಆದರೆ ಅವನು ಕೆಲಸ ಮಾಡುವ ಉದ್ದೇಶದಲ್ಲಿ, ಪ್ರೇರಣೆಯಲ್ಲಿ, ಕ್ರಿಯೆಯಲ್ಲಿ ಯಾವುದೇ ರೀತಿಯ ಕೆಟ್ಟ ಸ್ವಾರ್ಥದ ಲೇಶವೂ ಇರುವುದಿಲ್ಲ. ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ. ಅವನು ಕರ್ಮ ಫಲಾಪೇಕ್ಷೆಯನ್ನು ಸರ್ವಥಾ ತ್ಯಾಗ ಮಾಡಿರುತ್ತಾನೆ. ಕರ್ಮ ಫಲದ ಮೋಹ ಅವನಲ್ಲಿ ಲೇಶ ಮಾತ್ರವೂ ಇರುವುದಿಲ್ಲ. ಅವನು ನಿಃಸಂಕಲ್ಪನಾಗಿರುತ್ತ, ಕೇವಲ ಕರ್ಮಾಧ್ಯಕ್ಷನ, ಈಶ್ವರನ ಉಪಕರಣವಾಗಿ ಕೆಲಸ ಮಾಡುತ್ತಾನೆ. ಅಂಥವನಲ್ಲಿ ಸ್ವಂತದ ಇಚ್ಛೆ ಅನ್ನುವುದು ಇರಲು ಸಾಧ್ಯವೇ ಇಲ್ಲ. ಕಾರ್ಯವನ್ನು ಚೆನ್ನಾಗಿ ಮಾಡಬೇಕು, ಯಶಸ್ವಿಯಾಗಿ ಮಾಡಬೇಕು, ಎಂಬ ಇಚ್ಛೆ ಕೂಡ ಇರುವುದಿಲ್ಲ; ಏಕೆಂದರೆ ಕರ್ಮ ಫಲವೂ ಭಗವಂತನಿಗೇ ಸೇರಿದ್ದು, ಅವನದೇ ಇಚ್ಛೆ, ಅವನದೇ ತೀರ್ಮಾನ, ಆ ಭಗವಂತನೇ ಕರ್ತೃ, ಕಾರ್ಯದ ಎಲ್ಲ ಮಗ್ಗಲುಗಳು, ಪರಿಣಾಮ, ವೈಭವ ಎಲ್ಲವೂ ಅವನ ಶಕ್ತಿಯೇ, ಯಾವುದೂ ತನ್ನ ವೈಯಕ್ತಿಕ ವ್ಯಕ್ತಿತ್ವಕ್ಕೆ ಸೇರಿದ್ದಲ್ಲ, ಸರ್ವಸ್ವವೂ ಅವನದೇ ಎಂಬ ದೃಢಭಾವ ಇರುತ್ತದೆ. ಮುಕ್ತನಾದ ವ್ಯಕ್ತಿಯ ಮನಸ್ಸಾಗಲಿ, ಜೀವವಾಗಲಿ, ಏನೂ ಮಾಡುವುದಿಲ್ಲ, ನ ಕಿಂಚಿತ್ ಕರೋಲೆ. ಮೇಲ್ನೋಟಕ್ಕೆ ಅವನು ಕರ್ಮರತನಾಗಿದ್ದಾನೆ ಎಂಬಂತೆ ತೋರಿದರೂ ಸಹ, ಅದು ದೈವೀ ಪ್ರಕೃತಿಯೇ, ಅಂತರಂಗದಲ್ಲಿ ವಾಸಿಸುವ ಈಶ್ವರನ ಪ್ರಜ್ಞಾ ದೇವತೆಯೇ, ಅದೇ ಎಲ್ಲವನ್ನೂ ಮಾಡುತ್ತಿರುತ್ತದೆ.

ಹಾಗೆಂದು ಕರ್ಮವನ್ನು ಹೇಗಾದರೂ ಮಾಡಿ ಮುಗಿಸುವುದಲ್ಲ, ಪರಿಪೂರ್ಣವಾಗಿ ಮಾಡದೇ ಇದ್ದರೂ ನಡೆದೀತು, ಸರಿಯಾದ ವಿಧಾನದಲ್ಲಿಯೇ ಮಾಡಿ ಮುಗಿಸಬೇಕೆಂದೇನೂ ಇಲ್ಲ ಎಂದು ಅರ್ಥ ಮಾಡುವ ಹಾಗಿಲ್ಲ, ಆ ಭಾವ ಸರ್ವಥಾ ಇರುವುದಿಲ್ಲ, ಬದಲಾಗಿ ಯೋಗದಲ್ಲಿ ಸಮಚಿತ್ತವಾಗಿ ಕೆಲಸ ಮಾಡುವುದು, ಪರಿಪೂರ್ಣವಾಗಿ ಮಾಡುವುದು ಹೆಚ್ಚು ಸುಲಭವಾಗಿದೆ. ಹೆದರಿಕೆಯಿಂದಲೋ, ನಂಬಿಕೆ ಅಥವಾ ವಿಶ್ವಾಸದಿಂದಲೋ, ಅರೆ ಬರೆ ತರ್ಕದ ಬಲದಿಂದಲೋ,

ಮಾನವನ ಗಡಿಬಿಡಿ ಸ್ವಭಾವದ ಇಚ್ಛೆಯಿಂದಲೋ ಕೆಲಸ ಮಾಡುವುದಕ್ಕಿಂತ ಈ ರೀತಿ ಯುಕ್ತನಾಗಿ ಕರ್ಮ ಮಾಡುವುದು ಹೆಚ್ಚು ಸುಲಭ ಮತ್ತು ಫಲಪ್ರದ. "ಯೋಗಃ ಕರ್ಮಸು ಕೌಶಲಂ" ಎಂದೇ ಗೀತೆ ಹೇಳುತ್ತದೆ. ಆದರೆ ಎಲ್ಲವೂ ಹಿರಿದಾದ ವೈಶ್ವಿಕ ಸಂಕಲ್ಪದಿಂದ ನಡೆಯಬೇಕು, ವೈಯಕ್ತಿಕ ಆಸಕ್ತಿ ಇರಬಾರದು, ವ್ಯಕ್ತಿಯು ಕೇವಲ ನಿಃಸ್ವಾರ್ಥ, ನಿರ್ಮೋಹಿ ಉಪಕರಣವಾಗಿದ್ದರೆ ಮಾತ್ರ ಇದು ಸಾಧ್ಯ. ಅಂಥ ಕರ್ಮ ಯೋಗಿಗೆ ಚೆನ್ನಾಗಿ ಗೊತ್ತು – ತನ್ನಲ್ಲಿ ಕೆಲಸ ಮಾಡುವ ಶಕ್ತಿಗೆ ಕರ್ಮ ಫಲದ ಬಗ್ಗೆ ಕಾಳಜಿ ಇದೆ, ಚೆನ್ನಾಗಿ ಗೊತ್ತಿದೆ, ಕೆಲಸದ ನೇಪಥ್ಯದಲ್ಲಿರುವ ವೈಚಾರಿಕ ಬಲಕ್ಕೆ ಕರ್ಮ ಹಾಗೂ ಕರ್ಮ ಫಲದ ಅರಿವಿದೆ, ತನ್ನಲ್ಲಿರುವ ಸಂಕಲ್ಪ ತನ್ನ ಸ್ವಂತದಲ್ಲ, ತನ್ನ ವೈಯಕ್ತಿಕ ಸ್ವಾರ್ಥವಲ್ಲ ಎಂಬುದು ಚೆನ್ನಾಗಿ ಗೊತ್ತು. ತನ್ನಲ್ಲಿರುವುದು ಕೇವಲ ನಿರ್ವೈಯಕ್ತಿಕ, ನಿಃಸ್ವಾರ್ಥ ಪ್ರಜ್ಞಾಶಕ್ತಿ ಮಾತ್ರ, ತನ್ನದಲ್ಲದ, ಆದರೆ ಈಶ್ವರನ ವೈಶ್ವಿಕ ಕಾರ್ಯಕ್ಕಾಗಿ ನಿಯೋಜಿತವಾದದ್ದು ಎಂಬುದು ಚೆನ್ನಾಗಿ ಗೊತ್ತು. ತನ್ನ ಎಲ್ಲ ಚಲನೆ, ಕ್ರಿಯೆ, ಪ್ರಯೋಗ, ಕಾರ್ಯ ಎಲ್ಲದರಲ್ಲೂ ಸೂಕ್ಷ್ಮವಾಗಿ ಆ ದೈವೀ ಪ್ರಜ್ಞೆಯೇ ಕೆಲಸ ಮಾಡುತ್ತದೆ ಎಂಬುದು ಅವನಿಗೆ ಗೊತ್ತಿರುತ್ತದೆ. ಕರ್ಮದ ಪರಿಣಾಮ ಯಶಸ್ಸೇ ಆಗಬಹುದು, ಅಥವಾ ಸಾಮಾನ್ಯ ಮಾನವನ ಮನಸ್ಸು ತಿಳಿಯುವಂತೆ ಅಪಯಶಸ್ಸು ಆಗಬಹುದು, ಕೆಲಸದ ಪರಿಣಾಮ ಕೆಟ್ಟಂತೆ, ಸೋತಂತೆ, ವ್ಯರ್ಥವಾದಂತೆ ಅನಿಸಲೂ ಬಹುದು. ಆದರೆ ದಿವ್ಯ ಕರ್ತೃವಿಗೆ ಮಾತ್ರ ಪ್ರತಿ ಕ್ಷಣವೂ ಪ್ರತಿ ಕರ್ಮವೂ ಯಶಪ್ರದವೇ, ಜಯಪ್ರದವೇ; ತಾನು ಮಾಡದೇ ಹೋದರೂ ದೈವೀ ಸಂಕಲ್ಪ, ದೈವೀ ಕಾರ್ಯ ನಡೆದೇ ತೀರುವುದು, ಜಯಶಾಲಿಯಾಗಿಯೇ ತೀರುವುದು ಎಂಬುದು ಅವನಿಗೆ ಚೆನ್ನಾಗಿ ಗೊತ್ತು, ತಾನು ಗೆಲುವಿಗಾಗಿ, ವಿಜಯಕ್ಕಾಗಿ ಕೆಲಸ ಮಾಡುವುದಿಲ್ಲ, ಮಾಡಬೇಕಾಗಿಲ್ಲ, ತಾನು ಮಾಡುತ್ತಿರುವುದು ದೈವೀ ಸಂಕಲ್ಪವನ್ನು ನೆರವೇರಿಸಲು, ಅದು ಎಲ್ಲೋ ಮಧ್ಯದಲ್ಲಿ ಹಿನ್ನಡೆಯಾದಂತೆ, ಅಪಜಯ ಹೊಂದಿದಂತೆ ತೋರಬಹುದು, ಅಂಥ ಅಪಜಯವೇ ನಿಜವಾದ ವಿಜಯಕ್ಕಿಂತ ಹೆಚ್ಚು ಪ್ರಬಲವೂ ಪ್ರಯೋಜನಕಾರಿಯೂ ಆಗಿರಬಹುದು. ಅರ್ಜುನನಿಗೆ ಯುದ್ಧ ಮಾಡಲು ಕೃಷ್ಣ ಆದೇಶಿಸುತ್ತಾನೆ, ಅವನಿಗೆ ವಿಜಯದ ಭರವಸೆ ಇದೆ ತತ್ರ ಶ್ರೀವಿನಾಜಯೋ ಭೂತಿಃ ಎಂಬುದು ನಿಶ್ಚಿತವಿದೆ. ಆದರೆ, ಮುಂದಿನ ಯುದ್ಧದಲ್ಲಿ ಹಿನ್ನಡೆಯಾಗಬಹುದೇ, ಸೋಲು ಎದುರಾಗಬಹುದು, ಆದರೂ ಅವನು ಯುದ್ಧ ಮಾಡಲೇಬೇಕು, ಏಕೆಂದರೆ ಆ ಕೆಲಸವನ್ನು ಭಗವಂತ ಅವನಿಗೆ ವಹಿಸಿದ್ದಾನೆ. ಕೊನೆಯಲ್ಲಿ ಭಗವಂತನ ಸಂಕಲ್ಪ ನೆರವೇರುವುದಂತೂ ನಿಶ್ಚಿತ, ಅದರಲ್ಲಿ ಯಾವ ಬದಲಾವಣೆಯೂ ಇಲ್ಲ. ತನಗೆ ಸದ್ಯಕ್ಕೆ ನೀಡಿರುವ ಕೆಲಸ

ಆ ಕಾರ್ಯದಲ್ಲಿ ತನ್ನ ಪಾಲು ಸಲ್ಲಿಸುವುದು. ಇಷ್ಟೇ ಅವನ ಕರ್ತವ್ಯ. ತಾನು ಮಾಡಬೇಕಾದುದು ಕರ್ಮ ಮಾತ್ರ ಎಂಬುದು ಅವನಿಗೆ ಗೊತ್ತು, ಉಳಿದಂತೆ ಎಲ್ಲವೂ ಭಗವಂತನಿಗೆ ಬಿಟ್ಟದ್ದು.

ಜೀವನ್ಮುಕ್ತನಿಗೆ ಯಾವುದೇ ರೀತಿಯ ವೈಯಕ್ತಿಕ ಅಪೇಕ್ಷೆಗಳಿರುವುದಿಲ್ಲ. ಯಾವುದನ್ನೂ ಅವನು ತನಗಾಗಿ ಬೇಕೆಂದು ಬಯಸುವುದಿಲ್ಲ. ಪರಮೇಶ್ವರನ ಇಚ್ಛೆಯಿಂದ ತನಗೇನು ಲಭಿಸುವುದೋ ಅದನ್ನವನು ಸಂತೋಷದಿಂದ ಸ್ವೀಕರಿಸುತ್ತಾನೆ. ಅವನಲ್ಲಿ ತೀವ್ರ ಬಯಕೆ ಇಲ್ಲ, ರಾಗ–ದ್ವೇಷ, ಮತ್ಸರ ಒಂದೂ ಇಲ್ಲ. ತನ್ನ ಪಾಲಿಗೆ ಏನು ಬರುವುದೋ ಅದನ್ನು ಯಾವುದೇ ರೀತಿಯ ಮೋಹವೂ ಇಲ್ಲದೇ, ಅನಾಕರ್ಷಣೆಯೂ ಇಲ್ಲದೇ ಸಮಚಿತ್ತದಿಂದ ಸ್ವೀಕರಿಸುತ್ತಾನೆ. ತನ್ನಿಂದ ಯಾವ ವಸ್ತು ದೂರಾಗುವುದೋ ಅದನ್ನು ಮುಕ್ತವಾಗಿ ಬಿಟ್ಟುಬಿಡುತ್ತಾನೆ. ಯಾವ ದುಃಖ, ನೋವು ಹಾನಿಯಾಯಿತೆಂಬ ಭಾವ ಕೂಡ ಇಲ್ಲದೇ, ನಿರ್ಭಾವುಕನಾಗಿರುತ್ತಾನೆ. ಅವನ ಹೃದಯ, ಅವನ ಆತ್ಮ ಅವನ ಸಂಪೂರ್ಣ ನಿಯಂತ್ರಣದಲ್ಲಿ ಇರುತ್ತವೆ. ಅಲ್ಲಿ ಪ್ರತಿಕ್ರಿಯೆ ಇಲ್ಲ, ಉದ್ವೇಗ, ಆವೇಶ ಒಂದೂ ಇಲ್ಲ. ಪ್ರಪಂಚದ ಯಾವ ವಿಷಯಕ್ಕೂ ಅವನು ಉತ್ಕಟವಾಗಿ ಪ್ರತಿಕ್ರಿಯಿಸುವುದಿಲ್ಲ ಅವನ ಕಾರ್ಯವೆಂದರೆ ನಿಜವಾಗಿ ಕೇವಲ ಭೌತಿಕ, ಶಾರೀರಂ ಕೇವಲಂ ಕರ್ಮ. ಇದಕ್ಕತಿರಿಕ್ತವಾಗಿ ಬರುವುದೆಲ್ಲವೂ ಮೇಲಿನಿಂದಲೇ, ಮಾನವೀಯ ಸ್ತರದಲ್ಲಿ ಯಾವುದೋ ಉತ್ಪನ್ನವಾಗುವುದೇ ಇಲ್ಲ. ಅದೆಲ್ಲ ಕೇವಲ ಪುರುಷೋತ್ತಮನ ಸಂಕಲ್ಪ, ಜ್ಞಾನ ಹಾಗೂ ಆನಂದದ ಪ್ರತಿಫಲನ ಮಾತ್ರವೇ. ಆದ್ದರಿಂದ ಕರ್ಮ ಮಾಡುವಾಗ ಅವನ ಮೇಲೆ ಯಾವುದೇ ಒತ್ತಡವಿಲ್ಲ, ಕಾರ್ಯದ ಗುರಿ, ಉದ್ದೇಶ, ಸಾಫಲ್ಯದ ಬಗ್ಗೆಯೂ ಅವನಿಗೆ ಒತ್ತಡವಿಲ್ಲ, ಅವನ ಮನಸ್ಸು, ಹೃದಯ ಯಾವುದರ ಮೇಲೂ ಒತ್ತಡವಿಲ್ಲ, ಯಾವುದರ ಪ್ರತಿಕ್ರಿಯೆಯೂ ಇಲ್ಲ. ಅಂತೆಯೇ ಅವನಿಗೆ ಆವೇಶ, ಪಾಪ ಇವಾವೂ ಅಂಟುವುದೇ ಇಲ್ಲ. ಪಾಪ ಅನ್ನುವುದು ಬಾಹ್ಯ ಕರ್ಮದ ಮೇಲೆ ಅವಲಂಬಿತವಾಗಿಲ್ಲ, ಬದಲಾಗಿ ಅದಕ್ಕೆ ಸಹಾಯಕವಾಗಿರುವ ವೈಯಕ್ತಿಕ ಇಚ್ಛೆ, ಮನಸ್ಸು, ಹೃದಯ ಇವುಗಳ ಮೇಲೆ ಅವಲಂಬಿತವಾಗಿದ್ದು, ತನ್ನಿಮಿತ್ತ ಉತ್ಪನ್ನವಾಗುತ್ತವೆ. ನಿರ್ವೈಯಕ್ತಿಕವಾದುದು, ಸ್ವಾರ್ಥರಹಿತವಾದುದು, ಆಧ್ಯಾತ್ಮಿಕವಾದುದು ಯಾವಾಗಲೂ ಪರಿಶುದ್ಧವಾಗಿರುತ್ತದೆ, ಅಪಾಪವಿದ್ಧಮ್ ಮತ್ತು ಅದು ಅಂಥ ಎಲ್ಲ ಕಾರ್ಯಗಳಿಗೂ ಅದೇ ಪರಿಶುದ್ಧತೆಯನ್ನು ಪ್ರಧಾನಿಸುತ್ತದೆ. ಇಂಥ ಆಧ್ಯಾತ್ಮಿಕ ನಿಷ್ಪಕ್ಷಪಾತ ಅಥವಾ ನಿರ್ವೈಯಕ್ತಿಕತೆ ಇದು ದೈವೀ ಕಾರ್ಯಕರ್ತೃವಿನ ಮೂರನೇಯ ಲಕ್ಷಣವಾಗದೆ.

(ಸಶೇಷ)

# ತ್ರಾಟಕ ಸೂರ್ಯ

## 4

**– ಪುಟ್ಟು ಕುಲಕರ್ಣಿ**

ಈ ರೀತಿಯ ಗಡಿಪಾರಿನ ಜೊತೆಗೇ ಮತ್ತೂ ಮತ್ತೂ ಬಿಗಿಯಾದ ಕಾನೂನನ್ನು ರೂಪಿಸಿ ನಮ್ಮನ್ನು ಅದುಮಲಾಗುತ್ತದೆ, ನಮ್ಮ ಈ ದುಃಖ ಸಾಗರದಲ್ಲಿಯೇ ಮುಳುಗಿರುವ ದೇಶದ ಮತ್ತೂ ಭೀಕರವಾದ ಅನುಭವಗಳಿಂದ ತತ್ತರಿಸುವಂತೆ ಮಾಡುತ್ತಾರೆ. ಆದರೆ ಈಗಾಗಲೇ ಜಾಗ್ರತಗೊಂಡಿರುವ ನಮ್ಮ ಆತ್ಮದ ಗತಿಯನ್ನು ಅವರೆಂದಿಗೂ ತಡೆಯಲು ಸಾಧ್ಯವೇ ಇಲ್ಲ. ಒಂದು ಬಾರಿ ದೇವ ವಾಣಿ ಮೊಳಗಿತು ಎಂದರೆ ಅಲ್ಲಿ ಅದು ಶಾಶ್ವತವಾಗಿಯೇ ನೆಲೆಸುತ್ತಿದೆ ಎಂದೇ ಅಲ್ಲವೇ ನಾವೆಲ್ಲ ವಿಶ್ವಾಸವಿಟ್ಟುಕೊಂಡು ಶ್ರೀಮಾತೆಯನ್ನು ಆರಾಧಿಸುತ್ತಿರುವದು. ಇದನ್ನೂ ಕೇವಲ ದೈಹಿಕ ಆಕ್ರಮಣಗಳಿಂದ ತಡೆಯುವ ಕ್ರಿಯೆಗಳೂ ನಡೆಯುತ್ತವೆ. ಆದರೆ ಯಾವ ದೇಶದಲ್ಲಿಯೂ ಇಂತಹ ಜಾಗ್ರತಿಯನ್ನು ಅದುಮಲಾಗಿಲ್ಲ.

ಈಗ ಇಲ್ಲಿ ಅದೇ ರೀತಿಯ ಜಂಝಾವಾತ ಬೀಸಿದೆ. ಬಿರುಗಾಳಿಯನ್ನೇ ಸವಾರಿ ಮಾಡಿಕೊಂಡು ವರ್ಷಾಧಾರೆ ಉಕ್ಕುಕ್ಕಿ ಧಾರೆಗೊಳ್ಳುತ್ತಿದ್ದಾಳೆ. ನಾನು ಅದನ್ನು ಸ್ಪಷ್ಟವಾಗಿಯೇ ಕಾಣುತ್ತಿದ್ದೇನೆ. ಅದು ನನ್ನ ಬಳಿಯೇ ಬಂದಿದೆ. ನನ್ನನ್ನು ನಾನು ಅದಕ್ಕೆ ಶರಣಾಗಿಸಿಕೊಳ್ಳುವದೊಂದೇ ಮಾರ್ಗ. ಪರಮಾತ್ಮನು ಯಾವಾಗಲೂ ಜಂಝಾವಾತದ ರೆಕ್ಕೆಗಳನ್ನಿಟ್ಟುಕೊಂಡೇ ಪ್ರಯಾಣ ಮಾಡುತ್ತಾನೆ ಎಂದು ಹೃದಯಕ್ಕೆ ಸಮಾಧಾನ ಹೇಳಿದೆ. ಆ ಪರಮಾತ್ಮನ ಈ ರೀತಿಯ ಆಗಮನದ ರಭಸಕ್ಕೆ ನಮ್ಮ ತಲೆಯ ಮೇಲಿರುವದೆಲ್ಲವೂ ಧೂಳೆದ್ದು ಹೋಗುತ್ತಿದೆ. ಅವನ ಆ ಸರ್ವಶಕ್ತ ಕರಗಳಿಂದ ಎಲ್ಲವನ್ನೂ ಬಂಧಿಸಿ, ಕುಲುಕಾಡಿಸಿ, ನಮ್ಮ ತಲೆಗಳಲ್ಲಿಯೂ ಅದೇ ಜಂಝಾವಾತ ತುಂಬುವಂತೆ ಮಾಡುತ್ತಾನೆ. ಆದರೆ ಪರದೇಶದಿಂದ ಬಂದ ಈ ಬಿರುಗಾಳಿ ನಮ್ಮ ರಾಷ್ಟ್ರ ಪ್ರಜ್ಞೆಯನ್ನೇ ಹುಡಿಗಟ್ಟಿಸಿದೆ. ಅದಕ್ಕಾಗಿಯೇ ಈಗ ನಾವು ರಕ್ಷಣೆಯನ್ನು ಬಯಸುವದು ಶ್ರೀಮಾತೆಯಲ್ಲಿ ಮಾತ್ರ. ತಾಯಿ ಮಾತ್ರ ನಮ್ಮನ್ನು ಇಂತಹ ತಲ್ಲಣಗಳಿಂದ ಮುಕ್ತಿಗೊಳಿಸಬಹುದು. ಅದಕ್ಕಾಗಿ ಶ್ರೀಮಾತೆಗೆ ಒಂದು ದಿವ್ಯವಾದ ಮಂದಿರವನ್ನು ಕಟ್ಟಬೇಕಿದೆ, ಅದನ್ನೇ ನಮ್ಮ ಹೃದಯದಲ್ಲಿಯೂ ಸ್ಥಾಪಿಸಿಕೊಳ್ಳಬೇಕಿದೆ.

ಅವಳು ಸಂತೋಷದಿಂದ, ಉಲ್ಲಾಸದುಂಬಿ ಲೀಲೆಗಳನ್ನು ಕೈಕೊಳ್ಳಲು ಅನುಕೂಲ ಒದಗಿಸುವ ಪ್ರಶಾಂತ ವಾತಾವರಣವನ್ನು ಅಲ್ಲಿ ರೂಪಿಸಬೇಕಿದೆ. ಆಮೇಲೆ ಅಲ್ಲಿಗೆ ಪರಮಾತ್ಮನೂ ಆಗಮಿಸುತ್ತಾನೆ. ಇಷ್ಟೆಲ್ಲಾ ಇದ್ದಾಗ ಆ ಪರಮಾತ್ಮ ಏಕೆ ನಮ್ಮನ್ನು ಈ ರೀತಿಯಲ್ಲಿ ತಲ್ಲಣಕ್ಕೆ ಸಿಲುಕಿಸುವ ಹಾಗೆ ಮಾಡಿದ್ದಾನೆ ಎಂದು ಪ್ರಶ್ನೆ ಉದ್ಭವಿಸದರೂ, ಪರಮಾತ್ಮನು ಕೊಡುವ ಒಂದೊಂದು ಒಳಿಪೆಟ್ಟೊ ಸಹಿತ ನಾವು ಮೂರ್ತಿಯಾಗಬೇಕೆಂದೇ ಇರುತ್ತದೆ. ಅದು ಪೆಟ್ಟಲ್ಲ. ಪಾಠ. ತಪ್ಪು ಪಥದಲ್ಲಿ, ಅಜ್ಞಾನದಲ್ಲಿ ಕಳೆದು ಹೋಗದಿರಲೆಂದು ಸದಾಶಯದಲ್ಲಿ ಇತ್ತ ಪೆಟ್ಟು. ದೇವನು ಏನನ್ನು ಅಪೇಕ್ಷಿಸುತ್ತಿದ್ದಾನೆಯೋ, ಅದೆಲ್ಲವನ್ನೂ ನಮ್ಮ ಮೂಲಕವೇ ಅಭಿವ್ಯಕ್ತ–ಗೊಳಿಸಿಕೊಳ್ಳುತ್ತಾನೆ, ಹೀಗಾಗಿ ಅವನಿಗೆ ಅವನ ಇಚ್ಛೆಯಂತೆಯೇ ಘಟಿಸಬೇಕೆನ್ನುವ ಅಭೀಪ್ಸೆಯನ್ನೂ ಹೊಂದಿದ್ದಾನೆ. ಅಲ್ಲಲ್ಲಿ ಉಳಿಯಬಹುದಾದ ಅಸಂಗತಗಳನ್ನು, ಈ ರೀತಿಯಲ್ಲಿ ತಲ್ಲಣಮಯದ ಘಟನೆಗಳ ಮೂಲಕವೇ ಕೊಟ್ಟು, ನೇರಗೊಳಿಸಿಕೊಳ್ಳುತ್ತಾನೆ. ಶಾಂತತೆಯ ನಿತಾಂತತೆ ಬೇಕು ಎಂದರೆ ದೇವ ಭಾವದ ಉಳಿಪೆಟ್ಟು ಬೇಕೇ ಬೇಕು. ನಾವೆಲ್ಲ ಅವನ ಕೈಯಲ್ಲಿ ಕಬ್ಬಿಣವಿದ್ದಂತೆ. ಅವನು ಬಯಸುವ ಆಕಾರಕ್ಕೆ ಬರಲೂ, ನಮ್ಮನ್ನು ಬೆಂಕಿಯಲ್ಲಿ ಬೇಯಿಸಲೇಬೇಕು! ಆಗ ಮಾತ್ರ ಅವನು ಬಯಸಿರುವ ಅಚ್ಚಿನಲ್ಲಿ ನಾವು ಎರಕಗೊಳ್ಳಲು ಸಿದ್ಧರಾಗಿರುತ್ತೇವೆ. ಈ ರೀತಿಯಲ್ಲಿಯೇ ನಮ್ಮನ್ನು ಪುನರ್–ಸೃಷ್ಟಿ ಮಾಡುತ್ತಿದ್ದಾನೆಯೇ ವಿನಾ ನಮ್ಮನ್ನು ಕರಗಿ ನಶಿಸಿ ಹೋಗಲು ಬಿಡುವದಿಲ್ಲ.

ಕೃಷ್ಣ ಕುಮಾರ ದತ್ತನನ್ನು ನಮ್ಮಿಂದ ದೂರ ಮಾಡಿದ್ದೂ ಅವನು ಈಗಲೂ ಯಾತನಾಮಯದ ಸ್ಥಿತಿಯಲ್ಲಿರುವದೂ ಇದೇ ಆಗಿದೆ. ಇನ್ನು ಆಗ್ರಾ ಸೆರೆಮನೆಯಲ್ಲಿ ಯಾತನೆ ಪಡುತ್ತಿರುವ ಕೃಷ್ಣಕುಮಾರ ಮಿತ್ರನ ಯಾತನೆ ಏನು ಕಡಿಮೆ ಪ್ರಮಾಣದ್ದೇ? ಕೇವಲ ಇಲ್ಲಿ ಮಾತ್ರ ಅಲ್ಲ, ಅತ್ತ ಮಹಾರಾಷ್ಟ್ರದ ತಿಳಕರೂ ಮಂಡಾಲೆ ಸೆರೆಮನೆಯಲ್ಲಿ ಅನುಭವಿಸುತ್ತಿರುವದೂ ಇದೇ ಯಾತನೆ! ಇದೆಲ್ಲವೂ 'ತತ್'ನಿಂದಲೇ ಆಗುತ್ತಿದೆಯೇ? 'ಅವನು' ತನ್ನ ಪಥದಲ್ಲಿ ಸಾಗಬೇಕೆಂದೇ ಇವರನ್ನೆಲ್ಲಾ ಆಯ್ಕೆ ಮಾಡಿಕೊಂಡಿದ್ದಾನೆಯೇ? ಈ ಮೂಲಕ ನಾವು ಏನು ಮಾಡಬೇಕೆಂದು ಅವನು ಸಂಕೇತ ಕೊಡುತ್ತಿದ್ದಾನೆಯೇ? ಅಶ್ವಿನಿಕುಮಾರನನ್ನು ದೂರ ಮಾಡಿದರೂ, ಇಲ್ಲಿ ಚಳವಳಿ ಮಾತ್ರ ಸತ್ತಿಲ್ಲವಲ್ಲ. ಸ್ವದೇಶಿ ವಸ್ತುಗಳ ಸಲುವಾಗಿ ಚಳವಳಿಯೂ ಹಿಂದೆ ಬಿದ್ದಿಲ್ಲ ಅಲ್ಲವೇ? ಇದನ್ನೆಲ್ಲ ಅರ್ಥ ಮಾಡಿಕೊಳ್ಳುವ ಜಾಣತನವನ್ನು ನಮ್ಮನ್ನು ಆಳುತ್ತಿರುವವರು ಕಳೆದು–ಕೊಂಡಿದ್ದಾರೆ. ಅಂದರೆ ಹೋರಾಟದಲ್ಲಿ ಮುಂಚೂಣಿಯಲ್ಲಿರುವವರನ್ನು ಬಂಧಿಸಿದರೆ

ಸಾಕು, ಹೋರಾಟ ಮುಗಿದಂತೆಯೇ ಎನ್ನುವ ಭ್ರಮಾಲೋಕದಲ್ಲಿದ್ದಾರೆ. ಈ ಹೋರಾಟ ಮುಂದುವರೆಯುತ್ತದೆ, ಮುಂದುವರೆಯಲೇಬೇಕು. ಏಕೆಂದರೆ ಇಲ್ಲಿ ಅಶ್ವಿನಿ ಕುಮಾರ ದತ್ತನಾಗಲೀ ಅಥವಾ ತಿಳಕರಾಗಲೀ ನಾಯಕರಲ್ಲ. ಇಲ್ಲಿ ನಾಯಕನಾಗಿರುವದು ಪರಮಾತ್ಮ! ದೇಶಾದ್ಯಂತ ವ್ಯಾಪಿಸುತ್ತಿರುವ ಈ ಚಳವಳಿಯು ಈ ಜಂಝಾವಾತವು ಅಶ್ವಿನಿ ಕುಮಾರ ಅಥವಾ ತಿಳಕರಿಂದ ರೂಪುಗೊಂಡದ್ದಲ್ಲ, ಅದು ಜನಿತಗೊಂಡದ್ದು ಆ ಪರಮಾತ್ಮನಿಂದ, ಅದೂ ಅವನ ಆತ್ಮದ ಉದ್ದೇಶವನ್ನು ಈಡೇರಿಸಕೊಳ್ಳಲೇಬೇಕಾಗಿರುವದರಿಂದ ಜನಿತಗೊಂಡಿದೆ. ಅದಕ್ಕಾಗಿಯೇ ಈ ರೀತಿಯ ವಿಪ್ಲವಕಾರೀ ಘಟನೆಗಳು ಘಟಿಸುತ್ತಿವೆ. ದೇಶ ತಲ್ಲಣಕ್ಕೆ ಸಿಲುಕಿದೆ, ಆದರೂ ಆ ಪರಮಾತ್ಮನ ಶಕ್ತಿಯೇ ನಮ್ಮೆಲ್ಲರ ಅಂತರಂಗದಲ್ಲಿಯೂ ನೆಲೆಸಿದೆ. ಅವರು ಎಷ್ಟೇ ಪೀಡಕರಾಗಿರಲಿ, ನಾವು ಮಾತ್ರ ಸಹನಾಶೀಲತೆಯನ್ನು ಕಳೆದುಕೊಳ್ಳುವಂತಿಲ್ಲ. ಏಕೆಂದರೆ ನಾವೇನು ಸಾಮಾನ್ಯ ಜನಾಂಗದವರಲ್ಲ. ನಮ್ಮ ಸನಾತನವೇ ನಮ್ಮ ಪರ್ವತಗಳು ನದಿಗಳಾಗಿ ಒಂದು ಭವ್ಯವಾದ ಇತಿಹಾಸವನ್ನೇ ನಿರ್ಮಾಣ ಮಾಡಿ, ಮಹತಿಯ ಮತ್ತು ಬೃಹತ್ ಭಾವದ ಆಯಾಮಗಳಲ್ಲಿ ರೂಹು ಪಡೆದಿರುವ ಜನಾಂಗ ನಾವಾಗಿದ್ದೇವೆ. ನಮ್ಮನ್ನು ಯಾವುದೇ ಸಂಸ್ಕೃತಿಯ ಸಮುದಾಯವೂ ಅಲುಗಾಡಿಸಲೂ ಸಾಧ್ಯವಿಲ್ಲ. ಸತತ ತಪಸ್ಸಿನ ಸಾಮರ್ಥ್ಯದಿಂದ ಸಂಪನ್ನಗೊಂಡ ಆಧ್ಯಾತ್ಮಿಕ ಫಲಗಳನ್ನೇ ನಿತ್ಯವೂ ಪಡೆದುಕೊಳ್ಳುತ್ತಿರುವ, ಆ ಅನೂಹ್ಯವಾಗಿರುವ ನಾದವನ್ನೂ ಆಲಿಸಬಲ್ಲ ಸಾಮರ್ಥ್ಯ ಹೊಂದಿರುವ ವಿಶಾಲ ಮನೋಭಾವದ ಸಮುದಾಯ ನಾವಾಗಿದ್ದೇವೆ, ಇದನ್ನು ಸಾಧಿಸಿಕೊಳ್ಳುವ ಸಲುವಾಗಿ, ಮಾನವೀಯತೆಯನ್ನು ಉಳಿಸಿಕೊಳ್ಳುವದರ ಸಲುವಾಗಿ ಅವರೆಲ್ಲರೂ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದಾರೆ. ತಮ್ಮ ಪತಿಯ ಪರಲೋಕ ಪ್ರಯಾಣದಲ್ಲಿಯೂ, ನಗುನಗುತ್ತಲೇ ತಾವೂ ಆ ಅಂತಿಮ ಸಂಸ್ಕಾರದ ಚಿತಾಗ್ನಿಗೆ ಸಮರ್ಪಿಸಿಕೊಂಡಿದ್ದಾರೆ. ಅಂತಹ ಶ್ರೀಮಾತೆಯರ ಮಕ್ಕಳು ನಾವು. ಯಾತನೆಯನ್ನೂ ಮುಕ್ತವಾಗಿಯೇ ಸ್ವೀಕರಿಸುವ ಉದಾತ್ತತೆಯನ್ನು ಹೊಂದಿದವರು. ಇದೇ ನಮ್ಮಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಭರಣಗೊಳಿಸುತ್ತಿದೆ. ಇಲ್ಲಿ ಭೌತಿಕವಾದ ಯಾವ ಆಶೆ ಆಕಾಂಕ್ಷೆಗಳೂ ಇಲ್ಲ. ಸ್ವತಃ ಪರಮಾತ್ಮನೇ ತನ್ನನ್ನು ತಾನೇ ಅವತರಣಗೊಳಸಿ–ಕೊಳ್ಳಲೆಂದು ಆಯ್ಕೆ ಮಾಡಿರುವ ಜನಾಂಗಕ್ಕೆ ಸಂಬಂಧಿಸಿದವರು ನಾವು! ಇದಕ್ಕಿಂತ ಮಹತ್ವದ ಘಟನೆ ಬೇಕೆ ನಮಗೆ? ಅದಕ್ಕಾಗಿಯೇ ಅಲ್ಲವೇ ಪರಮಾತ್ಮನು ಮೇಲಿಂದ ಮೇಲೆ ತನ್ನನ್ನು ಇಲ್ಲಿ ಅವತರಿಸಿಕೊಂಡಿದ್ದು, ಈ ಮೂಲಕವೇ ನಮ್ಮ

ಹೃದಯದಲ್ಲಿಯೇ ನೆಲೆ ನಿಲ್ಲುವ ಉದ್ದೇಶದಿಂದಲೇ ಹಂತ ಹಂತದಲ್ಲಿಯೂ ಅವತರಣ ತಾಳುತ್ತಲೇ ಬಂದಿದ್ದಾನೆ. ಹೀಗಾಗಿ ಇದೋ ನಾವು ಮತ್ತೆ ಜಾಗ್ರತರಾಗುತ್ತೇವೆ, ನವೀನ ರಾಷ್ಟ್ರವೊಂದನ್ನು ನಿರ್ಮಿಸಿಯೇ ನಿರ್ಮಿಸುತ್ತೇವೆ. ಅಖಂಡ ರಾಷ್ಟ್ರವಾಗಿಯೇ ಮೂರ್ತಗೊಳ್ಳುತ್ತೇವೆ. ಆದಷ್ಟು ತೀವ್ರದಲ್ಲಿಯೇ ಈ ಘಟನೆ ನಡೆಯಲಿದೆ.

ಒಂದು ವೇಳೆ ಸೆರೆಮನೆಯಲ್ಲಿದ್ದವರು ಹೊರಗೆ ಬರದಿದ್ದರೂ, ಈ ಚಳವಳೀ ಮಾತ್ರ ಖಚಿತವಾಗಿಯೂ ಮುಂದುವರೆಯುತ್ತದೆ. ಎಲ್ಲಿಯವರೆಗೂ ಪರಮಾತ್ಮನ ಇಚ್ಛೆಯು ಈಡೇರುವವರೆಗೂ ಇದು ಮುಂದುವರೆಯುತ್ತಲೇ ಇರುತ್ತದೆ. ತನ್ನ ಇಚ್ಛಾಪೂರ್ತಿಗಾಗಿಯಾದರೂ ಅವನು ಅದನ್ನು ಮುಂದುವರಿಸಲೇಬೇಕು. ನಮ್ಮಿಂದ ದೂರ ಮಾಡಲ್ಪಟ್ಟವರು ಕಾಲಕ್ರಮೇಣ ದೂರವೇ ಆಗಿಬಿಡಬಹುದು! ಅವರ ಆತ್ಮಶಕ್ತಿಯು ನಮ್ಮಲ್ಲಿಯೂ ತುಂಬಿಕೊಂಡಿರುವದರಿಂದ, ನಾವು ಮತ್ತೂ ಮತ್ತೂ ಸಾಮರ್ಥ್ಯದುಂಬಿಕೊಳ್ಳುತ್ತೇವೆ. ಏಕೆಂದರೆ ಅವರೇ ನಮ್ಮ ಸ್ಫೂರ್ತಿಯ ನೆಲೆಯಾಗಿದ್ದಾರೆ. ಅವರಿಗಿಂತ ಬಲಶಾಲಿಯಾದವರು ಬರಬಹುದು, ಮತ್ತೆ ತೆರಳಬಹುದು, ಆದರೆ, ಆದರೆ, ನಮ್ಮ ಹೃದಯಗಳು ಮಾತ್ರ ಮೊದಲಿಗಿಂತಲೂ ಸಾಮರ್ಥ್ಯ ಪಡೆದುಕೊಳ್ಳುತ್ತದೆ. ಯಾಕೆಂದರೆ ನಾವೆಲ್ಲ ಪರಮಾತ್ಮನ ಆತ್ಮದ ಜೊತೆಗೇನೇ ಸ್ಪಂದನಗೊಳ್ಳುತ್ತ ಇರುತ್ತೇವೆ. ನಮ್ಮಂತರಂಗದಲ್ಲಿಯೇ ನಿಂತು ಅವನು ಕಾರ್ಯ ಮಾಡುತ್ತಾನೆ. ಹೀಗಾಗಿ ಈ ವಿಪಲ್ವಗಳೆಲ್ಲವೂ ನಮಗೆ ಪಾಠಗಳಾಗಿವೆ.

ನಿಮಗೆ ಗೊತ್ತಿದೆಯಲ್ಲವೇ? ಅಶ್ವಿನಿ ಕುಮಾರ ದತ್ತನನ್ನು ಗಡಿಪಾರು ಮಾಡಿದ ಒಂದೇ ತಿಂಗಳಲ್ಲಿ ಝಾಲಕಟೀಯಲ್ಲಿ ನ್ಯಾಷನಲ್ ಸ್ಕೂಲ್ ಪ್ರಾರಂಭವಾಯಿತು ಅಲ್ಲವೇ? ಈ ಶಾಲೆಯೇ ಈ ಚಳವಳಿಯು ಮುಂದುವರೆಯುತ್ತಿರುವದರ ಭವ್ಯ ಸಂಕೇತವಾಗಿದೆ. ಆದರೆ ನಮ್ಮನ್ನು ಆಳುತ್ತಿರುವ ಆಂಗ್ಲ ಸರಕಾರಕ್ಕೆ ಮಾತ್ರ ಇದು ತಿಳಿಯುತ್ತಿಲ್ಲ!! ಹೋರಾಟಗಾರರ ಅಪಾರ ಸರಣಿಗಳ ಪ್ರವಾಹವೇ ಆಗಮಿಸುತ್ತಿದೆ. ಹೀಗಾಗಿ ಯಾವುದೇ ಅಡೆ–ತಡೆ ಬಂದರೂ, ಹೋರಾಟ ಮಾತ್ರ ಎಂದಿಗೂ ನಿಲ್ಲುವದಿಲ್ಲ.

ಸಮಯದ ಮಿತಿಯಿಂದಾಗಿ ನನ್ನ ಮಾತನ್ನು ಮಂಗಲಗೊಳಿಸಬೇಕಿದೆ, ಬಂದವರೆಲ್ಲರೂ ಮತ್ತೆ ತಮ್ಮ ಮನೆಗಳಿಗೆ ಸುರಕ್ಷಿತವಾಗಿ ತಲುಪಬೇಕಿದೆ, ಎಂದುಕೊಂಡು, ಇಷ್ಟೆಲ್ಲಾ ಆದಮೇಲೂ ಮುಖ್ಯವಾಗಿ ನಾವೆಲ್ಲ ಗಮನಿಸಬೇಕಾದ

ಸಂಗತಿ ಎಂದರೆ ಏನು ಗೊತ್ತೇ ಎಂದು ಸಭಿಕರನ್ನು ನೋಡಿದೆ. ಒಂದರೆ ನಿಮಿಷದ ಮೌನ. ಸಭೆಯಂತೂ ಮತ್ತೂ ಮೌನದಲ್ಲಿ ತುಂಬಿತ್ತು, ನಾನೇ ತಿಳಿಸುತ್ತೇನೆ ಎಂದು, "ಗ್ರೀಕ ಕಥಾನಕದಲ್ಲಿ ಬರುವ ಸಿಂಹದ ತಲೆಯನ್ನು ಮೇಕೆಯ ದೇಹವನ್ನೂ ಮತ್ತು ಸರ್ಪದ ಬಾಲವನ್ನೂ ಹೊಂದಿ ಸದಾ ಬೆಂಕಿಯುಗುಳುತ್ತ ಬರುತ್ತಿರುವ ರಾಕ್ಷಸಿಯ ಭಯದಲ್ಲಿ ಇರುವಂತಿಲ್ಲ, ಬದಲಾಗಿ ಯಾವ ಉದ್ದೇಶಕ್ಕಾಗಿ ನಾವು ಹೋರಾಟ ಮಾಡುತ್ತಿದ್ದೇವೆಯೋ, ಅದನ್ನು ಫಲಪ್ರದಗೊಳಿಸಿಕೊಳ್ಳುವದರ ಸಲುವಾಗಿ ಸದಾ ಮುಂದುವರೆಯುತ್ತ ಇರುವದೇ ಈ ಚಳವಳಿಯು ಏನನ್ನು ಅಪೇಕ್ಷೆ ಇದೆ. ನಮ್ಮ ಜೀವನ ಎಂದರೆ, ನಮ್ಮ ರಾಷ್ಟ್ರದ ಜೀವನವಾಗಬೇಕು. ಅದೇ ಸ್ವರಾಜತ್ವದ ಆಂತರ್ಯ. ಆದರೆ ಈ ಸ್ವರಾಜ್ಯ ಎನ್ನುವ ಪದವೇ ಈ ಯುರೋಪಿಯನ್ ಸಮುದಾಯಕ್ಕೆ ಭಯ ಹುಟ್ಟಿಸುತ್ತಿರುವ ಕರಡಿಯಂತೆ ಕಾಣುತ್ತಿದೆ. ಭಯ ಹುಟ್ಟಿಸುತ್ತಿದೆ. ಯಾವಾಗ ಅವರು ಈ ಸ್ವರಾಜ್ಯ ಎನ್ನುವ ಶಬ್ದವನ್ನು ಕೇಳಿದರೋ, ಆ ಕ್ಷಣದಿಂದಲೂ ಯಾವುದೇ ಕಾರಣವಿಲ್ಲದೇ ದುಃಖಿಕ್ಕೊಳಗಾಗುತ್ತಿದ್ದಾರೆ. ಅವರ ಪ್ರಕಾರ ಸ್ವರಾಜ್ಯ ಎಂದರೆ ಸ್ವಾತಂತ್ರ್ಯ. ಇದು ಮುಕ್ತತ್ವವಾಗಿದೆ, ಅಂದರೆ ಈ ಜನರೆಲ್ಲರೂ ನಮ್ಮ ವಿರುದ್ಧವಾಗಿ ವಿದ್ರೋಹವನ್ನು ರೂಪಿಸುತ್ತಾರೆ, ಅಂದರೆ ಇವರೆಲ್ಲರ ಹತ್ತಿರವೂ ಬಾಂಬ್ ಇವೆ. ಯುರೋಪಿಯನ್ ವಿಚಾರದ ಪ್ರಕಾರ, ಬರಗಾಲಕ್ಕೆ ಸಿಲುಕಿ ನರಳುತ್ತಿರುವವರಿಗೆ ಅನ್ನ–ನೀರು ಒದಗಿಸುವದಾಗಲಿ ಅಥವಾ ಕಾಲರಾದಿಂದ ಪೀಡಿತರಾಗಿರುವವರಿಗೆ ಶುಶ್ರೂಷೆ ಮಾಡುವದೂ ಸಹಿತ ವಿದ್ರೋಹದಂತೆ ಕಾಣುತ್ತದೆ. ಅವರನ್ನು ಡಕಾಯಿತರು ಎಂದೇ ನೋಡುತ್ತಾರೆ. ಏಕೆಂದರೆ ಸ್ವರಾಜ ಎನ್ನುವ ಚಿಂತನಯೇ ವಸಾಹತುಶಾಹೀ ಸರಕಾರದ ಅಥವಾ ಯಾವುದೇ ಸರಕಾರದ ಸ್ವರೂಪವಲ್ಲ. ಸ್ವರಾಜ ಎನ್ನುವದು ನಮ್ಮದೇ ರಾಷ್ಟ್ರದ ಜೀವನವನ್ನು ಪ್ರಫುಲ್ಲಿತಗೊಳಿಸಕೊಳ್ಳುವದಾಗಿದೆ. ಇದನ್ನು ಮಾತ್ರ ನಾವು ಆಶಯದಲ್ಲಿ ಇಟ್ಟುಕೊಳ್ಳಬೇಕು. ಇದನ್ನು ಈಡೇರಿಸುವ ಸಲುವಾಗಿಯೇ ದೇವನು ನಮಗೆ ಮನುಷ್ಯ ಸ್ವರೂಪ ಕೊಟ್ಟು ಈ ಭೂಮಿಗೆ ಕಳಿಸಿದ್ದಾನೆ. ಅಂದರೆ ಅವನ ಆಣತಿಯನ್ನು ಈಡೇರಿಸುತ್ತಲೇ ವೈಯಕ್ತಿಕ ಬದುಕನ್ನೂ ಸುಂದರಗೊಳಿಸಿಕೊಳ್ಳುವದೇ ಸ್ವರಾಜ ಆಗಿದೆ. ಇದು ನಮ್ಮ ನಮ್ಮ ಕುಟುಂಬಕ್ಕೂ ಅವಶ್ಯವಿದೆ. ಸಮುದಾಯಕ್ಕೆ ಅವಶ್ಯವಿದೆ. ನಮ್ಮ ದೇಶಕ್ಕೆ ಮತ್ತು ಅತಿ ಮುಖ್ಯವಾಗಿ ಮಾನವೀಯತೆಗೆ ಅತ್ಯಾವಶ್ಯಕವಾಗಿದೆ. ನಮ್ಮ ಈ ಬಯಕೆಯನ್ನು ಈಡೇರಿಸಕೊಳ್ಳಲೆಂದೇ ಅವನು ನಮಗೆ ಮಾರ್ಗದರ್ಶನವನ್ನೂ ಮಾಡುತ್ತಿದ್ದಾನೆ. ನಾವೆಲ್ಲ ನಶಿಸಿ ಹೋಗದ ಹಾಗೆ ನಮ್ಮನ್ನು

ಜಾಗ್ರತಗೊಳಿಸಿಕೊಂಡು ಈ ಸ್ವರಾಜ ಪಡೆದುಕೊಳ್ಳಬೇಕಿದೆ. ಈ ಸ್ವದೇಶಿ ಚಳವಳಿಯನ್ನು ಮೊದಲು ಪ್ರಾರಂಭಿಸಿದ್ದು ಕಾಕಾ ಜೋಶಿ ಎನ್ನುವದು ಎಲ್ಲರಿಗೂ ಗೊತ್ತಿರಬೇಕು. ಆದರೆ ಅವರು ಈ ಚಿಂತನವನ್ನು ಪ್ರಾರಂಭಿಸಿದ ಸಮಯ ಮಾತ್ರ ಅದು ಮುಂದುವರೆಯಲು ಪೂರಕವಾಗಿರಲಿಲ್ಲ. ಅದು ಉಪಯೋಗವೇ ಇಲ್ಲದ ವಿಚಾರವೆಂದು ಪರಿಗಣಿಸುವ ಹಂತಕ್ಕೂ ಬಂದಿತ್ತು ಅಲ್ಲವೇ? ಆದರೆ ಇದೀಗ ಆ ಸ್ವದೇಶಿ ಚಳವಳಿ ಮೊದಲಿಗಿಂತ ಸಶಕ್ತವಾಗಿ ಅನುಷ್ಠಾನಗೊಳ್ಳಲೇಬೇಕಾದ ಹಂತ ತಲುಪಿದೆ. ಬೆಂಗಾಲಿ ವೈದ್ಯರು ಜೀವ ರಕ್ಷಿಸುವ ಔಷಧಿಯನ್ನು ಕೊಡುತ್ತಾರಲ್ಲವೇ ಹಾಗೇ ಇದೆ. ಕಾಕಾ ಜೋಶಿಯವರು ರೂಪಿಸಿದ್ದ ಠರಾವನ್ನು ಈಗ ಪ್ರಾಚಾರ್ಯ ಅರವಿಂದ ಘೋಷರಿಂದ ಸುಸ್ಪಷ್ಟವಾದ ಆಂಗ್ಲ ಭಾಷೆಯಲ್ಲಿ ಬಡೋದಾ ಸಭೆಯಲ್ಲಿ ಮೂರುವರೆ ವರ್ಷದ ಹಿಂದೆಯೇ ಮಂಡಿಸಲ್ಪಟ್ಟು, ಗುಜರಾತಿನ ಚಿಮನಲಾಲ ಸಾಮಲ್ ಬೆಚರವಾಲಾರಿಂದ ಮತ್ತು ರಾವ್ ಬಹದ್ದೂರ ಸಾರಂಗಪಾಣಿ ಅವರಿಂದ ಅನುಮೋದಿಸಲ್ಪಟ್ಟ ವಿಷಯ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದನ್ನು ಕೆಲವರಾದರೂ ನೆನಪಿನಲ್ಲಿ ಇಟ್ಟುಕೊಂಡಿದ್ದೀರಿ ಎಂದು ಆಶಿಸುತ್ತೇನೆ. ಅದು ಮರಾಠಿಯಲ್ಲಿ ಠರಾವಿಸಿದ್ದರಿಂದ, ಪುಣೆಯ 'ಕೇಸರಿ' ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು ಎನ್ನುವದು ನಿಜ.

ಇಲ್ಲಿ ಎಂದೆಂದಿಗೂ ಮರೆಯದೇ ಇರಬೇಕಾದ ಸಂಗತಿ ಎಂದರೆ ನಾವೆಲ್ಲ ಒಂದೇ ರಾಷ್ಟ್ರದ ವ್ಯವಸ್ಥೆಯಲ್ಲಿ ಇರಬೇಕು. ಈ ರೀತಿಯಾದಾಗ ಮಾತ್ರ ನಾವು ನಮ್ಮತನವನ್ನು ಕಳೆದುಕೊಳ್ಳುವದಿಲ್ಲ. ಯಾರೇ ಆಗಲಿ ಇದರ ವಿರುದ್ಧ ಹೋದಲ್ಲಿ, ನ್ಯಾಯದ ಶಾಶ್ವತದ ಆಳ್ವಿಕೆಯಲ್ಲಿ ತಾನೇ ತಾನಾಗಿ ತನಗೆ ತೊಂದರೆಯನ್ನು ತಂದುಕೊಂಡಂತೆ! ಪ್ರಕೃತಿಯ ವಿರುದ್ಧ ನಡೆದುಕೊಂಡಂತೆ ಕುಸಿತ ಹೊಂದುತ್ತದೆ. ಪರಮಾತ್ಮನ ಆಣತಿಯನ್ನು ಮರೆತು ನಡೆಯುವದರಿಂದ ತುಂಡು ತುಂಡಾಗಿ ಕತ್ತರಿಸಿ ಹೋಗುತ್ತದೆ. ಸ್ವರಾಜ ಎನ್ನುವದನ್ನು ಸಾಧಿಸಿಕೊಳ್ಳುವದಾದರೆ ಎಲ್ಲಿ? ಯಾವ ರಂಗದಲ್ಲಿ? ಎಂದರೆ, ಅದು ನಮ್ಮ ವಾಣಿಜ್ಯದಲ್ಲಿ ಸ್ವದೇಶಿ ಆಗಿರಬೇಕು; ಉತ್ಪಾದನೆಯಲ್ಲಿ, ರಾಜಕೀಯದ ವಿಷಯದಲ್ಲಿ, ಶಿಕ್ಷಣದಲ್ಲಿ, ಕಾನೂನು ಮತ್ತು ಆಡಳಿತದಲ್ಲಿ ಅಂದರೆ ರಾಷ್ಟ್ರೀಯವಾಗಿರುವ ಎಲ್ಲ ಸಂಗತಿಗಳಲ್ಲಿಯೂ ಈ ಸ್ವದೇಶೀ ಭಾವ ಅನುಷ್ಠಾನಗೊಳ್ಳಬೇಕಿದೆ. ಇದನ್ನೆಲ್ಲ ನೋಡಿದರೆ ಇದು ಸ್ವಾತಂತ್ರ್ಯವೆಂದೇ ತೋರುತ್ತದೆ. ಇದರಲ್ಲೇನೂ ಸಂಶಯವಿಲ್ಲ. ಅಂದರೆ ಅಸ್ಮಿತೆಯನ್ನು ಹೊಂದುವ ಮುಕ್ತ ವಾತಾವರಣ. ಇದು ವಿದ್ರೋಹವಂತೂ ಅಲ್ಲ. ಆದರೆ 'ಸ್ವಾತಂತ್ರ್ಯ' ಎಂದಾಕ್ಷಣ

ಬೆಚ್ಚಿಬೀಳುವ ವರ್ಗವೂ ಇದೆ. ನಾನು ಮಾತ್ರ ಇದನ್ನು ನನ್ನ ಉಸಿರಾಗಿಸಿ–ಕೊಂಡಿದ್ದೇನೆ, ಏಕೆಂದರೆ ಇದು ನನಗೆ ನನ್ನ ಜೀವನದ 'ಮಂತ್ರ'. ನಾನು ಅಲೀಪೂರ ಜೇಲಿನಲ್ಲಿದ್ದಾಗ ಇದನ್ನೇ ನನ್ನ ಮಂತ್ರವನ್ನಾಗಿಸಿಕೊಂಡಿದ್ದೆ, ಪ್ರತಿಕ್ಷಣವೂ ಇದನ್ನೇ ಜಪಿಸುತ್ತಿದ್ದೆ. ನನ್ನ ತುಟಿಗಳೂ ಸಹಿತ ಸತತವಾಗಿ ಇದನ್ನು ಪಠಿಸುತ್ತಲೇ ಇದ್ದವು. ನನಗೆ ಮಾರ್ಗದರ್ಶಿಯಾಗಿದ್ದ – ಅಂದರೆ ಕೃಷ್ಣನೂ ಸಹಿತ ಇದನ್ನೇ ನನಗೆ ತಿಳಿಸಿಕೊಟ್ಟಿದ್ದ. ಏಕೆಂದರೆ ಇದು ಅವನಿಂದಲೇ ಪ್ರಫುಲ್ಲಿತಗೊಂಡಿದೆ. ಒಂದು ವೇಳೆ ಈ ರೀತಿಯಲ್ಲಿ ಸ್ವಾತಂತ್ರ್ಯಕ್ಕಾಗಿ ಜಪಿಸುವದು ತಪಿಸುವದು ಅಪರಾಧ ಎಂದಾದಲ್ಲಿ, ನನ್ನನ್ನು ಮತ್ತೆ ಬೇಕಾದರೆ ಜೇಲಿಗೆ ತಳ್ಳಲಿ, ಕೈಕಾಲುಗಳಿಗೆ ಸರಪಳಿ ಬಿಗಿಯಲಿ. ನನಗೆ ಬೇಕಾದರೆ ಶೀಕ್ಷೆ ನೀಡಲಿ. ಆದರೆ ಸ್ವಾತಂತ್ರ್ಯ ಎನ್ನುವದು ಹಿಂಸಾತ್ಮಕವಾಗಿ ಪಡೆದುಕೊಳ್ಳುವದಂತೂ ಅಲ್ಲ. ಏಕೆಂದರೆ ಇದು ಬಾಂಬ ಅಲ್ಲ. ನಮ್ಮದೇ ರಾಷ್ಟ್ರದ ರಾಷ್ಟ್ರೀಯ ಅಸ್ತಿತ್ವವನ್ನು ಸ್ಥಾಪಿಸುವ ಕರ್ತವ್ಯ ಇದಾಗಿದೆ.

ಹಾಗೆಂದು ಈ ಸ್ವಾತಂತ್ರ್ಯವನ್ನು ಹುಚ್ಚುತನದ ಪರಮಾವಧಿಯಲ್ಲಿ ಪರಿಗಣಿಸುವ ಯಾವುದಾದರೂ ಪ್ರಾಧಿಕಾರವಿದ್ದರೆ ಈ ಹಂತದ ಸ್ವದೇಶಿ ತತ್ತ್ವವನ್ನು ಹರಡುತ್ತಿದ್ದರೆ, ರಾಷ್ಟ್ರೀಯ ಶಿಕ್ಷಣವನ್ನೂ ಈ ರೀತಿ ಸಂಕುಚಿತಗೊಳಿಸಿದರೆ, ನ್ಯಾಯ ವಿಚಾರಣೆಗೆ ತೊಡಗಿಸಿದರೆ, ನಮ್ಮ ಅಸ್ತಿತ್ವದ ಸಲುವಾಗಿ ನಮ್ಮದೇ ಒಂದು ಸಂಘಟನಾತ್ಮಕವಾದ ರಚನೆಯನ್ನು ಕೈಕೊಂಡರೆ, ಅದು ಕಾನೂನಿ ವಿರೋಧವಿದ್ದಂತೆ. ನಮ್ಮದೇ ಸರ್ವಾಧಿಕಾರತ್ವವನ್ನು ನಾವು ಇಲ್ಲಿ ಹೇರುವಂತಿಲ್ಲ. ಒಂದು ವೇಳೆ ಆ ರೀತಿಯ ಸರ್ವಾಧಿಕಾರತ್ವವನ್ನೇನಾದರೂ ಹೇರಿದಲ್ಲಿ, ನಿಯತಿಯ ವಿರೋಧವನ್ನು ರೂಪಿಸಿದಂತೆ ಆಗುತ್ತದೆ.

ಅಲೀಪೂರ ನ್ಯಾಯಾಲಯದಲ್ಲಿ ಆ ನ್ಯಾಯಾಧೀಶ ಹೇಳಿದ್ದು ಏನು ಗೊತ್ತಾ ನಿಮಗೆ, ಸ್ವಾತಂತ್ರ್ಯಕ್ಕಾಗಿ ಅಭೀಪ್ಸೆ ಹೊಂದುವದು ಮತ್ತು ಸ್ವಾತಂತ್ರ್ಯದ ಕುರಿತು ಚಿಂತನಗಳನ್ನು ಉಪದೇಶಿಸುವದನ್ನು ಯಾವುದೇ ಇಂಗ್ಲೀಷ ವ್ಯಕ್ತಿ ನಿರಾಕರಿಸುವದಿಲ್ಲ. ಅದೇ ರೀತಿಯಲ್ಲಿ ಸ್ವಾತಂತ್ರ್ಯದ ನಂತರದಲ್ಲೂ ಇಂತಹ ಅಭೀಪ್ಸೆ ಇದ್ದಲ್ಲಿ, ಮತ್ತು ಅದನ್ನು ಮನಸೋ ಇಚ್ಛೆ ಎಂದು ವರ್ತಿಸತೊಡಗಿದರೆ ಮಾತ್ರ, ಅದನ್ನು ಸಹಿಸಿಕೊಳ್ಳಬೇಕು ಎನ್ನುವದು ಎಷ್ಟು ಸರಿ? ಆದರೆ ಆ ಅತಿರೇಕ್ಕೆ ಹೋಗಿ ಹುಚ್ಚರಂತೆ ವರ್ತಿಸಿದವರೂ ಇದ್ದಾರಲ್ಲವೇ? ಅವರೆಲ್ಲರೂ ಕಾನೂನನ್ನು ಉಲ್ಲಂಘಿಸಿ ಅದನ್ನೇ ರಾಷ್ಟ್ರೀಯ ಚಳವಳಿ ಎಂದುಕೊಂಡು ಸಾಗುತ್ತಿದ್ದಾರೆ, ಅದನ್ನು ತಹಬಂದಿಗೆ ತರಲೇಬೇಕಾಗುತ್ತದೆ."

ಇದರರ್ಥವೆಂದರೆ, ನಮ್ಮದೇ ದೇಶದ ವಿಷಯದಲ್ಲಿಯೂ ಸರಕಾರವು ಏನೆ ಮಾಡಿದರೂ ನಾವು ಮಾತ್ರ ಏನನ್ನೂ ಪ್ರತಿಕ್ರಿಯಿಸುವಂತಿಲ್ಲ, ಆದರೆ ನಮಗೆಲ್ಲರಿಗೂ ಇಲ್ಲಿ ಒಂದು ಅವಕಾಶವಿದೆ, ಅದನ್ನು ಮಾತ್ರ ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಅದು ನಮ್ಮದೇ ಶಕ್ತಿ; ಸಾಮರ್ಥ್ಯ. ಈ ಆತ್ಮಶಕ್ತಿಯ ವಿಷಯದಲ್ಲಿ ನಮಗೆಲ್ಲಾ ವಿಶ್ವಾಸವಿದೆ. ನಮ್ಮ ತ್ಯಾಗವೇ ಆ ಬಲವಾಗಿದೆ; ನಮ್ಮ ಯಾತನೆಗಳೇ ನಮ್ಮ ಸಾಮರ್ಥ್ಯವನ್ನೂ ಮತ್ತೂ ಮತ್ತೂ ಗಟ್ಟಿಗೊಳಿಸುತ್ತಿವೆ, ಇದನ್ನು ತಿಳಿಯದವರು ಯಾರಾದರೂ ಇದ್ದಾರೆಯೇ? ಇದನ್ನು ನಮ್ಮಿಂದ ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ. ಅದನ್ನು ತಡೆಯಲು ಎಷ್ಟೇ ಪ್ರಯತ್ನಗಳು ನಡೆದರೂ, ಅದು ಬಹಳ ದಿನಗಳ ಕಾಲ ನಡೆಯುವದಿಲ್ಲ, ಇದನ್ನು ಅವರು ಮರೆಯಬಾರದು. ಒಂದು ವೇಳೆ ದಬ್ಬಾಳಿಕೆ ಮುಂದುವರೆದರೆ, ಆಗ ಅನಿವಾರ್ಯವಾಗಿ ಅರಾಜಕತೆ ಸೃಷ್ಟಿಯಾಗುತ್ತದೆ. ಹಾಗೇನಾದರೂ ಆದಲ್ಲಿ ಮುಂದಿನ ಕ್ಷಣವೇ ನಿಮ್ಮ ಆಡಳಿತದ ಕೊನೆಯಾಗುತ್ತದೆ. ನಿಮ್ಮ ಸರಕಾರವೇ ಅವ್ಯವಸ್ಥಿತಗೊಳ್ಳುತ್ತದೆ. ನೀವು ಯಾವ ವ್ಯಾಪಾರೀ ತಂತ್ರವನ್ನು ಬಳಸಿಕೊಂಡು ಇಂತಹ ಹುನ್ನಾರು ಮಾಡುತ್ತಿರೋ, ಅದೇ ನಿಮ್ಮ ಬಂಡವಾಳವನ್ನು ಧೂಲಿಪಟ ಮಾಡುತ್ತದೆ.

ನಾವು ಸದಾ ಬಳಲುತ್ತಲೇ ಇರಬೇಕು ಎನ್ನುವದು ನಮಗೀಗಾಲೇ ತಿಳಿದಿದೆ. ಆದರೆ ಅದೇ ದಾರಿಯಲ್ಲಿಯೇ ಮತ್ತೂ ಸಾಮರ್ಥ್ಯವನ್ನು ಒಗ್ಗೂಡಿಸಿಕೊಳ್ಳಬೇಕಿದೆ ಎನ್ನುವದೂ ಗೊತ್ತಿದೆ. ನಿಮ್ಮ ದಬ್ಬಾಳಿಕೆ, ಕ್ರೌರ್ಯದ ಎಲ್ಲ ತಂತ್ರಗಳೂ ಅತಂತ್ರವಾಗಲಿವೆ. ಅದನ್ನು ಸಾಧಿಸಲು ನಮ್ಮ ಸದುದ್ದೇಶ ಮಾತ್ರ ಸದಾ ಜಾಗ್ರತವಾಗಿರಬೇಕಾಗಿದೆ. ಯಾವುದೇ ಕಾರಣಕ್ಕೂ ನಮ್ಮ ಸ್ಥೈರ್ಯವನ್ನು, ಧೈರ್ಯವನ್ನು ಮತ್ತು ಸಾಹಸವನ್ನು ಕಳೆದುಕೊಳ್ಳುವಂತಿಲ್ಲ. ಕೆಲವರಲ್ಲಿ ಮತ್ತೊಂದು ವಿಚಿತ್ರ ರೀತಿಯ ಅಭಿಪ್ರಾಯಗಳಿವೆ. ನಾವು ತಲೆತಗ್ಗಿಸಿಕೊಂಡೇ ಬದುಕಿದ್ದರೇ ಈ ರೀತಿಯ ದಬ್ಬಾಳಿಕೆಯಿಂದ ತೊಂದರೆ ಅನುಭವಿಸದೇ ಇರಲು ಸಾಧ್ಯವಿದೆ ಎನ್ನುವ ವಿತಂಡವಾದವಿದೆ. ಆದರೆ ನಾನು ಮಾತ್ರ ಇದನ್ನು ಯಾವ ಕಾರಣಕ್ಕೂ ಒಪ್ಪುವದಿಲ್ಲ. ಎಂತಹದೇ ಬಿರುಗಾಳಿ ಇದ್ದರೂ ಅದನ್ನು ಎದೆಕೊಟ್ಟು ಎದುರಿಸುವ, ನೇರಾನೇರ ದಿಟ್ಟಿಸುವ ಛಲವಿದ್ದರೆ ಮಾತ್ರ ರಾಷ್ಟ್ರ ಬದುಕುತ್ತದೆ.

ಮಾತೆ ಭವಾನಿ, ನಮ್ಮ ಭಾರತ ಮಾತೆ ಇದನ್ನೇ ಅಪೇಕ್ಷಿಸುತ್ತಿರುವದು. ರಾಷ್ಟ್ರದ ಈ ಅಪೇಕ್ಷೆಯೇ ಪರಮಾತ್ಮನ ಅಪೇಕ್ಷೆಯೂ ಆಗಿದೆ. ಇಂತಹ ಜಂಝಾವಾತವನ್ನೇ ಅವನು ನಿನ್ನೆ ಕಳಿಸಿದ್ದು, ಅದು ನಮ್ಮ ತಲೆಯ ಮೇಲಿರುವ ಸೂರನ್ನೇ

ಹಾರಿಸಿಕೊಂಡು ಹೋಗಿದೆ. ಇಂದು ಮತ್ತೊಂದು ಬಿರುಗಾಳಿ. ನಮ್ಮ ನೆಲೆಯನ್ನೇ ತಪ್ಪಿಸಲು ಬಂದಂತಿದೆ, ಆದರೆ ಈಗಾಗಲೇ ಈ ನೆಲೆ ಭದ್ರಗೊಂಡು ನಿಲ್ಲುವದನ್ನು ಅರಿತಿದೆ. ಅದಕ್ಕಾಗಿಯೇ ಅಲ್ಲವೇ ನಾವೆಲ್ಲ ಇಲ್ಲಿ ಸೇರಿರುವದು. ಈ ರೀತಿಯ ಪ್ರಯತ್ನವನ್ನೇ ಅವನು ನಮ್ಮಿಂದ ಬಯಸುತ್ತಿದ್ದಾನೆ, ಈ ಎಲ್ಲ ಘಟನೆಗಳ ಮೂಲಕ ಪರಮಾತ್ಮನು ಹೇಳುತ್ತಿರುವದಾದರೂ ಏನು ಕೇಳಿಸಿಕೊಂಡಿದ್ದೀರಾ? ನಾನೇನೋ ಈ ರೀತಿಯ ಜಂಝಾವಾತಗಳನ್ನು ಸೃಷ್ಟಿಸಿ ಕಳಿಸುತ್ತಿದ್ದೇನೆ, ಇದರ ಮೂಲಕವೇ ನಿಮಗೆ ಪಾಠವನ್ನೂ ರೂಪಿಸುತ್ತಿದ್ದೇನೆ. ಇಂತಹ ಘಟನೆಗಳಿಂದ ನೀವು ಬಾಧಿತಗೊಂಡಿದ್ದರೆ, ನಿಮ್ಮ ಅಂಗಾಂಗಗಳು ಧಕ್ಕೆಗೊಂಡಿದ್ದರೆ, ಅದೇನೂ ಅಂತಹ ದೊಡ್ಡ ಪ್ರಮಾದವಲ್ಲ. ನೀವು ಸದಾ ಸಾಮರ್ಥ್ಯಶೀಲರಾಗಿರಬೇಕೆಂದೇ, ಅಂತಹ ಸಾಮರ್ಥ್ಯವನ್ನು ತುಂಬುವ ಸಲುವಾಗಿಯೇ ಈ ರೀತಿ ಸವಾಲು ಒಡ್ಡುತ್ತಿದ್ದೇನೆ. ಇಲ್ಲಿ ತಮ್ಮನ್ನು ತಾವೇ ಸಮರ್ಪಣೆ ಮಾಡಿಕೊಂಡವರಲ್ಲವೇ ಈ ಬಿರುಗಾಳಿ–ಯಲ್ಲಿಯೇ ಮುನ್ನುಗ್ಗಿ ಹೋಗಿ, ಹಾರಿ ಹೋಗುತ್ತಿರುವ ಸೂರುಗಳನ್ನು ತಡೆಹಿಡಿದ ತರುತ್ತಿದ್ದಾರೆ ಅಲ್ಲವೇ? ಇದನ್ನು ಇಡೀ ಭಾರತದ ಜನತೆ ತಿಳಿದುಕೊಳ್ಳಬೇಕಿದೆ. ಅದರಲ್ಲೂ ಬಂಗಾಳದ ತರುಣ ಜನಾಂಗ ಮೊದಲು ತಿಳಿದುಕೊಳ್ಳಬೇಕಿದೆ. ಇದೀಗ ತಣ್ಣಗಾದಂತೆ ತೋರುತ್ತಿರುವ ಬಿರುಗಾಳಿ ಮತ್ತೆ ಪುಟಿದೆದ್ದುಕೊಂಡೇ ಬರಬಹುದು. ಅದಕ್ಕಾಗಿ ಸದಾ ಸ್ಮರಿಸಿಕೊಳ್ಳಬೇಕಾಗಿರುವ ಸಂಗತಿ ಎಂದರೆ, ಶೂರತ್ವವನ್ನೇ ಉಸಿರಾಗಿಸಿಕೊಳ್ಳಿ. ಸಂಘರ್ಷದಲ್ಲಿಯೇ ನಿಮ್ಮ ತಾಕತ್ತನ್ನು ವರ್ಧಿಸಿಕೊಳ್ಳಿ. ಎಲ್ಲಕ್ಕಿಂತ ಮುಖ್ಯವಾದುದು ನಮ್ಮ ಶ್ರೀಮಾತೆಯ ಮಂದಿರವನ್ನು ಎಂದಿಗೂ ಘಾತಿಗೊಳಿಸದಂತೆ ಕಾಪಿಟ್ಟುಕೊಳ್ಳಬೇಕಾಗಿದೆ. ಎಂದು 'ವಂದೇ ಮಾತರಂ' ಎಂದು ಘೋಷಿಸುತ್ತಿದ್ದಂತೆಯೇ ಇಡೀ ಸಭೆಯೂ ಅದನ್ನೇ ತುಂಬುಕಂಠದಿಂದ ಮಾರ್ದನಿಸಿತು.

ಉಪನ್ಯಾಸ ಮುಗಿಸಿಕೊಂಡು ಮತ್ತೆ ಬಿಡಾರದತ್ತ ಮರಳಿ ಬಂದೆ. ಮಾತಿನ ಮಧ್ಯದಲ್ಲಿ ಭಗವಂತನ ಕಾರ್ಯದ ಕುರಿತು ಹೇಳಬೇಕೆಂದು ನಾನು ಸಿದ್ಧತೆಯನ್ನೇನೂ ಮಾಡಿಕೊಂಡಿರಲಿಲ್ಲ. ಹಾಗಾದರೆ ಆ ವಿಷಯ ನನ್ನಲ್ಲಿ ಹೇಗೆ ಬಂದಿತು? ಎಂದು ಯೋಚಿಸುತ್ತಲೇ, ಇದೇ ರೀತಿ ಸಾಗಬೇಕೆಂದು ಯಾರು ನನಗೆ ನಿಮಂತ್ರಣವನ್ನು ಕೊಡುತ್ತಿದ್ದಾರೆ? ನನ್ನನನು ರಕ್ಷಿಬೇಕಾಗಿರುವ ನನ್ನ ಸುತ್ತಲೂ ಇರುವ ವಾಯುಮಂಡಳವೇ ಅಬ್ಬರಿಸಿ ಅಬ್ಬರಿಸಿ ಕುಳಿರುಗಳನ್ನು ಸೃಷ್ಟಿಸುತ್ತಿದೆ. ಆ ಉತ್ತುಂಗಕ್ಕೆ ಸಾಗಬೇಕೆಂದರೆ, ಬರಿ ರೂಕ್ಷತೆಯ ಮರುಭೂಮಿಯ ಎಡೆಗೆ

ದೂಡುತ್ತಿದೆ. ನಾನು ಸಾಗಲೇಬೇಕಾಗಿದೆ, ಯಾರಾದರೂ ನನ್ನ ಜೊತೆಗೆ ಬರುತ್ತಾರೆಯೇ? ಅದೂ ಈ ಅನೂಹ್ಯದ ಕಡೆಗೆ ಆರೋಹಗೊಳ್ಳಲು ಎಂದರೆ ಯಾರು ಬರುತ್ತಾರೆ? ನನಗೆ ಭ್ರಮೆ ಎಂದುಕೊಳ್ಳುವವರೇ ಜಾಸ್ತಿ, ಪಾದ ಯಾತ್ರೆಯಲ್ಲಿಯೇ ಹಳ್ಳ–ಕೊಳ್ಳಗಳನ್ನು ದಾಟಿ ತೊರೆಗಳನ್ನು ಮೀರಿ, ಶುಭ್ರಧವಳದ ಹಿಮದಲ್ಲಿ ಯಾತ್ರೆ ಮಾಡುವಾ ಎಂದರೆ ಯಾರು ಬರುತ್ತಾರೆ?

ಈ ನಗರಗಳ ಚಕ್ರವ್ಯೂಹ ಅಲ್ಲಿರುವ ಕ್ಷೀಣ ಬದುಕಿನ ನಾಟಕ ನನಗೆ ಬೇಡ. ಅಲ್ಲಿಯೇ ಗಾಣದಂತೆಯೇ ಸುತ್ತುವರೆಯುತ್ತಲೇ ಇರುವದು ಏತಕ್ಕಾಗಿ? ರಾಗಗಳೇ ತುಂಬಿರುವ ಆ ಗೋಡೆಗಳ ಮಧ್ಯ ಇಡುಕಿಡುಕಿನಲ್ಲಿ ಅಡಗಿಕೊಳ್ಳುವದು ಯಾವ ಪುರುಷಾರ್ಥಕ್ಕೇ? ಅದೋ ನನಗಾಗಿ ನಿಮಂತ್ರಣವನ್ನು ಕೊಟ್ಟು, ನನ್ನ ಆಗಮನವನ್ನೇ ಕಾತರದಿಂದ ನೋಡುತ್ತಿರುವ ಆ ಪರಮಾತ್ಮ ಅದೋ ಅದೋ ಅಲ್ಲಿ ಮೇಲೆ ಮೇಲೆ ಊರ್ಧ್ವದ ತಾಣದಲ್ಲಿ, ಅಲ್ಲಿರುವ ಆ ನೀಲವ್ಯೋಮದ ಅವಕಾಶದೊಳಗೆ ನನಗಾಗಿಯೇ ಕಾಯುತ್ತಿದ್ದಾನೆ. ಆದರೆ ಇದೀಗ ಬೀಸುತ್ತಿರುವ ಈ ಚಂಡಮಾರುತಗಳು ನನಗೆ ಅಡ್ಡಗೋಡೆಗಳಾಗುತ್ತಿವೆ.

ಅದಕ್ಕಾಗಿಯೇ ಅಲ್ಲವೇ ಏಕಾಂತವನ್ನು ಅರಸಿ ಇಲ್ಲಗೆ ಬಂದದ್ದು, ಆ ಏಕಾಂತದೊಡನೆ ನಾನೂ ಏಕಾಂತವಾಗಿ ಘನಗೊಳ್ಳಬೇಕಾಗಿದೆ. ನನಗೆ ಒದಗಿದ ದುರ್ಗತಿಯೇ ನನಗೆ ಇಂತಹ ಸುವರ್ಣಾವಕಾಶ ಒದಗಿಸದೆ. ಏಕಾಂತವಾಗಿರುವದು ಹೇಗೆ ಎನ್ನುವದನ್ನು ಅಲೀಪುರದ ಅವಧಿ ಕಲಿಸಿತೆ? ಶ್ರೀ ಕೃಷ್ಣನ ದರ್ಶನಕ್ಕಾಗಿಯೇ ಅಂತಹ ಸೆರೆಮನೆ ಅನುಭವ ಅದಕ್ಕಾಗಿಯೇ ನಿಯತಿಗೊಂಡಿತ್ತೇ? ಆದರೆ ಅದೇ ನನಗೆ ನನ್ನ ಮಿತ್ರನನ್ನು ದೊರಕಿಸಿಕೊಟ್ಟಿತು, ಈ ಅಪರಂಪಾರವಾಗಿರುವ ಸುವ್ಯಾಪ್ತ ಅವಕಾಶದಲ್ಲಿ ದೀರ್ಘವ್ಯಾಪ್ತಿಯನ್ನು ಪಡೆದುಕೊಂಡು ಬದುಕುವವರಾದರೂ ಯಾರು? ಮುಕ್ತತ್ವದಲ್ಲಿಯೇ ಉಸಿರು ಹೊಂದಿರವವರು ಯಾರು? ಮಾನವನಿಗೆ ಇದು ದಕ್ಕದ್ದು ಎಂದರೆ, ಈ ಅನಂತತೆಯಾದರೂ ಏಕೆ? ಅದನ್ನು ಅರಿತುಕೊಳ್ಳಲಿ ಎಂದೇ ಈ ಅನೂಹ್ಯ ಸೃಷ್ಟಿಯಾಗಿದೆಯೇ? ಬ್ರಹ್ಮಾಂಡದಲ್ಲಿರುವ ತುಂಬಿರುವ ಪ್ರಾಣದ ಉಸಿರು ನನ್ನಲ್ಲೂ ಇದೆಯಲ್ಲವೇ? ಅದರ ಮೂಲಕವೇ ಊರ್ಧ್ವಾ–ರೋಹಣಗೊಳ್ಳಬೇಕಿದೆ. ಅದಕ್ಕಾಗಿಯೇ ಇರುವ ಸೂಕ್ಷ್ಮ ಪವನಗಳ ಮೆಟ್ಟಿಲಲ್ಲಿ ಏರುತ್ತ ಸಾಗಬೇಕಿದೆ. ಈ ಪವನಗಳ ಶ್ರೇಣಿ ಸಿಕ್ಕಿತು ಎಂದರೆ, ಚಂಡಮಾರುತಗಳಿಗೂ ಜೊತೆಜೊತೆಗೆ ಶಿಖರಗಳಿಗೂ ನಾನೇ ಒಡೆಯನಾಗಬಹುದು. ಆ ಗರಿಮೆಯೇ ನನ್ನ ಗರಿಮೆಯೂ ಆಗುತ್ತದೆ. ಹೇಗಿದ್ದರೂ ಪರಮಾತ್ಮ ಸದಾ ಸದಾ ನನ್ನ

ಸಹಯಾನಿಯಾಗಿ ಇದ್ದಾನೆ; ಸಮಗ್ರತೆಯಲ್ಲಿಯೂ ಇದ್ದಾನೆ. ಭೀತಿಗೊಳ್ಳುವ ಘಳಿಗೆ ಬಂದಾಗಲೆಲ್ಲವೂ ಸ್ವಜನ ಬಂಧುವಾಗಿ ರಕ್ಷೆ ಕೊಡುತ್ತಾನೆ. ನನ್ನ ಭವಭಾವಗಳಿಗೆಲ್ಲಕ್ಕೂ ಅತನೂ ಸಮಪಾಲುದಾರನಾಗಿಯೇ ಇದ್ದಾನೆ ಎನ್ನುವ ಅನುಭವ ಒದಗುತ್ತಿದ್ದಂತೆಯೇ, ಇಂದು ಮುಂದುವರೆಸಬೇಕಾಗಿರುವ ಧ್ಯಾನದ ಮೂರನೇ ದಿನದ ಗತಿಗೆ ನನ್ನನ್ನು ಒಪ್ಪಿಸಿಕೊಂಡೆ.

**ರಾಷ್ಟ್ರದ ವಿಷಯದಲ್ಲಿ ನಾನು ಕರ್ಮ ಯೋಗದ ನಿಯಮಗಳನ್ನೇ ಆಧಾರ–ವಾಗಿರಿಸಿಕೊಂಡಿದ್ದೇನೆ.** ಮನೋಭಾವದಲ್ಲಿ ನನಗೆ ನಿಯತಿ ಒದಗಿಸಿದ ಕರ್ತವ್ಯವನ್ನು ಸಂಪೂರ್ಣ ಸಮರ್ಪಣಾ ಮಾಡುವದೇ ಕರ್ಮವಲ್ಲವೇ? ಸಮರ್ಪಣೆಯನ್ನು ಭಕ್ತಿಯ ಹಂತಕ್ಕೇರಿಸಿ ಸರ್ವವನ್ನೂ ಅವನ ಆಣತಿ ಎಂದುಕೊಂಡಲ್ಲಿ, ಪ್ರಗತಿಯ ಪಥಕ್ಕೆ ಛಾಯೆ ಆವರಿಸುತ್ತದೆಯೇ? ಏನೇ ಆದರೂ, ಮುಂದುವರೆಯುವದೊಂದೇ ಅದೂ ಗಮ್ಯವನ್ನು ತಲುಪಲೆಂದೇ ಸದಾ ಗಮನಗೊಳ್ಳುವದೇ ಮುಖ್ಯ. ಬಾಹ್ಯ ಘಟನೆಗಳಿಂದ ವಿಚಲನೆಗೊಳ್ಳದ ಹಾಗೆ ಚಿತ್ತಸ್ಥಿರತೆಯನ್ನು ಸಾಧಿಸುವದೇ ಇಲ್ಲಿರುವ ಮುಖ್ಯ ಸಂಗತಿ, ಎಂದೆಲ್ಲಾ ಯೋಚನೆಗಳು ಕಾಣಿಸುತ್ತಲೇ, ನನಗೆ ನಾನೇ ಅರಿತುಕೊಳ್ಳುವ ಅವಕಾಶವಾಯಿತು, ಅಂದರೆ ನನ್ನ ಮನಸ್ಸಿನ್ನೂ ಪ್ರಶಾಂತತೆಯತ್ತ ಸಾಗುತ್ತಿಲ್ಲ. ಪರಮಾತ್ಮನ ಕಾರ್ಯಗಳ ಬಗೆಗೆ ನಾನು ಊಹಿಸುವದು ಎಷ್ಟು ಸಮಂಜಸ ಎನ್ನುವ ಜಿಜ್ಞಾಸೆಯೂ ಹಣಿಕಿಕ್ಕಿತು. ಆದರೆ ಇಲ್ಲಿರುವ ಸಂದಿಗ್ಧ ಭಯದ, ಸಂಕಟದ ಕರ್ಕಶದ ಖುರಪುಟದ ಪೆಟ್ಟು ಕರ್ಣಪಟಲಗಳನ್ನಷ್ಟೇ ಅಪ್ಪಳಿಸುತ್ತಿಲ್ಲ, ಜೊತೆಗೆ ಹೃದಯವನ್ನೂ ಕಂಪಿಸುತ್ತದೆ. ಆದರೆ ನನ್ನದೇ ಲಯದ ಗತಿ ಮತ್ತು ಪಥದ ಕುರಿತು ನಿರ್ದಿಷ್ಟವಾದ ಅಭಿಪ್ರಾಯ ಈಗಾಗಲೇ ರೂಹುಗೊಂಡಿದ್ದರಿಂದ ಆ ಅಟ್ಟಹಾಸದ ಲಯವನ್ನೇ ಅನುಸರಿಸಿ ಮುಂದೆ ಸಾಗಬೇಕಿದೆ. ಆ ಪಥವಾದರೂ ಸ್ಥಿರವಾಗಿದೆಯೇ? ಒಂದೊಂದು ಹೆಜ್ಜೆಗೂ ಕುಸಿತ ಕಾಣಿಸುವ ಶಿಥಿಲತೆ. ಜೊತೆಗೆ ಹುಯ್ಯಾಟದಲ್ಲಿ ತುಯ್ಯಲಾಡುತ್ತಿರುವ ಅಸ್ಥಿರತೆ. ಆದರೂ ಬರಲಿರುವ ಭವಿಷ್ಯದ ದಿನಮಾನಗಳು ಶುಭವನ್ನು ತರುತ್ತವೆ ಎಂದು ಅಂತರಾತ್ಮ ಹೇಳುತ್ತಿದ್ದರೂ, ಮನಸ್ಸು ಮಾತ್ರ ಇನ್ನೂ ಕೊಂಕಾಟದೊಳಗೇ ಇದೆ.

ಅದೆಲ್ಲವನ್ನೂ ನಿಧಾನವಾಗಿ ನಿಧಾನವಾಗಿ ನಿಯಂತ್ರಣಕ್ಕೆ ತಂದುಕೊಂಡೆ. ಸಂಪೂರ್ಣ ಪ್ರಶಾಂತವಲ್ಲದಿದ್ದರೂ ಯಾವುದೇ ತರಂಗಗಳಿಲ್ಲದ ನಿತಾಂತ ಸ್ಥಿತಿ. ಒಳಗೂ ಹಾಗೆ ಇರಬೇಕು, ಮತ್ತೂ ಮತ್ತೂ ಆಳಕ್ಕೆ ಇಳಿಯಬೇಕು, ಮೌನವು ಘನವಾಗಬೇಕು. ಅದನ್ನು ಸಾಧಿಸುವ ಹಂತದಲ್ಲಿ ಎರಡು ದಿನ ಪ್ರಯತ್ನಿಸಿಯಾಗಿದೆ.

ಇದೀಗ ಮೂರನೇ ದಿನ. ಮನಸ್ಸಿನ ನಿತಾತಂತೆ ಎಂದರೆ ಚಿತ್ತದ ದ್ವಾರವನ್ನು ಕಂಡಂತೆ. ಇನ್ನೂ ಆ ದ್ವಾರವನ್ನು ತೆರೆಯಬೇಕಿದೆ. ಇಲ್ಲಿ ಪ್ರಕೃತಿಯ ನಿಯತಿ ರೇಖೆಗಳನ್ನು ಮೀರಿಯೇ ಸಾಗಬೇಕೇ? ಏಕೆ ಈ ರೀತಿ? ಇದಿನ್ನೂ ಏಕೆ ಮಾನವ ಸಮುದಾಯಕ್ಕೆ ಗೂಢವಾಗಿದೆ? ಈ ರೀತಿಯಲ್ಲಿಯೇ ಸಾಗಲೇಬೇಕು ಎನ್ನುವದು ವೈಶ್ವಿಕ ಸೂತ್ರವೇ? ಇನ್ನೂ ಪ್ರಶ್ನೆಗಳ ಸಾಲು ಪುಂಖಾನುಪುಂಖವಾಗಿ ಉದಿಸುತ್ತಲೇ ಇವೆ. ಮನಸ್ಸಿನ ಆವರಣ ತೊರೆದು ಬಂದಿದ್ದರೂ, ಇನ್ನೂ ಅದರ ಛಾಯೆಯಿಂದ ಹೊರಬಂದಿಲ್ಲ ಎನ್ನುವದು ಖಚಿತವಾಯಿತು. ಆಗ, ನನ್ನೊಳಗೇ ಇರುವ 'ತತ್–ಸ್ವರೂಪದ' ಆ ಕರಣ ಸಂರಚನೆಯಲ್ಲಿ ನನ್ನನ್ನು ಇರಿಸಿಕೊಳ್ಳಬೇಕಾಗಿದೆ ಎನ್ನುವದು ಹೊಳೆಯಿತು. ಮನಾನುಭವದ ಹಂತದಿಂದ ಮುಕ್ತನಾಗಿ, ಚಿತ್–ಸ್ಪಂದಗೊಂಡಾಗ, ಓ! ಇದೇ ಅನುಭೂತಿ ಎನ್ನುವದು ಅರಿವಾಯಿತು. ನನ್ನೊಳಗೆ ಇರುವ 'ಅವನ'ಲ್ಲಿ ನನ್ನನ್ನು ತಲ್ಲೀನಗೊಳಿಸಿಕೊಂಡಲ್ಲಿ ಎಲ್ಲವೂ ಸುಗಮ. ಎಲ್ಲವೂ ಸರಳ.

ಧ್ಯಾನದ ಸ್ಥಿತಿಯಲ್ಲಿದ್ದ ನನ್ನನ್ನು ನಾನೇ ಬಾಹ್ಯದಿಂದ ಕಾಣುತ್ತಿದ್ದೇನೆ. ನನ್ನ ಶಿರಸ್ಸಿಗಿಂತ ಊರ್ಧ್ವದಲ್ಲಿ ಮಹತಿಯ ಮುಖವೊಂದನ್ನು ಕಂಡೆ. ಅಮೃತತ್ವವೇ ಸಾಂದ್ರಗೊಂಡಿರುವ ಪರಿಪೂರ್ಣ ಘನಶಾಂತ ಚಿತ್ತದ ಮುಖವೊಂದು ಪೂರ್ತಿ ದರ್ಶವಾಯಿತು. ಆ ಸರ್ವಶಕ್ತನ ಅನಿಮೇಷ ದೃಷ್ಟಿಯ ಕೃಪೆಯು ಧಾರೆಗೊಳ್ಳುತ್ತಿರುವದನ್ನು ಕಂಡೆ. ಇದು ಘಟಿಸುತ್ತಿದೆ. ಹೌದು, ಹೌದು, ಇದನ್ನು ಸ್ಪಷ್ಟವಾಗಿಯೇ ಅದನ್ನೇ ಕಾಣುತ್ತಿದ್ದೇನೆ. ಆ ಪರಮೇಶ್ವರನ ಆ ವ್ಯಾಪ್ತ ವೈರಾಜ್ಯದೊಳಗೆ ಮಂಡಳದ ಛಂದ ತುಂಬಿಕೊಂಡಿದೆ. ಆ ತೇಜತ್ವವು ತೋಷದುಂಬಿಕೊಂಡು ಕೇಶದೋಪಾದಿಯಲ್ಲಿ ಮಿಲನಗೊಂಡಿವೆ. ಈ ಲೋಕವೇ 'ಅವನ' ಹೃದಯವಾಗಿ ಸ್ಪಂದಗೊಳ್ಳುತ್ತಿದೆ. ಅಲ್ಲಿಂದಲೇ ಮೃದು ಮಂದ್ರ ಅನಿಲ ಸಲಿಲಗೊಂಡು ಜೀವದ್ರವ್ಯವಾಗುತ್ತಿದೆ. ವಿಶ್ವಕ್ಕೆಲ್ಲ ಪ್ರಾಣವನ್ನು ಊಡುತ್ತಿರುವ ಇದು ನೀಲವರ್ಣದಲ್ಲಿದೆ, ಇದೇಕೆ ಹೀಗೆ? ನಾನೇ ಅರಿತುಕೊಳ್ಳಬೇಕಿದೆ. ಲೌಕಿಕ ಬದುಕಿನ ಮಹತಿಯನ್ನೆಲ್ಲವನ್ನೂ ಸೂಕ್ತವಾಗಿಯೇ ದಾಖಲಿಸಿದ ಪಾಶ್ಚಾತ್ಯ ಚಿಂತನಗಳಲ್ಲಿ ಈ ರೀತಿಯ ಆಂತರ್ಯ ಶೋಧೆ ಏಕಿಲ್ಲ? ಹೀಗಾಗಿಯೇ ಇದು ಸಾಂಸ್ಕೃತಿಕ ಆಘಾತಗಳಿಗೆ ಪಕ್ಕಾಗಿ ಪಕ್ಕಾಗಿ ಧಕ್ಕೆಗೊಳ್ಳುತ್ತಾ ಸಾಗುತ್ತಿದೆಯೇ? ಬಾಹ್ಯ ಬದುಕಿನ ಭವ್ಯತ್ವಕ್ಕಿಂತ ಅಂತರಂಗದ ದಿವ್ಯತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವ ಪಥದಲ್ಲಿ, ರಾಷ್ಟ್ರದ ವಿಶಾಲತೆ ಅಗತ್ಯವೇ? ಆಕಾಶದ ಅಪರಂಪಾರ ವಿಸ್ತಾರ, ಅಲ್ಲೆಲ್ಲ ನಿತ್ಯ ಮಿನುಗುತ್ತಿರುವ ತಾರೆ ತಾರೆಗಳ ಗುಚ್ಛಗಳೇ ಇದ್ದರೂ ಕತ್ತಲೆಯೇ ಅಧಿಕಾಧಿಕವಾಗಿದೆಯಲ್ಲ...

ಅಂದರೆ ತಮದ ಅರ್ಣವದಲ್ಲಿ ಈ ಬೆಳಕಿನ ಪುಂಜಗಳು ಕೇವಲ ದ್ವೀಪಗಳೇ? ಏನೆಲ್ಲಾ ವಿಚಾರಗಳು. ಕಲ್ಪನೆಗಳು. ಎಲ್ಲವೂ ಅಸ್ಪಷ್ಟ. ಆದರೆ ಅವುಗಳ ಮಧ್ಯದಲ್ಲಿಯೇ ಪಥವೂ ಇದೆಯಲ್ಲವೇ? ಯಾರಿಗಾಗಿ ಈ ಪಥವಿದೆ? ಪಥವಿದೆ ಎಂದು ಕಾಣಲೂ ಸಾಧ್ಯವಿಲ್ಲದ ಅಹಂಕಾರದಲ್ಲಿಯೇ ಮುಳುಗಿ ಅದೇ ಬದುಕು ಎಂದುಕೊಂಡು, ತಮ್ಮನ್ನು ತಾವೇ ಹುಗಿದುಕೊಂಡವರಿಗೆ ಇದು ಕಾಣುವದೇ ಇಲ್ಲವೇ? ಇಲ್ಲವೆಂದಾದಲ್ಲಿ ಇವರೆಲ್ಲರ ಅಸ್ತಿತ್ವವಾದರೂ ಯಾವ ಉದ್ದೇಶಕ್ಕಾಗಿ?

ಅಲೀಪುರ ಸೆರೆಮನೆಯ ಏಕಾಂತ ನನಗೆ ದೊರೆತದ್ದು ಈ ಬೆಳಕಿನ ಪುಂಜದೆಡೆಗೆ ಸಾಗುವ ಸಲುವಾಗಿ, ಅದೂ ಏಕಾಕಿಯಾಗಿ ಸಾಗಬೇಕೆಂದೇ ಅನುಭವವನ್ನು ರೂಪಿಸಲು ಘಟಿಸಿತೇ? ಅಲ್ಲದ್ದಾಗ ಗೀತೆಯನ್ನು ಓದಿದೆ, ಓದಿದೆ ಎನ್ನುವದಕ್ಕಿಂತ ಅನುಸಂಧಾನಿಸಿದೆ ಎಂದರೆ ಸರಿಯಾದೀತು. ಅದನ್ನು ಕೇವಲ ಕಾವ್ಯವೆಂದೋ ಅಥವಾ ಆಧ್ಯಾತ್ಮಿಕ ವಿಷಯವನ್ನು ಕಾವ್ಯಾತ್ಮಕವಾಗಿ ಬೋಧಿಸುತ್ತದೆ ಎಂದೋ ಓದುವಂತಿಲ್ಲ. ಪಾಶ್ಚಾತ್ಯ ಕಾವ್ಯಗಳನ್ನು – ಅವು ನಮ್ಮ ಆತ್ಮಿಕ ವಿಷಯಗಳಿಂತ ವಿಭಿನ್ನ ನೆಲೆಯಲ್ಲಿಯೇ ರೂಪುಗೊಂಡಿರುವದರಿಂದ – ಅದೇ ಚಿಂತನಾ ಪರಂಪರೆಯಲ್ಲಿ ಅಥವಾ ರಕ್ತ ಕಣಗಳಲ್ಲಿ ರೂಪಾಂತರಣಗೊಂಡು ಚಿತ್ತದಲ್ಲಿ ನೆಲೆಸಿ ಸಂಕೇತವಾಗಿರುವ ಹಾಗೆ, ಬೇರೆ ಸಾಂಸ್ಕೃತಿಕ ನೆಲೆಯಲ್ಲಿ ಅನುಸಂಧಾನಿಸುವದು ಸವಾಲಿನ ವಿಷಯವೇ? ನಮ್ಮ ಬೇರುಗಳಲ್ಲಿ ದೊರೆಯುತ್ತಿರುವ ನಮ್ಮದೇ ಮೂಲದ ಸಮೃದ್ಧ ಜೀವದ್ರವ್ಯವು, ಸಹಜವಾಗಿಯೇ ಪಲ್ಲವಗಳಲ್ಲಿ, ಪುಷ್ಪಗಳಲ್ಲಿ ಮತ್ತೆ ಮತ್ತೆ ರೂಪಾಂತರಣಗೊಳ್ಳುತ್ತ ವಿಕಾಸವಾಗುತ್ತದೆ. ದಶಾವತಾರದ ಆಂತರ್ಯ ಇದೇ ಆಗಿದೆಯಲ್ಲವೇ? ಗೀತೆಯನ್ನು ಅನುಸಂಧಾನಿಸುತ್ತ ಸಾಗಿದಂತೆ, ಈ ಭಾವ ದಟ್ಟವಾಗತೊಡಗಿತ್ತು. ಅಲೀಪುರ ಜೇಲಿನಲ್ಲಿ ಶ್ರೀ ಕೃಷ್ಣ ಬೋಧಿಸಿದ್ದು ಇದನ್ನೇ ಅಲ್ಲವೇ? ಹೊರಬಂದ ನಂತರವೂ ಇಡೀ ರಾಷ್ಟ್ರದ ಪ್ರಜ್ಞೆ ಜೊತೆಗೆ ಅದರ ಸ್ಥಿತಿ ಎಲ್ಲವೂ ಅಬ್ಬರದ ಕುಳಿರಿನಲ್ಲಿ ಸಿಲುಕಿದೆ, ನಾನೂ ಅದಕ್ಕೆ ಪಕ್ಕಾಗಬೇಕಾಯಿತು, ನನ್ನ ಸುತ್ತಲೇ ಆ ವಾಯು ಮಂಡಳವೂ ಅಪ್ಪಳಿಸಿ ಅಪ್ಪಳಿಸಿ ತಿರುಗಣೆಯೊಳಗೇ ಸಿಲುಕಿಸುವಂತಿದೆ. ಆ ಶೃಂಗ ತಾಣ ಒಂದು ಕಡೆ, ಬಂಜರಿನ ಮರುಧರೆಯು ಮತ್ತೊಂದು ಕಡೆಗೆ. ನಾನು ಯಾವ ಕಡೆಗೆ ಚಲಿಸಿದರೂ, ನನ್ನ ಜೊತೆಗೆ ಬರುವರಾರು?

ಅದೂ ಆರೋಹಗೊಂಡು ಸಾಗಬೇಕಿದೆ ಎಂದರೆ ಯಾರೂ ಸಿಗುವದೇ ಇಲ್ಲವೆ? ಏಕೆ? ಏಕೆ? ಹೀಗಿದೆ, ಪಾದಯಾತ್ರಿಯಾಗಿಯೇ ಮುಂದುವರೆದು,

ಶಿಖರಗಳನ್ನು ಏರಿ ದಾಟಿ, ಇದೀಗ ಹಿಮಯಾತ್ರಿಯಾಗುವಾಗಲಂತೂ ಯಾರೂ ಯಾರೂ ಬರುವದಿಲ್ಲ!? ಆದರೆ ಇವರೆಲ್ಲರೂ ನನ್ನನ್ನು ಅವರ ನಗರಗಳ ಕ್ಷೀಣ ಆವರ್ತದೊಳಗೆ ಸಿಲುಕಿಸಿಕೊಂಡು ಅವರ ಮಾರ್ಗದರ್ಶಕನಾಗಬೇಕೆಂದು ಹಂಬಲಿಸುತ್ತಿದ್ದಾರೆ. ಅವರ ಈ ರಾಗಗಳೆಲ್ಲವೂ ನನಗೆ ಗೋಡೆಗಳಾಗುತ್ತಿವೆ, ಅವುಗಳ ಇಡುಕು ಇಡುಕು ಜಾಗವೇ ನನಗೆ ಅಧಿವಾಸವಾಗಬೇಕೆಂದು ಅವರ ಒತ್ತಾಯವಿದೆ.

ಆದರೆ ನನ್ನ ಸಲುವಾಗಿ ಆ ದೇವನು ಅದೋ ಅದೋ ಊರ್ಧ್ವದಲ್ಲಿ ನೆಲೆ ನಿಂತು, ಆ ವ್ಯೋಮನೀಲದೊಳಗೆ ನೀಲವಾಗಿ ಆಹ್ವಾನ ಕೊಡುತ್ತಿದ್ದಾನೆ. ಆದರೆ ಈ ಜನರ ಈ ಬಿರುಗಾಳಿ ಮಾತ್ರ ಚಂಡಮಾರುತವಾಗಿ ನನ್ನ ಪಥದಲ್ಲಿ ಪ್ರತಿಕೂಲವಾಗಿ ತಡೆಯೊಡ್ಡುತ್ತಿದೆ. ಆದರೆ ಇವುಗಳ ಮಧ್ಯದಲ್ಲಿಯೇ ನಾನು ಸಾಗಿ ಏಕಾಂತ ಘನವನ್ನು ಪಡೆದುಕೊಳ್ಳಬೇಕಿದೆ. ಅದಕ್ಕಾಗಿ ನನ್ನ ಕ್ಷೇತ್ರದಲ್ಲಿಯೇ ಏಕಾಂತ ಘನದೊಡನೆ ಕ್ರೀಡೆಗೊಳ್ಳಬೇಕಿದೆ. ನಾನು ಈ ರೀತಿಯಲ್ಲಿ ದುರ್ಗತಿಯಲ್ಲಿದ್ದಾಗ ಮಾತ್ರವೇ ದೇವನ ಒಸುಗೆ ದೊರಕುತ್ತದೆ. ನಿತ್ಯತ್ವದಾ ಅನಂತತೆಯ ಸುವ್ಯಾಪ್ತದಲ್ಲಿ ಜೀವಿಸುವವರು ಯಾರು? ಮುಕ್ತತ್ವದುಸಿರು ಪಡೆದುಕೊಳ್ಳುವವರು ಯಾರು? ಮುಂದಿನ ಕ್ಷಣದೊಳಗೇ ನಾನು ಹಂಬಲಿಸುತ್ತಿದ್ದ ಪ್ರಶಾಂತತೆ ಪ್ರಾಪ್ತವಾಯಿತು ಎಂದು ತೋರುತ್ತದೆ, ಇಲ್ಲಿ ಪವನದ ವಹನವೊಂದು ಸೂಕ್ಷ್ಮವಾಗಿ ಸುಳಿದು ನನ್ನನ್ನು ರಕ್ಷಿಸುವ ಆವರಣವಾಗಿಯೇ, ಆ ಊರ್ಧ್ವತಾಣದೆಡೆಗೆ ಆರೋಹಗೊಳ್ಳುವಂತೆ ಉಳಿಯಿತು.

ಇಲ್ಲಿ ನಾನು ಕಾಣುತ್ತಿರುವದಾದರೂ ಏನು? ಆ ಉಗ್ರ ಚಂಡಮಾರುತಕ್ಕೆ ಜೊತೆಗೆ ಆ ಔನ್ನತ್ಯದಲ್ಲಿರುವ ಶಿಖರಕ್ಕೆ ನಾನೇ ಒಡೆಯನಾಗಿದ್ದೇನೆ. ಮುಕ್ತತ್ವದಾತ್ಮದ ಗರಿಮೆಯ ಜೊತೆಗೆ ನನಗೂ ವಾಸಕ್ಕೆ ಅನುವು ದೊರೆಯುತ್ತಿದೆ, ಸಮಗ್ರತೆಯಲ್ಲಿ 'ಅವನಿದ್ದರೆ', ಸಹಜವಾಗಿ ಎದುರಾಗಬಹುದಾದ ಭೀತ ಘಳಿಗೆಗಳಲ್ಲಿ 'ಅವನು' ಸ್ವಜನ ಬಂಧುವಾಗುತ್ತಿದ್ದಾನೆ. ಅಂದರೆ ಈ ಭವಭಾವಕ್ಕೂ ಸಹಿತ ಅವನು ನಿತ್ಯ ಸಹಯಾನಿಯಾಗಿಯೇ ಇರುತ್ತಾನೆ ಎನ್ನುವದು ಸ್ಪಷ್ಟವಾಯಿತು. ಇದೆಲ್ಲವನ್ನು ಭೌತಿಕವಾಗಿ ಅನುಭವಕ್ಕೆ ಬಂದರೆ ಮಾತ್ರ ವಿಜ್ಞಾನ ಒಪ್ಪುತ್ತೇನೆ ಎನ್ನುತ್ತಿದೆ, ಆದರೆ ಇದೆಲ್ಲವನ್ನೂ ಮನಸ್ಸಿನ ಮೂಲಕವೇ, ಅದರ ಹಲವು ಆಯಾಮಗಳಲ್ಲಿಯೇ ನಾವು ಪಡೆದುಕೊಳ್ಳಬೇಕು ಎನ್ನುತ್ತಿದ್ದ ಲೇಲೇ ಅವರ ಜೊತೆಗೆ ನಡೆಸಿದ ಸಂಭಾಷಣೆ ಸ್ಮರಣೆಗೆ ಬಂದಿತು. ಅವರು ಹೇಳಿದ್ದು ಮೂರು ಸೂತ್ರಗಳನ್ನು. 'ಮೊದಲು ಮನಸ್ಸನ್ನು ಶಾಂತಗೊಳಿಸು', ಈ ಪ್ರಶಾಂತ ಘನದ ಹಂತವೇ ನಿರ್ಗುಣ ಬ್ರಹ್ಮ

ಚೇತನದ ಸಾಕ್ಷಾತ್ಕಾರ. ಎರಡನೇ ವಿಷಯವೆಂದರೆ, ಮನಸ್ಸಿನ ಹೊರಾವಣದ ಹಂತದಲ್ಲಿದ್ದುಕೊಂಡೆ ಬರೆಯಬೇಡ ಮತ್ತು ಮಾತನಾಡಬೇಡ, ಮೂರನೆಯದು, ಮೃಣ್ಮಯದ ಹಂತದಲ್ಲಿ ಇರುವ ಸ್ವಭಾವವನ್ನು ಔನ್ನತ್ಯ ನೆಲೆಯ ಸ್ವಭಾವವನ್ನಾಗಿಸಿಕೊ, ಈ ರೀತಿಯಲ್ಲಿ ಸಾಧನೆ ಮುಂದುವರೆಸಿದಲ್ಲಿ, ಆಗ ಆ ಅಧಿಚೇತನದ ಮೂಲಕವೇ ಎಲ್ಲ ಆಧ್ಯಾತ್ಮಿಕ ಸಂಗತಿಗಳೂ ಸುಲಲಿತವಾಗಿ ಘಟಿಸುತ್ತವೆ. ಏಕೆಂದರೆ ಅವೆಲ್ಲ ಆ ದಿವ್ಯ ಅಧಿ ಚೇತನದಿಂದಲೇ ಮಾರ್ಗದರ್ಶನ ಪಡೆದುಕೊಳ್ಳುತ್ತ ಇರುತ್ತವೆ. ಆದರೆ, ಇದು ಸಾಧನೆಯ ಪಥದಲ್ಲಿ ಇದು ಕೇವಲ ಪ್ರಥಮ ಹೆಜ್ಜೆ ಎಂದು ಆಗ ನನಗೂ ಗೊತ್ತಿರಲಿಲ್ಲ, ಪ್ರಾಯಃ ಲೇಲೇಯವರಿಗೂ ಗೊತ್ತಿರಲಿಲ್ಲ ಎನಿಸುತ್ತಿದೆ.

**

ಬಂಗಾಲ ವಿಭಜನೆಗೆ ಮೂಲ ಕಾರಣನಾದ ಲಾರ್ಡ ಕರ್ಝನ್ ಅದನ್ನು ಘೋಷಿಸಿದ ತಕ್ಷಣವೇ ದೇಶಾದ್ಯಂತ ವಿರೋಧ ವ್ಯಕ್ತವಾಗಿತ್ತು. ಬಡೋದಾದಲ್ಲಿಯೂ ಸಹಿತ ಅದನ್ನು ವಿರೋಧಿಸಲು ಸೇರಿದ ಸಭೆಯಲ್ಲಿ ಭಾಗವಹಿಸಿದ್ದು ಇನ್ನೂ ನೆನಪಿದೆ. ಆದರೆ ಅಲ್ಲಿ ನಾನು ಏನನ್ನೂ ಮಾತನಾಡಿರಲಿಲ್ಲ. ಬಡೋದಾದಲ್ಲಿರುವ ಬೆಂಗಾಲಿ ಸಮುದಾಯಕ್ಕೆ ಪೂರ್ಣ ಬೆಂಬಲ ನೀಡಿದ್ದೆ. ಯಾವುದೇ ರೀತಿಯಲ್ಲಿಯೂ ಬ್ರಿಟೀಷರ ಸಂಗಡ ರಾಜೀ ಆಗಬೇಡಿ ಎಂದೇ ತಿಳಿಸಿದ್ದೆ. ಅದನ್ನು ಬರೆದು ಪ್ರಕಟಿಸಲು ಬಂಗಾಲಕ್ಕೂ ಕಳಿಸಿದ್ದೆ. ಆದರೆ ಅದು ಪ್ರಕಟವಾಗಲಿಲ್ಲ, ಪ್ರಾಯಃ ಬ್ರಿಟೀಷ ಸರಕಾರಕ್ಕೆ ಅವರು ಹೆದರಿರಬೇಕು, ಆದರೆ ಮರಾಠಿ ಯುವ ಬಂಧುವೊಬ್ಬರು ಅದನ್ನು ರಾತ್ರೋರಾತ್ರಿ ಮೊಳೆ ಜೋಡಿಸಿ, ಒಂದು ಸಾವಿರ ಪ್ರತಿ ಮುದ್ರಿಸಿ, ಬೆಂಗಾಲಕ್ಕೆ ಕಳಿಸಿದ್ದರು. ಇದು ಬಂಗಾಲ ಜನತೆಯಲ್ಲಿ ಮತ್ತೂ ರೋಷವನ್ನು ಹೆಚ್ಚಿಸಿತ್ತು.

ಕಳೆದ ವರ್ಷದಲ್ಲಿ ಅಲ್ಲವೇ ಹೆನ್ರಿ ಡಬ್ಲ್ಯು. ನೆವಿಸನ್ 'ಬಂಗಾಲ ವಿಭಜನೆಯನ್ನು ಅರವಿಂದ ಘೋಷ ಒಂದು ವರದಾನದಂತೆ ಕಂಡರು, ಮಲಗಿದ್ದ ಜನತೆಯನ್ನು ಬಡಿದೆಚ್ಚರಿಸಲು ಜೊತೆಗೆ ಹೋರಾಟಕ್ಕೆ ಧುಮುಕಲು ಪ್ರೇರೇಪಣೆ ನೀಡಿದರು' ಎಂದೇ ಬರೆದಿದ್ದರಲ್ಲವೇ? ಆಗ ಹೋರಾಟ ಎಷ್ಟು ತೀವ್ರವಾಗಿತ್ತು ಎಂದರೆ, ಬ್ರಿಟೀಷ ಸರಕಾರ ತನ್ನ ನಿರ್ಣಯದಿಂದ ಹಿಂದೆ ಸರಿಯುಂತಾಗಿತ್ತು. ಅದಕ್ಕೆ ಮುಖ್ಯ ಕಾರಣ ವಿಭಜನೆಯ ವಿರೋಧದ ಜೊತೆಗೆ ಸಂಪೂರ್ಣ ಸ್ವಾತಂತ್ರ್ಯವೂ ಅಲ್ಲಿ ಮುಖ್ಯ ಧ್ವನಿಯಾಗಿತ್ತು.

ಇದೆಲ್ಲವನ್ನೂ ಜನ ಸಮುದಾಯಕ್ಕೆ ಹೇಗೆ ತಿಳಿಸುವದು? ವಿದ್ಯಾರ್ಥಿ ಕನ್ನಯ್ಯಲಾಲ ಮುನ್ಷಿ ಕೇಳಿದ್ದು ನೆನಪಾಯಿತು, "ನನ್ನಲ್ಲಿ ರಾಷ್ಟ್ರ ಭಕ್ತಿಯನ್ನು ಹೇಗೆ ವಿಕಾಸಗೊಳಿಸಿಕೊಳ್ಳಬೇಕು" ಎಂದವನ ಪ್ರಶ್ನೆ. ಇದು ಕೇವಲ ಅವನೊಬ್ಬನದೇ ಅಲ್ಲ, ಇಡೀ ಭಾರತದ ಎದುರಿಗಿರುವ ಪ್ರಶ್ನೆಯಾಗಿದೆ. ವಿದ್ಯಾರ್ಥಿ ಆದದ್ದಕ್ಕೆ ಪದಾರ್ಥ ಜ್ಞಾನದೊಂದಿಗೆ ಹೇಳಬೇಕಾಗಿತ್ತು, 'ನಿನ್ನ ಎದುರಿಗೆ ಇರುವ ಭಾರತದ ನಕಾಶವನ್ನು ಗಮನಿಸು. ಅದರಲ್ಲಿ ಅಂತರ್ಗತವಾಗಿರುವ ಭಾರತ ಮಾತೆಯನ್ನು ಗಮನಿಸು, ಅಲ್ಲಿ ಅಸ್ತಿತ್ವ ಪಡೆದಿರುವ ನಗರಗಳು, ಗುಡ್ಡಗಳು, ಪರ್ವತಗಳು, ನದಿಗಳು ಎಲ್ಲವೂ ಅವಳ ಸ್ವರೂಪವಾಗಿವೆ. ಈ ರಾಷ್ಟ್ರದ ಜನ ಸಮುದಾಯ ಅವಳ ಜೀವಕೋಶಗಳು. ಇಲ್ಲಿ ರೂಹುಗೊಂಡಿರುವ ಸಾಹಿತ್ಯ, ವೇದ, ಸ್ಮೃತಿಗಳೆಲ್ಲ ಅವಳ ಧ್ವನಿಗಳು. ಈ ಸಂಸ್ಕೃತಿ ಅವಳ ಆತ್ಮವಾಗಿದೆ. ಅವಳ ಸಂತಾನಕ್ಕೆ ಇರುವ ಸ್ವಾತಂತ್ರ್ಯ ಮತ್ತು ಸಂತೊಷವೇ ಅವಳ ಸ್ವಾತಂತ್ರ್ಯವೂ ಆಗಿದೆ. ನೀನು ನಿನ್ನ ತಾಯಿಯನ್ನು ಹೇಗೆ ಗೌರವಿಸುತ್ತೀಯೋ ಹಾಗೆ ಭಾರತ ಮಾತೆಯನ್ನೂ ಗೌರವಿಸಬೇಕು', 'ನವಧಾ–ಭಕ್ತಿಯ ಆರಾಧನೆಯಲ್ಲಿಯೇ ಭಾರತ ಮಾತೆಯನ್ನೂ ಆರಾಧಿಸು ಎಂದ ಮಾತು, ಇದೀಗ ಜನ ಸಮುದಾಯಕ್ಕೂ ತಿಳಿಸಬೇಕಾಗಿದೆ. ಭಾರತ ಮಾತೆ ಎಂದರೆ ಕೇವಲ ಭೂಮಿಯ ಒಂದು ಶುಷ್ಕವಾದ ತುಣುಕಂತೂ ಅಲ್ಲವೇ ಅಲ್ಲ, ಅವಳು ನಿತ್ಯ ನಿರಂತರತೆಯಲ್ಲಿರುವ ಸತ್ಯವಾಗಿದ್ದಾಳೆ.'

ನನ್ನ ಅಂತರಂಗದಲ್ಲಿ ಈ ವಿಷಯದ ಕುರಿತು ನಿಖರವಾದ ರೂಪವೊಂದು ಅಚ್ಚೊತ್ತಿದೆ. ನಾನೂ ಸಹಿತ ಭಾರತ ಮಾತೆಯ ಅಂಶವೇ ಆಗಿರುವದರಿಂದ, ನಾನೇ ಭಾರತ ಮಾತೆಯೂ ಹೌದು! ಅವಳ ಚೇತನವೇ ನನ್ನ ಚೇತನವಾಗಿದೆ. ನಾನೇನೇ ಮಾತನಾಡಿದರೂ ಅದು ಅವಳದೇ ಭಾವದಿಂದ ಪೂರಣಗೊಂಡಿದೆ. ನನ್ನಲ್ಲಿ ಇರುವ ಬಲವೆಲ್ಲವೂ ಅವಳ ಬಲವೇ ಆಗಿದೆ. ಮಾತೃಭೂಮಿ ಎನ್ನುವದೇನೂ ಕೇವಲ ಮನಃಕಲ್ಪಿತವಾದ ವಸ್ತುವಲ್ಲ; ಕೋಟ್ಯಾಂತರ ಜನ ಸಮುದಾಯದ – ಭಾರತ ಮಾತೆಯ ಪುತ್ರರ – ಸಾಮರ್ಥ್ಯದ ಪ್ರತೀಕವಾಗಿದೆ. ಇದನ್ನು ಹಿಂದೂ ಎಂದಾದರೂ ಕರೆಯಲಿ ಅಥವಾ ಭವಾನೀ ಭಾರತೀ ಎಂದಾದರೂ ಕರೆಯಲಿ, ಒಟ್ಟಿನಲ್ಲಿ ಅಲ್ಲಿ ಏಕತೆಯೇ ಅಸ್ಮಿತೆಯಾಗಿರುತ್ತದೆ. ಆದರೆ ಈ ಶಕ್ತಿಯು ಇದೀಗ ತಮಸ್ಸಿನ ಪ್ರಭಾವಕ್ಕೆ ಒಳಗಾಗಿ ಕಳೆಗುಂದಿದಂತೆ ಇದೆ.

ನಮ್ಮ ದೇಶದ ಜನ ಸಮುದಾಯ ಜ್ಞಾನದಲ್ಲಿ ಅಪಾರ ಪ್ರಾವಿಣ್ಯತೆಯನ್ನು ಹೊಂದಿದ್ದಾರೆ, ಅನುಭವದ ಕಣಜವೇ ಆಗಿದ್ದಾರೆ, ಆದರೆ ಏನು ಮಾಡುವದು?

ವಯೋ ಸಹಜ ದೌರ್ಬಲ್ಯದಿಂದ ಬಳಲುತ್ತಿದೆ. ಹೀಗಾಗಿ ಕ್ರಿಯೆ ಕಾಣುತ್ತಿಲ್ಲ, ಇದನ್ನು ದೂರಮಾಡಬೇಕೆಂದರೆ, ಈ ಹಿಂದೂ ಭಾವ ಮತ್ತೆ ಯುವ ಶಕ್ತಿಯ ಬಲವನ್ನು ಮರುತಂದುಕೊಳ್ಳಬೇಕಿದೆ. ಆ ಮೂಲಕ ಭಾರತ ಮಾತೆಯ ಸಾಮರ್ಥ್ಯವನ್ನು ವ್ಯಾಪ್ತಗೊಳಿಸಬೇಕಿದೆ. ಇದೀಗ ಭಾರತಕ್ಕೆ ಅವಶ್ಯವಿರುವದು ತರುಣರು ಮತ್ತು ಪರಾಕ್ರಮ. ಶಕ್ತಿಯ ಸಾಹಚರ್ಯವಿರದೇ ಭಕ್ತಿ ಮತ್ತು ಕರ್ಮಗಳು ಇದ್ದೂ ಸತ್ತಂತೆಯೇ ಸರಿ. ಈಗ ಭಾರತಕ್ಕೆ ಅವಶ್ಯವಿರುವದು, ಅತ್ಯಾವಶ್ಯವಿರುವದು ಶಕ್ತಿ; ಶಕ್ತಿ; ಶಕ್ತಿ. ದೈಹಿಕ, ಮಾನಸಿಕ, ಆಧ್ಯಾತ್ಮಿಕ ಮತ್ತು ನೈತಿಕ ಶಕ್ತಿ ಸಾಮರ್ಥ್ಯ ಬೇಕಿದೆ. ಇದನ್ನೇ ಭಾರತ ಮಾತೆಯ ಹತ್ತಿರ ಪ್ರಶ್ನಿಸಿದೆ, ಅದಕ್ಕೆ ಅವಳು, 'ನನ್ನ ಈ ವಿಶ್ವದಲ್ಲಿ ಅನಂತಾನಂತವಾಗಿರುವ ಶಕ್ತಿ ಇದೆ. ನಾನು ಈ ಲೋಕಮಾತೆಯಾಗಿದ್ದೇನೆ. ನೀವೆಲ್ಲ ಈ ಆಯಾವರ್ತದ ನಾಡಿನ ಪುತ್ರರು. ಈ ಮಣ್ಣು ನಿಮಗೆ ಜನ್ಮ ಕೊಟ್ಟಿದೆ. ಇಲ್ಲಿ ಸೂರ್ಯಪ್ರಕಾಶ, ಇಲ್ಲಿನ ಹವೆ ನಿಮಗೆ ಪ್ರಾಣಶಕ್ತಿಯನ್ನೂ ಕೊಟ್ಟಿದೆ. ಇದಕ್ಕೆಲ್ಲ ಕಾರಣ, ನಾನು ಈ ಲೋಕದ ಮಾತೆಯಾಗಿದ್ದೇನೆ,' ಎನ್ನುವ ಅವಳ ನಾದವನ್ನು ನಾವೀಗ ಕೇಳಲೇಬೇಕಾಗಿದೆ. ಅವಳ ಈ ಆಹ್ವಾನವನ್ನು ನಾವೆಲ್ಲ ಸ್ವೀಕರಿಸಲೇಬೇಕಾಗಿದೆ. ತನ್ನನ್ನು ತಾನೇ ಈ ಮೂಲಕ ಅಭಿವ್ಯಕ್ತಗೊಳಿಸಿಕೊಳ್ಳಲು ಅವಳೂ ತವಕದಲ್ಲಿದ್ದಾಳೆ. ಹೀಗಾಗಿ ಅವಳನ್ನು ಆರಾಧಿಸುವ ಸಲುವಾಗಿ ಕಾರ್ಯಪ್ರವೃತ್ತರಾಗಬೇಕಿದೆ. ಅವಳು ನಿಷ್ಕ್ರಿಯಳಾದಂತೆ ಕಾಣುತ್ತಿರುವದಕ್ಕೆ ಕಾರಣ, ನಮ್ಮ ಆತ್ಮದಲ್ಲಿ ನೆಲೆಸಿರುವ ದೇವನ ಸುತ್ತಲೂ ನಾವೇ ತಮವನ್ನು ತುಂಬಿಸಿಕೊಂಡು, ದೇವನನ್ನೂ ಹುದುಗಿಸಿದ್ದೇವೆ. ಈಗಿದೋ ಅಲ್ಲಿ ಭವಾನೀ ಭಾರತಿಯನ್ನು ಆಹ್ವಾನಿಸಿ, ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡು, ಅಲ್ಲಿ ಕವಿದರುವ ತಮವನ್ನು ಕರಗಿಸಿಕೊಳ್ಳಬೇಕಿದೆ. ಆತ್ಮದ ಮೇಲೆ ಇರುವ ಗವಸನ್ನು ಕಿತ್ತೊಗೆಯಬೇಕಿದೆ. ಸೋಮಾರಿತನದಲ್ಲಿ ರೂಪಗೊಂಡ ಗೋಡೆಗಳನ್ನು ಹುಟಿಗಟ್ಟಿಸಬೇಕಾಗಿದೆ. ಪ್ರಜ್ಞಾಪೂರ್ವಕವಾಗಿ ಭಾರತ ಮಾತೆ ಈ ಕರೆಗೆ ನಮ್ಮನ್ನು ತೊಡಗಿಸಿಕೊಳ್ಳಬೇಕಿದೆ. ಪ್ರತಿಯೊಂದು ಮಾತು, ಕೃತಿ, ಉಸಿರು, ಸಂಪತ್ತು ಜೊತೆಗೆ ಸಾಮರ್ಥ್ಯ ಎಲ್ಲವನ್ನೂ ಸಮರ್ಪಿಸಿ, ಅವಳು ಮತ್ತೆ ನಮ್ಮನ್ನು ತೊರೆದು ಹೋಗದಂತೆ ಕಾರ್ಯನಿರತರಾಗಬೇಕಿದೆ. ಭಾರತೀಯ ಮನೋಚೇತನಕ್ಕೆ ಈ ರೀತಿಯ ಸಮರ್ಪಣೆಯೇನೂ ಹೊಸದಲ್ಲ, ಆದರೆ, ಆದರೆ, ರಾಷ್ಟ್ರದ ಪರಿಕಲ್ಪನೆಯಲ್ಲಿ ಮಾತ್ರ ಹಿಂದೆ ಇದ್ದಾರೆ. ಆದರೂ ಭಾರತ ಮಾತೆಯು ತನ್ನ ಮಕ್ಕಳನನು ರಕ್ಷಿಸಲು ಸದಾ ಸಿದ್ಧಳಾಗಿಯೇ ಇದ್ದಾಳೆ. ಇಂತಹ ಅವಕಾಶ

ಶೀಘ್ರವಾಗಿ ಬಂದಲ್ಲಿ, ಭಾರತವು ಮತ್ತೆ ತನ್ನ ಪ್ರಾಚೀನ ವೈಭವದ ಉತ್ತುಂಗವನ್ನು ಕಾಣಲು ಸಾಧ್ಯವಾಗುತ್ತದೆ.

ಈ ದಿನದ ಯೋಗದ ಅನುಷ್ಠಾನಕ್ಕಾಗಿ ಸಿದ್ಧನಾದೆ. ಈ ನಿಮಂತ್ರಣವಾದರೂ ಎಲ್ಲಿಂದ ಬರುತ್ತಿದೆ? ನನಗೊಬ್ಬನಿಗೇ ಮಾತ್ರ ಇದು ರೂಪಿತವಾಗಿದೆಯೇ? ನಮ್ಮ ಚಿಂತನಗಳಿಗೂ ನಮ್ಮ ಸುತ್ತಲೂ ಇರುವ ಪ್ರಕೃತಿಯ ಸೂಕ್ಷ್ಮಾತಿಸೂಕ್ಷ್ಮ ಘಟನೆಗಳಿಗೂ ಅವಿನಾಭಾವ ಸಂಬಂಧ ಇದೆ ಎನ್ನುವದನ್ನು ಯೋಗ ಸುಲಭದಲ್ಲಿ ಮನದಟ್ಟು ಮಾಡುತ್ತಿದೆ. ಈ ಅನುಭವವೇ ನನಗೆ ಅಲೀಪೂರ ಸೆರೆಮನೆಯಲ್ಲಿ ಮರ–ಗಿಡ–ಬಳ್ಳಿ–ಹಕ್ಕಿ–ಸೆರೆಮನೆಯಲ್ಲಿದ್ದ ಇತರರು, ಜೊತೆಗೆ ಕಾವಲು ಕಾಯುತ್ತಿದ್ದ ವ್ಯಕ್ತಿ, ಎಲ್ಲರೂ ಕೃಷ್ಣನಂತೆಯೇ ಕಂಡದ್ದು, ಮತ್ತೆ ಸ್ಮರಣೆಗೆ ಬಂದಿತು. ನನ್ನನ್ನು ವಿರೋಧಿಸುತ್ತಿದ್ದ ಸರಕಾರೀ ನ್ಯಾಯವಾದಿ, ನನ್ನ ವಿಚಾರಣೆ ನಡಿಸುತ್ತಿದ್ದ ನ್ಯಾಯಾಧೀಶ, ನನ್ನ ಪರವಾಗಿ ವಾದಿಸಲು ಬಂದ ರಾನಡೆ ಎಲ್ಲರೂ ಎಲ್ಲರೂ ಕೃಷ್ಣರೇ. ಅಂದರೆ ನಾನೂ ಸಹಿತ ಕೃಷ್ಣನೇ? ಎನ್ನುವ ಹಾಸವೂ ಒಂದು ಕ್ಷಣ ಮಿಂಚಿತು. ನನ್ನ ಕಲ್ಪನೆಗೆ ನನಗೇ ನಗು ಬಂದಂತಾಯಿತು. ತಕ್ಷಣ ಸುಧಾರಿಸಿಕೊಂಡು, ಧ್ಯಾನಕ್ಕೆ ಸಿದ್ಧನಾದೆ. ಅಂದರೆ, ಈಗ ಅನುಷ್ಠಾನಿಸುತ್ತಿರುವ ಸಾಧನಾ ಪಥದಲ್ಲಿ, ಇದೀಗ ಸ್ಪಷ್ಟವಾಗುತ್ತಿರುವ ವಿಷಯ, ನಾನು ಕಾಣಬೇಕೆಂದಿರುವ ಆ ಜಗತ್ತನ್ನು ನನ್ನಲ್ಲಿಯೇ ದೃಷ್ಟಿಸಿಕೊಳ್ಳಬೇಕಿದೆ. ಆದರೆ ಮುಖ್ಯವಾಗಿ **ಮೂವರು ದೇವತಾ ಸ್ವರೂಪದ ದಿವ್ಯಸ್ತ್ರೀ – ಮಂಡಲವು** ನನ್ನನ್ನು ಪಕ್ವಗೊಳಿಸಲು ಸದಾ ಸಿದ್ಧರಿದ್ದಾರೆ. ಇದನ್ನು ಮಂಡಲ ಎಂದು ಕರೆಯುತ್ತಿರುವದಕ್ಕೆ ಕಾರಣ ಈ ಮೂವರ ಮೂಲ ತ್ರಿಗುಣ ತತ್ತ್ವವಾಗಿ ಆತ್ಮಾಭಿಮಾನದ ಬಲ ತೇಜ ಸತ್ಯವಾಗಿ ದುರ್ಗಾ ಇದ್ದರೆ, ಸೌಭಾಗ್ಯದೊಡತಿಯಾಗಿ ಮಂಗಲದ ಧನ್ಯತೆಗೆ ಸಿರಿಲಕ್ಷ್ಮೀ ಮತ್ತು ಪ್ರಳಯಮುಖಿಯಾಗಿರುವ, ರುದ್ರ ತಾಂಡವದ ನೃತ್ಯಗೈಯುವ ಕಾಳಿ ಇದ್ದಾಳೆ. ಇವರೆಲ್ಲರ ಕೃಪೆ ನನಗಿರುವಲ್ಲಿ ಅಲ್ಲಿ ಯಾತನೆಯ ಘಾತ ಬರದು, ಹಿಂಸೆಯ ಗಾಳಿ ಬೀಸದು. ಪ್ರತಿಯೊಂದು ತಾರೆಯೂ ರಕ್ಷಣೆಗೆ ಬೆಳಕೀಯುತ್ತದೆ. ಏಕೆಂದರೆ ಅಲ್ಲಿಯೂ ಇರುವದು ಈ ಕಾಳಿ, ಅಲ್ಲಿ ಅಶುಭವೆಂದಿಗೂ ಬರುವದಿಲ್ಲ. ಕಪಟ ನಾಟಕದ ವಿದ್ರೋಹಗಳಿಗೆ ಅವಕಾಶವಾಗುವದಿಲ್ಲ. ಮೇಲ್ತೋರಿಕೆಯ ಪ್ರೇಮದ ಹಿಂದೆ ಅಡಗಿರುವ ಕ್ರೂರ ಹಗೆತನದ ದ್ವೇಷ ಅಲ್ಲಿ ಉಳಿಯಲು ಸಾಧ್ಯವಿಲ್ಲ. ಇಂತಹ ಪ್ರೇಮಪೂರ್ಣವಾದ ಮಧುರತೆಯ ಬೀಜವನ್ನು ನನ್ನ ಹೃದಯದಲ್ಲಿ ಶಾಶ್ವತಗೊಳಿಸಿಕೊಳ್ಳಬೇಕಿದೆ. ಅದಕ್ಕಾಗಿಯೇ ನನಗೆ ನಿಮಂತ್ರಣವನ್ನು ಇತ್ತು

ಶ್ರೀಮಾತೆ ಕರೆಸಿಕೊಂಡಿದ್ದಾಳೆ ಎನ್ನುವದೂ ಅರಿವಾಯಿತು. ಈ ಜಡದ ಸತತ ಸಾಂಗತ್ಯದಲ್ಲಿ ಸಿಲುಕಿಕೊಂಡಿರುವದಕ್ಕಿಂತ, ಕೇವಲ ಅನ್ನಮಯ, ಪ್ರಾಣಮಯ ಮತ್ತು ಮನೋಮಯ ಹಂತದಲ್ಲಿಯೇ ಉಳಿಯುದಕ್ಕಿಂತ, ಮತ್ತೂ ಆರೋಹಗೊಂಡು ವಿಜ್ಞಾನಮಯ ಕೋಶವನ್ನು ತಲುಪಬೇಕಾಗಿದೆ. ಅದರಾಚೆ ಇರುವ ಆನಂದಮಯ ಮತ್ತು ಚಿನ್ಮಯ ಕೋಶದ ಜೊತೆಗೆ ಸ್ಪಂದಗೊಳ್ಳಬೇಕಿದೆ. ಮನುಕುಲದ ಪ್ರಚಲಿತ ವಿಕಾಸವನ್ನು ನೋಡಿದರೆ, 'ಮನೋಮಯಃ ಪ್ರಾಣ ಶರೀರ ನೇತಾ' ಎನ್ನುವ ಉಪನಿಷತ್ ವಾಣಿಯ ಸಾಕ್ಷಾತ್ಕಾರವಾಗುತ್ತದೆ.

ಮೊದಲನೇ ದೇವತೆ ಕಾನೂನು, ಅದು ಸುಸ್ಪಷ್ಟವಾದ ದೃಷ್ಟಿಯನ್ನು ಅಂದರೆ ಕಾಣ್ಕೆಯ ಹಂತದಲ್ಲಿಯೇ ಇದೆ. ಜೊತೆಗೆ ಪರಮ ಶೀತದ ಸ್ವಭಾವದಲ್ಲಿ ಬಹುತೇಕವಾಗಿ ಎಲ್ಲರೂ ದೂರವಿರಿಸುವ ಸ್ವಭಾವದಲ್ಲಿದ್ದರೂ, ಅವಳದೇ ನಿಗದಿತ ಅವಕಾಶದಲ್ಲಿ ಪರಮ ಶಕ್ತಿದಾಯಕಳಾಗಿದ್ದಾಳೆ, ಅಭಿಮಾನಧನಳಾಗಿದ್ದಾಳೆ ಅಷ್ಟೇ ದಿಟ್ಟತನದಿಂದಲೂ ಸ್ಥಿತಳಿದ್ದಾಳೆ. ಇನ್ನು ಎರಡನೆಯವಳೋ, ಉತ್ಸಾಹದ ಉಜ್ಜ್ವಲತೆಯ ಕಾಂತಿಯಲ್ಲಿ ಮಿನುಗುತ್ತಿದ್ದಾಳೆ, ಅವಳ ಹೃದಯದಲ್ಲಿ ಅಗ್ನಿ ಜ್ವಾಲೆ ಸದಾ ಪ್ರಜ್ವಲಿಸುತ್ತಿದೆ, ಆದರೆ ಅವಳ ಭ್ರುಕುಟಿಗಳ ಸುತ್ತ ಆ ತಮವು ಆವರಿಸುತ್ತಿದೆ, ಆದರೆ ಕ್ರಮೇಣ ಕ್ರಮೇಣ ಮುಂದೆ ಸಾಗುತ್ತಿದ್ದಂತೆಯೇ ಅದು ಕಳಾಹೀನವಾಗ–ತೊಡಗಿತು. ಅದರ ಪರಿಶೋಧಾತ್ಮಕವಾದ ಅನಿಮೇಷ ದೃಷ್ಟಿಯನ್ನು ಎದುರಿಸುವ ಸಾಮರ್ಥ್ಯ ಅವಳಲ್ಲಿ ಇಲ್ಲ. ಈ ಎಲ್ಲ ಚಿಂತನಗಳನ್ನೂ ಹುಟ್ಟು ಹಾಕಿದ ಆ ಪರಮಾತಿ ಪರಮ ಶೀತ ಪವನದ ಬಲವೂ ಅಲ್ಲಿಲ್ಲ. ನಮ್ಮ ಮನಸ್ಸುಗಳ ಮಜಲುಗಳನ್ನು ಪಾಲನೆ–ಪೋಷಣೆ ಮಾಡುತ್ತಿದ್ದರೂ, ಮಾನವನ ಹೃದಯಗಳನ್ನು ಕಲ್ಲಿನಂತೆ ಕಠಿಣಗೊಳಸುತ್ತಿದ್ದಾಳೆ. ಇದಕ್ಕೆ 'ವಿಜ್ಞಾನ'ವೆಂದು ಅವಳ ಹೆಸರನ್ನು ಕೊಟ್ಟುಕೊಂಡಿದ್ದೇವೆ. ಇದನ್ನೇ ಇನ್ನುಳಿದವರು 'ಮತ' ಎಂದು ಕರೆಯುತ್ತಿದ್ದಾರೆ. ತದನಂತರದಲ್ಲಿ ಬರುವ ಮೂರನೇವಳು ಎಂದರೆ, ಸಂಪೂರ್ಣವಾಗಿ ಗವಸಿನಲ್ಲಿಯೇ ಇದ್ದು, ಅಸ್ಪಷ್ಟತೆಯಲ್ಲಿಯೇ ಇದ್ದು, ದೂರ ದೂರದಲ್ಲಿ ದೃಷ್ಟಿಗೆ ಅಗೋಚರವಾಗಿ ಇದ್ದುಕೊಂಡು, ಈ ಜಗತ್ತಿನ ಮೇಲೆ ಯಾವುದೇ ರೀತಿಯ ಹಕ್ಕೂ ಇಲ್ಲದ ರೀತಿಯಲ್ಲಿ ನೆಲೆಸಿದ್ದಾಳೆ. ಆದರೆ ಯಾವಾಗಲೂ ತನ್ನದೇ ಸ್ವಯಂಪ್ರಕಾಶದಲ್ಲಿಯೇ ಸ್ಥಿತಗೊಂಡಿರುತ್ತಾಳೆ.

(ಸಶೇಷ)

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 17ನೇ ನವಂಬರ್ 2023 ಶುಕ್ರವಾರ "ಶ್ರೀಮಾತೆಯವರ ಮಹಾಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.30 ಗಂಟೆಯಿಂದ 7.50ರ ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಂಜೆ 5.00 ರಿಂದ 6.30 ಗಂಟೆಯವರೆಗೆ ಡಾ॥ ಅಜಿತ್ ಸಬ್ನೀಸ್‌ರವರು "The Road Alone" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

ದಿನಾಂಕ 24ನೇ ನವಂಬರ್ 2023 ಶುಕ್ರವಾರ "ಶ್ರೀ ಅರವಿಂದರ ಸಿದ್ಧಿ" ದಿನ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.30 ಗಂಟೆಯಿಂದ 7.50ರ ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಂಜೆ 5.15 ರಿಂದ 6.45 ಗಂಟೆಯವರೆಗೆ ಡಾ॥ ನಾಗೇಂದ್ರರವರು "The Siddhi day and its relevance to our life" ಎಂಬ ವಿಷಯ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

ಫೋಟೋ ಚಿತ್ರ ಪ್ರದರ್ಶನ "Indian Literature - Part II" ವಿಷಯವಾಗಿ ದಿನಾಂಕ 15ನೇ ನವಂಬರ್ 2023 ಇಂದ 20ನೇ ಜನವರಿ 2024ರ ವರೆಗೂ ಶ್ರೀ ಅರವಿಂದೋ ಸಂಕೀರ್ಣದ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದೆ.




ಫೋಟೊ: ಇಮೇಜಿಂಗ್ ಸಾವಿತ್ರಿ

ನಟರಾಜ

**– ಪುಟ್ಟು ಕುಲಕರ್ಣಿ**
**(ಪುಟ 16)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಭವವು ಶಿವಮಯವು

**– ಪುಟ್ಟು ಕುಲಕರ್ಣಿ**

**(ಪುಟ 9)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.